ಕರ್ಮವೀರ

ಹುಬ್ಬಳ್ಳಿ ತಾ. ೭-೩-೪

ಸಂಪುಟ ೨೦] [ಸಂಚಿಕೆ [illegible]

ಜನಪ್ರಿಯ ಸಚಿತ್ರ ವಾರಪತ್ರಿಕೆ

ಸಂಪಾದಕರು :
ಹ. ರಾ. ಪುರೋಹಿತ]

[ಸಂಸ್ಥಾಪಕರು :
ರಂ. ರಾ. ದಿವಾಕರ

- ಬಲ್ಲವರ ನುಡಿಗಳು -

● ಅನುಭವವೆಂಬದು ಪ್ರತಿಯೊಬ್ಬನೂ ತಾನು ಮಾಡಿದ ತಪ್ಪುಗಳಿಗೆ ಕೊಡುವ ಹೆಸರು !

—ಒಸ್ಕಾರ ವೈಲ್ಡ

● ಆಶಾವಾದದ ಅತಿಶಯ ಪ್ರದರ್ಶನವನ್ನು ಕಾಣಬೇಕಾದರೆ ಹುಚ್ಚರ ಆಸ್ಪತ್ರೆಗೆ ಹೋಗಬೇಕು.

—ಹೆವಲಕ್ ಎಲಿಸ್

● ಜ್ಞಾನವು ನಿರಪೇಕ್ಷ ಧ್ಯೇಯವಾಗಿರಬಲ್ಲದು. ಯಾವುದೇ ಬಗೆಯ ಜ್ಞಾನವೂ— ಅದು ನಿಜವಾದ ಜ್ಞಾನವಾಗಿದ್ದರೆ— ತನಗೆ ತಾನೇ ಸಾರ್ಥಕವಾಗಿಲ್ಲದು. ಮನುಷ್ಯನ ಮನಸ್ಸೇ ಆ ಬಗೆಯಾಗಿದೆ.

—ಕಾರ್ಡಿನಲ್ ನ್ಯೂಮನ್

● ಅನಿಶ್ಚಯವೇ ಸ್ವಭಾವವಾಗುಳ್ಳವನಿಗಿಂತ ತುಚ್ಛನು ಬೇರೊಬ್ಬನಿಲ್ಲ.

—ವಿಲಿಯಂ ಜೇಮ್ಸ



ಎಲಿಫೆಂಟಾದ ‘ಕಗ್ಗಲ್ಲ ಕಾವ್ಯ’

ಮುಂಬಯಿಯ ಸಮೀಪದಲ್ಲಿರುವ ಎಲಿಫೆಂಟಾ ಗುಹೆಯಲ್ಲಿ ಭಾರತೀಯ ಶಿಲ್ಪಕಲೆಯ ಅದ್ಭುತ ನಿದರ್ಶನಗಳನ್ನು ಕಾಣುತ್ತೇವೆ. ಪರ್ವತಪ್ರಾಯವಾದ ಬಂಡೆಗಲ್ಲನ್ನು ಕೊರೆದು ಸುಂದರ ಮಂದಿರವನ್ನು ನಿರ್ಮಿಸಲಾಗಿದೆ. ಮೇಲಿನದು ಎಲಿಫೆಂಟಾ ಗುಹಾಮುಖದ ಒಂದು ಸ್ತಂಭದ ಚಿತ್ರ

ಏಶಿಯನ್ ಐಕ್ಯದ ಕನಸು ನನಸಾದೀತೆ ?

—ಪುಟ ೫

ಚಿಕ್ಕಕತೆ

★

ಕಲೆಗಾಗಿ.....!

ಬರೆದವರು–
ವೀ. ಹುಟ್ಟಿವಾದಪ್ಪ

ಒಬ್ಬ ಆಂಗ್ಲ ಲೇಖಕ ಹೇಳಿದ್ದಾನೆ, "Forgetting is a virtue" ಎಂದು. ಆದರೆ ಆ ಹೇಳಿಕೆ ನನ್ನ ಮಟ್ಟಿಗೆ ಸಾಧುವೂ ಅಲ್ಲ, ಸಾಧ್ಯವೂ ಅಲ್ಲ. ನನಗೆ ಅಸಾಧಾರಣ ಜ್ಞಾಪಕ ಶಕ್ತಿ ಇದೆ ಎಂದು ನಾನು ಇಲ್ಲಿ ಕೊಚ್ಚಿಕೊಳ್ಳುತ್ತಿಲ್ಲ. ನಿನ್ನೆ ಓದಿದ ಪಾಠಗಳ ಮೇಲೆ ಇಂದು ಪ್ರಶ್ನೆ ಕೇಳಿದರೆ ನಾನು ಉತ್ತರ ಕೊಡಲಾರೆ. ಆದರೆ ೧೫-೨೦ ವರುಷಗಳ ಹಿಂದಿನ ನನ್ನ ಜೀವನದ ಸ್ವಾನುಭವಗಳನ್ನು ಇಂದಿಗೂ ಅಕ್ಷರವೂ ತಪ್ಪದೆ ನಿರೂಪಿಸಬಲ್ಲೆ. ಕೆಲವು ನೆನಪುಗಳನ್ನಂತೂ ನಾನು ಹುಚ್ಚನಾದರೂ (ಆಗುವದು ಬೇಡ!) ನನ್ನಿಂದ ಮರೆಯಲಾಗದು ನನ್ನ ಅಸಾಧಾರಣ ಜ್ಞಾಪಕ ಶಕ್ತಿಯ ಪರಿಮಿತಿ ಇಷ್ಟು ಕಾಲದ ವರೆಗೂ ನನಗೇ ತಿಳಿದಿರಲಿಲ್ಲ. ನನಗೆ ಅದರ ಅರಿವಾದುದು ಕೇವಲ ೧೫ ದಿನಗಳ ಹಿಂದೆ.

ಕಚೇರಿಯಲ್ಲಿ ಕುಳಿತು ಮೇಜಿನ ಮೇಲೆ ಜೋಡಿಸಿದ್ದ ಅರ್ಜಿಗಳನ್ನು ಒಂದೊಂದಾಗಿ ತೆಗೆದು ಸಹಿಹಾಕುತ್ತಿದ್ದೆ. ಅಷ್ಟರಲ್ಲಿ ನನ್ನ ಸ್ನೇಹಿತ ರಾಜ ನನ್ನ ಮುಂದೆ ಬಂದು ನಿಂತು, "ಏನು ಆಫೀಸರ್ರೆ... ವಿರಾಮವೇ ಇಲ್ವೇ ನಿಮ್ಗೆ... ಸಹಿ ಹಾಕಿ, ಹಾಕಿ ಕೈ ಎಷ್ಟು ನೋಯುತ್ತೋ" ಎಂದ. ರಾಜ–ನಾನು ಕಳೆದ ೧೫ ವರುಷಗಳಿಂದಲೂ ಸ್ನೇಹಿತರು, ನಾನು ಜನರಿಂದ "ಆಫೀಸರು" ಎನಿಸಿಕೊಂಡಿದ್ದರೂ ರಾಜನ ಮತ್ತು ನನ್ನ ನಡವಣ ಸಲಿಗೆ ಮಾತ್ರ ಕುಂದಿರಲಿಲ್ಲ.

"ಏನ್ರಾಜ, ಅಪ್ರೂಪ?" ಎಂದೆ ತಲೆ ಎತ್ತಿ. ನನ್ನೆದುರಿಗಿದ್ದ ಕುರ್ಚಿಯಲ್ಲಿ ಕುಳಿತುಕೊಳ್ಳುತ್ತ ರಾಜ, "ಏನೂ ಇಲ್ಲ ಮಹಾಸ್ವಾಮಿ.... ನನ್ನದೊಂದು ಅರ್ಜಿಯಿದೆ ಪರಾಂಬರಿಸಬೇಕು" ಎಂದು ಜೇಬಿನಿಂದ ಕಾಗದವೊಂದನ್ನು ತೆಗೆದು ನನ್ನ ಕೈಗಿತ್ತ. ರಾಜ ಸದಸ್ಯನಾಗಿದ್ದ ಸಂಘ ಯಾವುದೋ ಒಂದು ಬೆನಿಫಿಟ್ ಶೋ ಏರ್ಪಡಿಸಿತ್ತು. ನನಗೊಂದು ಟಿಕೀಟು ತಗುಲಿ ಹಾಕಲು ರಾಜ ಬಂದಿದ್ದ. ನಾನು ಬೇಡವೆಂದರೂ ರಾಜ ಬಿಡುವನೇ? ೨ ರೂಪಾಯಿಯ ಟಿಕೀಟೊಂದನ್ನು ಹರಿದು ನನ್ನ ಮುಂದಿಟ್ಟು "ನಾಳೆ ಹೋ, ಮಾಧು, ಮರ್ತಿಯಾ ಬರೋಕೆ. ಫಸ್ಟ್ ಕ್ಲಾಸ್ ಡಾನ್ಸ್, ನನಗೆ ಬಹಳ ಕೆಲಸ ಇದೆ, ಬರ್ತೇನೆ. ಥಿಯೇಟರಿನ ಹತ್ತಿರ ನಿನ್ನ ನೋಡ್ತೇನೆ" ಎಂದು ನಿಲ್ಲದೆ ಹೊರಟೇಬಿಟ್ಟ. ಟಿಕೀಟನ್ನು ತೆಗೆದು ಜೇಬಿನಲ್ಲಿಟ್ಟು ಮತ್ತೊಮ್ಮೆ ರಾಜನಿತ್ತಿದ್ದ ಕಾಗದವನ್ನು ನೋಡಿದೆ, ಪ್ರಸಿದ್ಧ ನರ್ತಕಿ "ದೇವಿ"ಯವರಿಂದ ಅಮೋಘ ನೃತ್ಯ, ಈ ಸುಸಮಯವನ್ನು ಕಳೆದುಕೊಳ್ಳಬೇಡಿ, ಎಂದಿತ್ತು. ಕಾಗದವನ್ನು ಬದಿಗಿಟ್ಟು ಮತ್ತೆ ಅರ್ಜಿಗಳಿಗೆ ಸಹಿ ಹಾಕಲು ತೊಡಗಿದೆ.

ಮರುದಿನ ಸಂಜೆ ಥಿಯೇಟರಿನ ಬಳಿ ರಾಜ ನನಗೆಂದು ಕಾದು ನಿಂತಿದ್ದ. ಕಾರಿನಿಂದಿಳಿಯುತ್ತಲೇ ಮುಂದೆ ಬಂದು "ಬಾಪ, ಸಾಹೇಬರಿಗೆ ಕಚೇರಿಯಲ್ಲಿ ವಿರಾಮವೇ ಇರಲಿಲ್ಲವೆಂದು ಕಾಣುತ್ತೆ" ಎನ್ನುತ್ತ ನನ್ನ ಕೈಹಿಡಿದು ಒಳಗೊಯ್ದು ನೃತ್ಯ ಮಾಡುವ ವೇದಿಕೆಗೆ ಅತಿ ಸಮೀಪದಲ್ಲಿದ್ದ ಸ್ಥಾನವೊಂದರಲ್ಲಿ ನನ್ನನ್ನು ಕೂಡಿಸಿ ಮಾಯವಾದ ರಾಜ.

ನೃತ್ಯ ಪ್ರಾರಂಭವಾಯಿತು. ನಾಟ್ಯ ಶಾಸ್ತ್ರ ನನಗಷ್ಟು ಪರಿಚಯವಿಲ್ಲದಿದ್ದರೂ ನನಗೆ ನರ್ತನವೆಂದರೆ ಬಹಳ ಅಭಿರುಚಿ. ಈ ಅಭಿರುಚಿಗೆ ಒಂದು ಹಿನ್ನೆಲೆಯೂ ಇದೆ. ಆ ಹಿನ್ನೆಲೆಯನ್ನು ಹೇಳಲು ತೊಡಗಿದರೆ ಅದೇ ಒಂದು ಕತೆಯಾದೀತು. ಅದನ್ನು ಮತ್ತೊಮ್ಮೆ ಎಂದಾದರೂ ತಿಳಿಸುತ್ತೇನೆ. ಕಲೆಯ ರಹಸ್ಯ ಶಾಸ್ತ್ರೋಕ್ತವಾಗಿ ನನಗೆ ತಿಳಿಯದಿದ್ದರೂ ನರ್ತನವು ಸಹ ಅತ್ಯುತ್ತಮ ಕಲೆಗಳಲ್ಲೊಂದು ಎಂದು ಹೇಳುವವರಲ್ಲಿ ನಾನೂ ಒಬ್ಬ. ಇದಿರಲಿ... ಮೊದಲು ಮುಂದೆ ಬಂದು ನಿಂತಾಗ ದೇವಿಯ ಮುಖ ತೆಳುವಿನ ಬಿಳಿಯ ಪರದೆಯ ಹಿಂಬದಿಗಿತ್ತು. ಎರಡು ಹೆಜ್ಜೆ ಅತ್ತ ಇತ್ತ ಎತ್ತಿಹಾಕುತ್ತಲೇ ಪರದೆ ಹಿಂದೆ ಸರಿಯಿತು. ದೇವಿಯ ಮುಖ ಪ್ರೇಕ್ಷಕರಿಗೆ ಗೋಚರಿಸಿತು. ಕಲೆಯನ್ನು ಸವಿಯಬಂದ ನಾನು ನರ್ತಕಿಯ ರೂಪನ್ನು ಸವಿಯಲು ಪ್ರಾರಂಭಿಸಿದೆನೆಂದರೆ ಅದು ತಪ್ಪಾದೀತು, ನಿಜ. ಆದರೆ ನನ್ನ ದೃಷ್ಟಿ ಏನೋ ಮೊದಲು ಆಕೆಯ ಮುಖದೆಡೆಗೆ ಸರಿಯಿತು. ನೀಳವಾಗಿ ತೀಡಿದ ಹುಬ್ಬುಗಳ ನಡುವೆ ಜ್ಯೋತಿಯಾಕಾರದ ಕುಂಕುಮ ಮೂಡಿತ್ತು. ಸಡಿಲಗೊಂಡು ಹಾರಾಡುತ್ತಿದ್ದ ಮುಂಗುರುಳು ಅಲೆಯಂತೆ ತೇಲುತ್ತಿತ್ತು. ಆಕೆಯ ದೇಹದ ಮಾಟದಲ್ಲಿಯೇ ಒಂದು ಮೋಹಕತೆಯಿತ್ತು. ಆಕೆಯ ಮುಖವನ್ನೇ ನೋಡುತ್ತಿದ್ದ ನನ್ನಲ್ಲಿ ಇದ್ದಕ್ಕಿದ್ದಂತೆ ಯಾವುದೋ ಒಂದು ಬಹಳ ಹಿಂದಿನ ನೆನೆವು ಸುಳಿಯಿತು. ಆಕೆಯನ್ನು ನಾನು ಚಿಕ್ಕಂದಿನಲ್ಲಿ ಎಲ್ಲೋ ನೋಡಿರಬೇಕೆಂದು ಧ್ಯಾಸವಾಯಿತು. ಆದರೆ ಎಲ್ಲಿ, ಎಂದು–ಎಂಬುದು ಮಾತ್ರ ಬೇಗ ಹೊಳೆಯಲಿಲ್ಲ. ನಾಟ್ಯವೇನೋ ಮುಂದುವರಿದಿತ್ತು. ಆಕೆಯ ಮೊದಲೆರಡು ನರ್ತನಗಳಿಂದಲೇ ನಾನು ಆಕೆಯೊಬ್ಬ ಪ್ರಸಿದ್ಧ ನರ್ತಕಿಯಿರಬೇಕೆಂದು ನಿರ್ಣಯಿಸಿದೆ. ಮಧ್ಯೆ ಸುಳಿದ ಅವ್ಯಕ್ತ ನೆನಪು ನನ್ನನ್ನು ಕಾಡದಿದ್ದರೆ ಆಕೆಯ ನಾಟ್ಯ ನನಗೆ ಮತ್ತೂ ರುಚಿಸುತ್ತಿತ್ತೊ ಏನೋ.

ಅಂದಿನ ಕಾರ್ಯಕ್ರಮ ಮುಗಿಯಿತು. ರಾಜ ನನ್ನ ಹತ್ತಿರಕ್ಕೆ ಬಂದು "ಬಾ, ದೇವಿಗೆ ನಿನ್ನನ್ನು ಪರಿಚಯಮಾಡಿಕೊಡ್ತೇನೆ." ಎಂದು ನನ್ನನ್ನು ಗ್ರೀನ್ ರೂಮಿನೆಡೆಗೆ ಕರೆದೊಯ್ದ. ಸ್ವಲ್ಪ ಹೊತ್ತಿನ ಬಳಿಕ ಆಕೆ ಬಿಳಿಯ ಪತ್ತಲವೊಂದನ್ನುಟ್ಟು ಹೊರಕ್ಕೆ ಬಂದಳು. ಸಮೀಪದಿಂದ ಆಕೆಯನ್ನು ಕಂಡ ಮೇಲಂತೂ ಆಕೆಯ ಪರಿಚಯ ನನಗೆ ಹಿಂದೆಯೇ ಆಗಿದೆ ಎಂದು ಖಚಿತವಾಯಿತು. "ಮಿಸ್ ದೇವಿ, ಇವರು ನನ್ನ ಸ್ನೇಹಿತರು, ಮಾಧು.... ಸರಕಾರಿ ಹುದ್ದೆಯಲ್ಲಿದ್ದಾರೆ" ಎಂದು ಪರಿಚಯ ಮಾಡಿಕೊಟ್ಟ. ಜತೆಗೆ "ಇವರಿಗೆ ನಾಟ್ಯದಲ್ಲಿ ಅಭಿರುಚಿ ಹೆಚ್ಚು. ಬಹಳ ಮಟ್ಟಿಗೆ ನಮ್ಮ ಹಿಂದುಸ್ಥಾನದ ಎಲ್ಲ ನರ್ತಕ ನರ್ತಕಿಯರ ನರ್ತನವನ್ನು ಕಂಡಿದ್ದಾರೆ" ಎಂದು ರಾಗ ಎಳೆದ. ನಾನು ತೆಪ್ಪಗಿದ್ದೆ. ಆಕೆಯೇ "ಓ, ಹೌದೇನು? ಬಹಳ ಸಂತೋಷ. ಒಂದು ದಿನ ನಮ್ಮ ಮನೆಗೆ ಬನ್ನಿ. ವಿರಾಮವಾಗಿ ಮಾತನಾಡೋಣ" ಎಂದಳು. ಆಗಲಿ ಎಂದು ತಲೆಯಾಡಿಸಿದೆ.

ಕಾರಿನಲ್ಲಿ ಕುಳಿತು ಮನೆಯ ಕಡೆ ಹೊರಟಾಗ ನಾನು ರಾಜನಿಗೆ "ರಾಜ, ಆಕೆಯನ್ನು ಎಲ್ಲಿಯೋ ನೋಡಿದ ಜ್ಞಾಪಕವಿದೆ. ಕಣೋ" ಎಂದೆ. "ನೋಡಿರಬಹುದು. ಆಕೆಯ ನೃತ್ಯವನ್ನೇ ಹಿಂದೊಮ್ಮೆ ನೋಡಿರಬಹುದು" ಎಂದು ಉತ್ತರ ಕೊಟ್ಟ ರಾಜ. ಕಾರಿನ ಕಿಟಕಿಯಿಂದ ತಣ್ಣನೆಯ ಗಾಳಿ ತೂರಿ ಬರುತ್ತಿತ್ತು. ಎಡಗೈ ಕಾರನ್ನು ನಡೆಸುತ್ತಿತ್ತು. ಬಲಗೈಲಿದ್ದ ತುಣುಕು ಸಿಗರೇಟಿನಿಂದ ಹೊಗೆ ಮೇಲೇಳುತ್ತಿತ್ತು. ಅಂದು ರಾತ್ರಿ ಸುಮಾರು ಒಂದು ಘಂಟೆಯ ಹೊತ್ತಿಗೆ ನನಗೆ ಆಕೆ ಯಾರೆಂದು ಸ್ಫುರಿಸಿತು. ಪಕ್ಕಕ್ಕೆ ಹೊರಳಿ ನೋಡಿದೆ, ನೆಲದ ಮೇಲೆ ಸಿಗರೇಟಿನ ತುಣುಕುಗಳ ರಾಶಿಯೇ ಬಿದ್ದಿತ್ತು. ಮರುದಿನ ಬೆಳಿಗ್ಗೆ ರಾಜನನ್ನು ಕಂಡು "ಇಂದು ಸಂಜೆ ದೇವಿಯ ಮನೆಗೆ ಹೋಗೋಣ" ಎಂದೆ, ರಾಜ ಒಪ್ಪಿದ.

ಸಂಜೆ ದೇವಿಯ ಮನೆಗೆ ಹೊರಟಾಗ ನಾನು ರಾಜನಿಗೆ ಎಲ್ಲವನ್ನು ವಿಶದೀಕರಿಸಿದೆ. ರಾಜ ನಕ್ಕು "ಓ, ಹಾಗಾದರೆ ಬಹಳ ಹಳೆಯ ಸ್ನೇಹಿತರಪ್ಪ ನೀವು" ಎಂದ. ದೇವಿ ನಮ್ಮಿಬ್ಬರನ್ನೂ ಸ್ವಾಗತಿಸಿದಳು. ಹಾಗೂ ಮಹಡಿಯ ಮೇಲೆ ಕರೆದೊಯ್ದು ಕೂಡಿಸಿದಳು. ಹಿಂದಿನ ದಿನದ ಕೃತಕ ರೂಪು ಇಂದು ದೇವಿಯಲ್ಲಿ ಕಂಡುಬರಲಿಲ್ಲ. ಆಕೆಯ ಸಹಜ ರೂಪು, ತಿಳಿನಗೆ, ವಿಶ್ವಾಸದ ಮಾತುಕತೆಗಳು ಬಹಳ ತೃಪ್ತಿಕರವಾಗಿದ್ದುವು. ರಾಜನೆ ಮಾತಿಗೆ ಮೊದಲು ಮಾಡಿದ, "ದೇವಿಯವರೇ, ಮಾಧುವಿಗೆ ನಿಮ್ಮ ಪರಿಚಯ ಬಹಳ ದಿನಗಳಿಂದ ಇದೆಯಂತೆ. ಚಿಕ್ಕಂದಿನಲ್ಲಿ ನೀವಿಬ್ಬರೂ ಸ್ನೇಹಿತರಂತೆ. ಚೆಂಡು, ಬಗರಿ, ಆಟವಾಡುತ್ತಿದ್ದರಂತೆ, ನಿಜವೇ? ನಿಮಗೆ ಇವರ ನೆನಪಿದೆಯೋ? " ಎಂದು ಪ್ರಶ್ನಿಸಿದ. ಎವೆಯಗಲಿಸಿ ದೇವಿ ನನ್ನನ್ನೊಮ್ಮೆ ನೋಡಿದಳು. ನೆನಪುಗಳ ಸರಣಿ ಆಕೆಯ ಮುಖದ ಮೇಲೆ ವೇಗದಿಂದ ಸರಿದುಹೋಗುತ್ತಿತ್ತು. ಕುಸು ಹೊತ್ತಿನ ಬಳಿಕ "ಇರಿ, ಬಂದೆ" ಎಂದು ಮೇಲೆದ್ದು ಒಳಕ್ಕೆ ಹೋದಳು. ಒಂದೆರಡು ನಿಮಿಷಗಳಲ್ಲಿ ಫೋಟೋ ಒಂದನ್ನು ಕೈಲಿ ಹಿಡಿದು ಬಂದು "ಈ ಮಾಧುವೇ ನೀವು? " ಎಂದು ಆ ಛಾಯಚಿತ್ರದಲ್ಲಿದ್ದ ವ್ಯಕ್ತಿಯೆಡೆಗೆ ಬೊಟ್ಟು ಮಾಡಿ ತೋರಿದಳು. ನಾನು, ದೇವಿ ಬಹಳ ಚಿಕ್ಕವರಿದ್ದಾಗ ನಮ್ಮ ತಾಯಿ ನನಗೆ ಲಂಗ ತೊಡಿಸಿ ದೇವಿಯ ಜೊತೆಯಲ್ಲಿ ತೆಗೆಸಿದ ಛಾಯಚಿತ್ರವದು. ನಾನು ನಕ್ಕು "ಹೌದು" ಎಂದೆ. ಆಕೆಯೂ ನಗುತ್ತ "ಹೌದೇನು? ಎಷ್ಟು ದೊಡ್ಡವರಾಗಿದ್ದೀರಿ? ಎಷ್ಟು ದಿನಗಳ ಬಳಿಕ ಮತ್ತೆ ಭೇಟಿ" ಎಂದು ನುಡಿದಳು. ನನಗೆ ಏನೆಂದು ಉತ್ತರ ಕೊಡಲೂ ಹೊಳೆಯಲಿಲ್ಲ. ಕುಶಲ ಸಮಾಚಾರಗಳು, ಜೀವನದ ಏರಿಳಿತಗಳು, ಸಂಸಾರದ ವಿಷಯ-ಇವುಗಳೆಲ್ಲದರ ಮೇಲೆ ಸೂಕ್ಷ್ಮವಾಗಿ ಮಾತುಕತೆಗಳಾದವು. ನಾವು ಮೇಲೆದ್ದು ನಿಂತಾಗ ನಾನು ದೇವಿಯನ್ನು ಮರುದಿನ ನಮ್ಮ ಮನೆಗೆ ಬರಲು ಆಹ್ವಾನಿಸಿದೆ. ಆಕೆಯೂ ನಗುತ್ತ "ಇನ್ನು ನನಗೆ ಈ ಶಹರಿನಲ್ಲಿ ಒಬ್ಬ ಅಣ್ಣ ಸಿಕ್ಕಂತಾಯಿತಲ್ಲವೇ, ನಾಳೆಯೇನು ಇಂದಿನಿಂದ ಪ್ರತಿದಿನವೂ ನಿಮ್ಮ ಮನೆಯಲ್ಲಿ ಹಾಜರಿ ನಾನು!" ಎಂದಳು. ರಾಜ–ನಾನು ಹಿಂದಿರುಗಿದೆವು.

ಮರುದಿನ ದೇವಿ ನಿಯತವಾದ ಹೊತ್ತಿಗೆ ಸರಿಯಾಗಿ ಬಂದಳು. ರಾಜನೂ ನನ್ನ ಜೊತೆಯಲ್ಲಿದ್ದ. ಒಂದೆರಡು ಗಂಟೆಗಳ ಕಾಲ ಮಾತುಕತೆಯಾದ ಮೇಲೆ ದೇವಿ ಮತ್ತೆ ಬರುತ್ತೇನೆಂದು ಹೊರಟುಹೋದಳು. ಆಕೆಯ ನಿರ್ಗಮನದ ಮರುಕ್ಷಣವೇ ಇದ್ದಕ್ಕಿದ್ದಂತೆಯೇ ರಾಜ " Oh! She is a charming personality " (ಮೋಹಕ ವ್ಯಕ್ತಿ ಅವಳು) ಎಂದ ನಾನು ನಕ್ಕು "ಸರಿ, ಇಂದು ರಾತ್ರಿಯೆ ಬರೆದು ಬಿಡು ಒಂದು ಪದ್ಯ" ಎಂದೆ.

* *

ಮರುದಿನ ಮನೆಯಲ್ಲಿ ನಾನೊಬ್ಬ ಮಾತ್ರ ಇದ್ದೆ-ಮನೋರಮ ತವರೂರಿಗೆ ತಾಯಿ ಮನೆಗೆ ಹೋಗಿ ಆಗಲೇ ೧೫ ದಿನಗಳಾದವು. ದೇವಿಯ ರೂಪು ಅವಳುಟ್ಟಿದ್ದ ಪತ್ತಲದಿಂದ ಇಂದು ದ್ವಿಗುಣಿತಗೊಂಡಿತ್ತು. ಆಕೆಯ ನಡಗೆಯಲ್ಲಿ ಮಾತ್ರವಲ್ಲ, ಆಕೆಯ ನಗೆಯಲ್ಲಿಯೇ ಒಂದು ನಾಟ್ಯಭಂಗಿಯಿತ್ತು.

" ನಿನ್ನ ಜೀವನ ಹೇಗಿದೆ ದೇವಿ, ಈ ಕೆಲ ವರುಷಗಳಿಂದ? " ನಾನು ಪ್ರಶ್ನಿಸಿದೆ. ಕಾಫಿಯ ಲೋಟವನ್ನು ಕೆಳಗಿಟ್ಟು ದೇವಿ ನಿಟ್ಟುಸಿರು ಬಿಟ್ಟಳು. ಬಳಿಕ ಬಹಳ ಗಂಭೀರವಾಗಿ " ಕಲೆಗಾಗಿ ನನ್ನ ದೇಹವನ್ನು ಮಾರುತ್ತಿದ್ದೇನೆ ಮಾಧು; ಈಗಿಲ್ಲದಿದ್ದರೂ ಹಿಂದೆಯಾದರೂ ಮಾರಿದ್ದೇನೆ, " ಎಂದಳು. ನನಗೇನೋ ಅವಳ ಮಾತುಗಳು ಸರಿಯಾಗಿ ಅರ್ಥವಾಗಲಿಲ್ಲ. ಹಲವಾರು ನಿಮಿಷಗಳ ಬಳಿಕ ಆಕೆಯೇ ಹೇಳಲು ಮೊದಲಿಟ್ಟಳು: " ನನಗೆ ಸುಮಾರು ಒಂಬತ್ತು ವಯಸ್ಸಾದಾಗ ನೀವು ನಿಮ್ಮ ತಂದೆ ತಾಯಿಗಳೊಡನೆ ಮೈಸೂರಿಗೆ ಹೊರಟು ಹೋದಿರಲ್ಲವೇ ? ಹೌದು, ಅಂದು ನಿಮ್ಮನ್ನು ನಾನು ಬೀಳ್ಕೊಟ್ಟ ದೃಶ್ಯ ಇಂದೂ ನನ್ನ ನೆನಪಿನಲ್ಲಿದೆ. ನಿಮ್ಮ ಕೊರಳಿಗೆ ನೇತು ಬಿದ್ದು ನಾನು 'ಮಾಧು ನನ್ನನ್ನೂ ಕರೆದುಕೊಂಡು ಹೋಗು ನಿನ್ನ ಜತೆಯಲ್ಲಿ' ಎಂದು ಅತ್ತೆ, ನೀವು ನನ್ನ ಕಣ್ಣೀರೊರೆಸಿ ಸಮಾಧಾನ ಪಡಿಸಿದಿರಿ, ಆ ನೆನಪುಗಳೆಲ್ಲ ಈಗೇಕೆ? ನಿಮಗೆ ತಿಳಿದಿದೆಯಲ್ಲ, ನಾನು ಚಿಕ್ಕವಳಿದ್ದಾಗಲೇ ನರ್ತನ ಕಲಿಯಲು ಪ್ರಾರಂಭಿಸಿದ್ದೆನೆಂದು. ನನ್ನ ಓದಿನ ಜೊತೆಗೆ ನಾಟ್ಯವನ್ನೂ ಅಭ್ಯಸಿಸುತ್ತ ಬಂದೆ. ನನಗೆ ೧೫–೧೬ ವರುಷಗಳಾಗುವ ಹೊತ್ತಿಗೆ ಒಂದೆರಡು ಬಾರಿ ನಾಟ್ಯ ಪ್ರದರ್ಶನವನ್ನೂ ಮಾಡಿದೆ. ನನಗೆ ಸುಮಾರು ೧೭–೧೮ ವರುಷಗಳಾಗಿದ್ದಾಗ ನಮ್ಮ ಸಂಸಾರದಲ್ಲಿ ಆದ ಬದಲಾವಣೆಗಳು ನನ್ನ ಜೀವನವನ್ನು ಪಾಪಕ್ಕೆಳೆದುವು. ಸಟ್ಟಾ ವ್ಯಾಪಾರದಲ್ಲಿ ತೊಡಗಿದ್ದ ನನ್ನ ತಂದೆಗೆ ಇದ್ದಕ್ಕಿದ್ದಂತೆಯೇ ಅತಿಯಾಗಿ ನಷ್ಟವಾಯಿತು. ಆ ನಷ್ಟದ ಪರಿಣಾಮವಾಗಿ ನನ್ನ ತಂದೆ ಕೆಲವೆಡೆ ಸಾಲಮಾಡಬೇಕಾಗಿ ಬಂದಿತು. ಒಂದೆರಡು ವರ್ಷಗಳಲ್ಲಿ ನಮ್ಮ ಸ್ವಂತ ಮನೆಯೂ ಮಾರಿಹೋಯಿತು. ದಿನಗಳೆದಂತೆಲ್ಲಾ ಜೀವನ ನಡೆಸುವದು ಬಹಳ ಕಷ್ಟವಾಯಿತು. ಮನೋರೋಗದ ಜೊತೆಗೆ ವಾತರೋಗವೊಂದು ನನ್ನ ತಂದೆಯನ್ನು ಮುತ್ತಿ ಅವರು ಸಂಪಾದಿಸುತಿದ್ದ ಹತ್ತಾರು ರೂಪಾಯಿಗಳಿಗೂ ಧಕ್ಕೆ ಬಂದಿತು. ಮನೆಯಲ್ಲಿದ್ದ ನಾನು, ನನ್ನ ತಂಗಿ, ಮತ್ತು ಎರಡು ವರ್ಷದ ನನ್ನ ತಮ್ಮ ಹಲವಾರು ದಿನ ಉಪವಾಸ ಮಾಡಿದೆವು. ಜೀವನೋಪಾಯಕ್ಕೆ ಮಾರ್ಗವೊಂದೂ ಹೊಳೆಯಲಿಲ್ಲ. ನನ್ನ ಸುತ್ತಲೂ ತಂದೆ, ತಾಯಿ, ತಂಗಿ, ತಮ್ಮಂದಿರು ಹೊಟ್ಟೆಗೆ ಅನ್ನವಿಲ್ಲದೆ ಕೊಳೆಯುತ್ತಿದ್ದರು. ಒಂದು ದಿನ ನಿರ್ಣಯಿಸಿದೆ, ಹೇಗಾದರೂ ಹಣ ಸಂಪಾದಿಸಲೇಬೇಕೆಂದು. ನಾನು ನರ್ತನ ಕಲಿಯುತ್ತಿದ್ದ ನಾಟ್ಯಶಾಲೆಯಲ್ಲಿ ನನ್ನ ಜೊತೆಗೆ ಮತ್ತೊಬ್ಬ ಹುಡುಗನೂ ನರ್ತನಾಭ್ಯಾಸ ಮಾಡುತ್ತಿದ್ದ. ಅವನು ಒಳ್ಳೆ ಹಣಗಾರನೆಂದು ನನಗೆ ತಿಳಿದಿತ್ತು. ಅವನಲ್ಲಿ ಹೋಗಿ ಒಂದು ದಿನ ಕೇಳಿದೆ. ಹಣವೇನೋ ಸಿಕ್ಕಿತು. ಅದರ ಜೊತೆಗೇ ನಮ್ಮಿಬ್ಬರ ನಡುವೆ ಸಲಿಗೆ ಪ್ರಾರಂಭಿಸಿತು. ತಾತ್ಕಾಲಿಕವಾಗಿ ನಮ್ಮ ಸಂಸಾರದ ಹಸಿವು ದೂರ ಸರಿಯಿತು. ತಂದೆ ಕೇಳಿದ್ದಕ್ಕೆ ನಾಟ್ಯ ಪ್ರದರ್ಶನ ಮಾಡಿ ಹಣ ಸಂಪಾದಿಸಿದೆನೆಂದು ಹೇಳಿದೆ. ನನ್ನ ತಂದೆ ತಾಯಿ ಮತ್ತು ತಂಗಿ ತಮ್ಮಂದಿರನ್ನು ಮಾತ್ರವೇ ಅಲ್ಲ, ನನ್ನ ಕಲಾಜೀವನವನ್ನು ಪೋಷಿಸಲೂ ನಾನು ಹಣ ಸಂಪಾದಿಸಬೇಕಿತ್ತು, ಹಣ ಸಂಪಾದಿಸುವ ವಿಧಾನವೂ ಈಗೀಗ ತಿಳಿದಿತ್ತು. ಹಲವಾರು ದಿನಗಳಲ್ಲಿ ಹತ್ತಾರು ಜನರ ಪರಿಚಯವಾಯಿತು. ಆಗ ನನಗೆ ತಿಳಿಯಿತು, ಹೆಂಗಸಿನಲ್ಲಿ ಕಲೆಯಿಲ್ಲದ್ದರೂ ಯೌವನ, ಚಲುವಿದ್ದರೆ ಜೀವನ ಸಾಗಿಸುವುದು ಬಹು ಸುಲಭವೆಂದು. ನನ್ನೋರ್ವಳಿಂದ ೪ ಜನ ಜೀವನ ಸಾಗಿಸುತ್ತಿರುವಲ್ಲಿ ನಾನು ಯಾವ ದುರ್ಮಾರ್ಗಕ್ಕಿಳಿದರೇನಂತೆ? ನನ್ನದೇಹಮಾರಿ ಇತರ ದೇಹಗಳನ್ನು ಸಲಹುತ್ತಿದ್ದೆನಲ್ಲ? ನನಗೆ ಅಷ್ಟರಲ್ಲಿಯೇ ತೃಪ್ತಿ.

"ನನ್ನ ಜೀವನ ಅದೇ ತೆರದಲ್ಲಿ ಮುಂದುವರಿಯಿತು. ನನ್ನ ಕಲೆಗೋಸುಗ ನನ್ನ ದೇಹವನ್ನು ಮಾರಿದೆ; ನನ್ನ ಸತೀತ್ವವನ್ನು ಬದಿಗಿಟ್ಟೆ. ನಾನು ಬೆಳಕಿಗೆ ಬರಲು ಬಹಳ ದಿನ ಹಿಡಿಯಿತು. ಅಲ್ಲಿಯ ವರೆಗೂ ನನ್ನಲ್ಲಿ ಕಲೆಯಿದ್ದರೇನಂತೆ; ನನ್ನನ್ನು ಸಲಹಿದುದು ನನ್ನ ಯೌವನ. ದಿನಗಳೆದಂತೆ ನನ್ನ ಹೆಸರು ಪ್ರಸಿದ್ಧವಾಯಿತು. ನಾನೂ ಒಬ್ಬ ಪ್ರಸಿದ್ಧ ನರ್ತಕಿಯೆಂದು ಪರಿಗಣಿಸಲ್ಪಟ್ಟೆ. ಇಂದು ನನಗೆ ಹಣಕ್ಕೇನೂ ಕೊರತೆಯಿಲ್ಲ. ಈಗ ನಾನು ಹಿಂದಿನ ಬಾಳನ್ನು ಸಾಗಿಸುತ್ತಲೂ ಇಲ್ಲ.

ನನ್ನ ಜೀವನದ ಒಂದೇ ಒಂದು ಧ್ಯೇಯ ನಾನು ಒಬ್ಬ ಪ್ರಸಿದ್ಧ ಕಲೆಗಾರಳಾಗಬೇಕೆಂದು ಜನರೇನೋ ನನ್ನನ್ನು ಪ್ರಸಿದ್ಧ ನರ್ತಕಿಯೆಂದು ಹೊಗಳುತ್ತಾರೆ. ಆದರೆ ನನಗೆ ಮಾತ್ರ ಹಾಗೆ ಅನಿಸಿಲ್ಲ. ಏಕೆ ಗೊತ್ತೆ? ನಾನು ಕಲೆಗೆಂದು ಜೀವನ ಸವೆಸಿಲ್ಲ. ಕಲೆಗಾರ್ತಿಯ ಪರಿಶುದ್ಧತೆಯನ್ನು ಕಾಪಾಡಿಕೊಂಡಿಲ್ಲ. ಕಲೆಯ ಮುಸುಕಿನಲ್ಲಿ ಕೇಳಿಯಾಡಿದ್ದೇನೆ. ನಾಟ್ಯವನ್ನು ನಾನು ಕಲಿತುದು ನನ್ನ ಜೀವನ ಸಾಗಿಸಲಿಕ್ಕೆ, ನನ್ನ ಕಲೆ ನನ್ನ ಜೀವನ ಸಾಗಿಸಲು ಎಷ್ಟು ಸಹಾಯಕವಾಯಿತೋ ನನಗೆ ತಿಳಿಯದು.

–೧೫ನೇ ಪುಟಕ್ಕೆ

ನಮ್ಮ ನೆರೆಯ ಅಫಗಾಣರು

ಭಿನ್ನ ಸಂಸ್ಕೃತಿಗಳ ಪ್ರಭಾವ—ಭೌತಿಕ ಪ್ರಗತಿಯ ಮಾಂದ್ಯ—ಸದ್ಯದ ನವಚೇತನ—ಆಂಗ್ಲೋ-ಅಮೇರಿಕನ್ನರ ಚಾಂಚಲ್ಯ, ಚಾಪಲ್ಯ—

ಅಫಗಾಣಿಸ್ತಾನವೆಂದರೆ ಪ್ರಾಚೀನ ಗಾಂಧಾರ ದೇಶ. ಅದು ಹಿಂದುಸ್ತಾನದ ಒಂದು ಭಾಗವಾಗಿತ್ತು. ಅಲ್ಲಿಯ ಶಾಲಾತುರವೆಂಬ ಸ್ಥಳದಲ್ಲಿ ವ್ಯಾಕರಣದ ಆದಿಗುರು ಪಾಣಿನಿ ಸುಮಾರು ಕ್ರಿಸ್ತಪೂರ್ವ ೭-೬ನೆಯ ಶತಕದಲ್ಲಿ ಜನ್ಮಪಡೆದದ್ದು. ಮಹಾಭಾರತದಲ್ಲಿ ಕುಪ್ರಸಿದ್ಧನಾದ ಶಕುನಿ ಅಲ್ಲಿಯ ರಾಜನಾಗಿದ್ದ. ಅವನ ತಂಗಿಯೇ ಏಕೋತ್ತರಶತ ಕೌರವರ ತಾಯಿ ಗಾಂಧಾರಿ.

ಅಫಗಾಣಿಸ್ತಾನದಲ್ಲಿ ಹಿಂದುಕುಶ್ ಎಂಬ ಪರ್ವತವಿದೆ ಈ ಪರ್ವತದ ಹೆಸರೇ ಆ ನಾಡು ಒಮ್ಮೆ ಹಿಂದುಸ್ತಾನಕ್ಕೆ ಸೇರಿತ್ತೆಂಬುದನ್ನು ಸೂಚಿಸುತ್ತದೆ. ಅದರ ಕಣಿವೆಗಳಲ್ಲಿ ಅನೇಕ ಗುಹೆಗಳಿವೆ. ಅಲ್ಲಿ ಕ್ರಿ ಪೂ. ೫-೮ನೆಯ ಶತಕಗಳಲ್ಲಿ ಹಿಂದುಸ್ತಾನದಿಂದ ಹೊರಗೆ ಪ್ರವಹಿಸಿದ ಬೌದ್ಧ ಸಂಸ್ಕೃತಿಯ ಅವಶೇಷಗಳು ಕಂಡುಬರುತ್ತವೆ. ಗುಹೆಗಳಲ್ಲಿಯ ಬೌದ್ಧ ವಿಗ್ರಹಗಳು ಕೆಲವೆಡೆ ಛಿನ್ನಭಿನ್ನವಾಗಿವೆ. ಆದರೂ ಅಲ್ಲಲ್ಲಿ ಇಡಿ ಬುದ್ಧಮೂರ್ತಿಗಳು ಸಂಚಾರಿಗಳಿಗೆ ಸಿಕ್ಕುತ್ತವೆ ಆ ಗುಹೆಗಳ ಗೋಡೆಗಳಲ್ಲಿ ಈಗಲೂ ಆ ಕಾಲದ ವರ್ಣಚಿತ್ರದ ಅವಶೇಷಗಳು ಕಂಡುಬರುತ್ತವೆ ಶ್ರೀ ಎಂ ಫಿಲಿಪ್ಸ್ ಪ್ರೈಸರ ಪ್ರಕಾರ ಇವು ಬ್ಯಾಕ್ಟ್ರಿಯವೆಂಬ ನಾಗರಿಕತೆಯ ಬೌದ್ಧಯುಗವನ್ನು ಪ್ರತಿನಿಧಿಸುತ್ತವೆ. ಪ್ರತಿಯೊಂದು ಗುಹೆಯಲ್ಲೂ ಒಂದು ಹಾಳು ವೇದಿಕೆಯು ಕಾಣುತ್ತದೆ ಅಲ್ಲಿ ಕುಳಿತು ಬೌದ್ಧ ಸನ್ಯಾಸಿಗಳು ತಪಸ್ಸನ್ನು ಮಾಡುತ್ತಿದ್ದರು

ಬ್ರಾಹ್ಮಣಸಂಸ್ಕೃತಿಯ ಅವಶೇಷ

ಕಾಬೂಲು ನದಿಯ ಉತ್ತರದ ಕಣಿವೆಯಲ್ಲಿ ಬಾಗ್ರಾಮವೆಂಬ ದೊಡ್ಡ ದಿಣ್ಣೆಯಿದೆ. ಅದನ್ನು ಅಗೆದಾಗ ಪುರಾತನ ನಾಗರಿಕತೆಯ ಹಲವು ಅವಶೇಷಗಳು ಸಿಕ್ಕಿವೆ. ಇಲ್ಲಿ ಬ್ರಾಹ್ಮಣ ಸಂಸ್ಕೃತಿ ಒಂದು ಕಾಲದಲ್ಲಿ ನೆಲೆಗೊಂಡಿತ್ತೆಂಬುದಕ್ಕೆ ಅವು ನಿದರ್ಶನಗಳಾಗಿವೆ. ಕಾಬೂಲಿನ ವಸ್ತುಸಂಗ್ರಹಾಲಯದಲ್ಲಿ ಹಿಂದುವಿಗ್ರಹಗಳನ್ನು ಪ್ರದರ್ಶಿಸಲಾಗಿದೆ. ಅನಂತರ ಇಸ್ಲಾಮಿನ ಬಿರುಗಾಳಿ ಬೀಸಿ ಜನರು ಇಸ್ಲಾಮಿಗಳಾದರು. ಅಲ್ಲಿಯ ಬಾಲ್ಕ್ ಎಂಬ ಸ್ಥಳ ಬ್ಯಾಕ್ಟ್ರಿಯ ರಾಜ್ಯದ ಕೇಂದ್ರವಾಗಿತ್ತು. ಅದಕ್ಕೆ ಗ್ರೀಸ್ ದೇಶದ ಅಲೆಕ್ಸಾಂಡರ್ ಮಹಾಶಯನೇ ಮೂಲಪುರುಷ. ಅಂತೂ ಅಫಗಾಣ ನೆಲದಲ್ಲಿ ಹಿಂದು, ಬೌದ್ಧ, ಗ್ರೀಕ್ ಮತ್ತು ಮಹಮ್ಮದೀಯ ಸಂಸ್ಕೃತಿಗಳು ತಮ್ಮ ಪ್ರಭಾವವನ್ನು ಕಾಲಕಾಲಕ್ಕೆ ಬೀರುತ್ತ ಬಂದವು

ಅಫಗಾಣಿಸ್ತಾನದಲ್ಲಿ ಮೊನ್ನೆ ಮೊನ್ನಿನವರೆಗೆ ಅಮಾನುಲ್ಲನೆಂಬ ಸುಲ್ತಾನನು ಆಳುತ್ತಿದ್ದನು. ಅವನು ಅತಿರೇಕ ಪ್ರಗತಿಶೀಲನಾಗಿ ಐರೋಪ್ಯ ಸಾಮಾಜಿಕ ನೀತಿ ನಡತೆಗಳನ್ನು ತನ್ನ ಪ್ರಜೆಗಳ ಮೇಲೆ ಆಗ್ರಹಪೂರ್ವಕವಾಗಿ ಹೇರಹೋಗಿ ದೇಶ ಬಿಟ್ಟು ಹೋಗುವಂತಾಯಿತು ಅಫಗಾಣಿಸ್ತಾನವು ಭೌತಿಕ ಅಭಿವೃದ್ಧಿಯಲ್ಲಿ ಜಗತ್ತಿನಲ್ಲೇ ಕನಿಷ್ಠವಾದ ರಾಜ್ಯ. ಆದರೆ ಅದು ಅದರ ತಪ್ಪಲ್ಲ. ಪರಿಸ್ಥಿತಿಯೇ ಹಾಗಿತ್ತು. ೧೯ನೆಯ ಶತಕದ ಉತ್ತರಾರ್ಧದಲ್ಲಿ ರಶಿಯದಿಂದ ಅದನ್ನು ರಕ್ಷಿಸುವ ಹೊಣೆಯನ್ನು ಬ್ರಿಟನ್ನು ಹೊತ್ತಿತು. ಅದರಿಂದ ಆಗ ಅದೊಂದು Buffer State ತಟಸ್ಥ ರಾಜ್ಯವಾಯಿತು ಅಮೀರನು ಪರರಾಷ್ಟ್ರವಾವುದರ ಪ್ರಭಾವವನ್ನೂ ಒಳಗೆ ಬಿಡಗೊಡದಿರುವೆನೆಂದು ವಿದೇಶಸಂಬಂಧವನ್ನು ಸಂಪೂರ್ಣವಾಗಿ ಬ್ರಿಟನ್ನಿಗೆ ಬಿಟ್ಟುಕೊಟ್ಟು ನಾಡನ್ನು ಕೂಪಮಂಡೂಕಸ್ಥಿತಿಗೆ ತಂದನು.

ಈಗಿನ ಸರಕಾರದ ಆಳಿಕೆಯಲ್ಲಿ ಎರಡು ಮನೆಯ ಒಂದು ಪಾರ್ಲಿಮೆಂಟು ಕೆಲಸ ಮಾಡುತ್ತಿದೆ. ಕೆಳಮನೆ ಚುನಾಯಿತ ಸದಸ್ಯರದು. ಅಲ್ಲಿ ದೊಡ್ಡ ಜಮೀನುದಾರರು ಬಹಳ ಕಡಿಮೆ. ನೂರಕ್ಕೆ ೮ ಜನರು ಮಾತ್ರ ಸಾಕ್ಷರರು. ಈಗೀಗ ಶಿಕ್ಷಣದ ಕಡೆ ಸರಕಾರ ಹೆಚ್ಚು ಲಕ್ಷಕೊಡುತ್ತಿದೆ ಅಲ್ಲಿ ಈಗ ೪೦೦ ಪ್ರಾಥಮಿಕ ಶಾಲೆಗಳೂ ೩೫ ಮಾಧ್ಯಮಿಕ ಶಾಲೆಗಳೂ ೬ ಪ್ರೌಢ ವಿದ್ಯಾಲಯಗಳೂ ಇವೆ. ಪ್ರೌಢವಿದ್ಯಾಲಯಗಳು ಫ್ರೆಂಚರ ಲೈಸೀ ಪದ್ಧತಿಯವು. ಇದರ ಮೇಲೆ, ೫ ಬಾಲಿಕಾಶಾಲೆಗಳಿವೆ

ಈ ನಾಡು ಸಂಪೂರ್ಣವಾಗಿ ಕುರಿಗಾಹಿ ಮತ್ತು ಒಕ್ಕಲಿಗರದು. ಹತ್ತಿಉಣ್ಣೆಗಳ ಬಟ್ಟೆ. ಸಕ್ಕರೆ, ಎಣ್ಣೆ, ಕಬ್ಬಿಣದ ಸಾಮಾನು ಮುಂತಾದವನ್ನು ಆಯಾತಮಾಡಿಕೊಳ್ಳಲಾಗುತ್ತದೆ. ಒಕ್ಕಲುತನದ ಫಸಲನ್ನು ಅವಕ್ಕೆ ಬದಲಾಗಿ ತೆರಲಾಗುತ್ತದೆ ಕುರಿದೊಗಲನ್ನು ಹೇರಳವಾಗಿ ಹೊರಗೆ ಕಳಿಸುವುದರಿಂದ ಯುದ್ಧಕಾಲದಲ್ಲಿ ಅಫಗಾಣಿಸ್ತಾನಕ್ಕೆ ೪೦ ಲಕ್ಷ ಪೌಂಡುಗಳ ಆದಾಯ ದೊರೆಯಿತು. ಆ ಮೇಲೆ ಅದರ ಬೆಲೆ ಇಳಿದುಹೋಯಿತು ಮತ್ತು ರಶಿಯ, ದಕ್ಷಿಣ ಆಫ್ರಿಕೆಗಳೊಡನೆ ಸ್ಪರ್ಧಿಸಬೇಕಾಯಿತು ನಿರ್ಯಾತದ ಮಿಕ್ಕ ವಸ್ತುಗಳೆಂದರೆ ಎಣ್ಣೆ, ಒಣಗಿಸಿದ ಹಣ್ಣು ಒಣಗಿಸಿದ ಖರ್ಜೂರವನ್ನು ಹೆಚ್ಚಾಗಿ ಭಾರತಕ್ಕೆ ಕಳಿಸಲಾಗುವುದು ಪಾಕಿಸ್ತಾನ ಹಿಂದುಸ್ತಾನಗಳ ಒಡಕಿನಿಂದ ಈ ವ್ಯಾಪಾರವೂ ಈಗ ಸರಾಗವಾಗಿ ಸಾಗುತ್ತಿಲ್ಲ. ರಶಿಯ, ಅಮೇರಿಕ ಮತ್ತು ಬ್ರಿಟನ್ನುಗಳೊಡನೆ ನ್ಯಾಯವಾದ ವಾಣಿಜ್ಯಸಂಧಿಯನ್ನು ಮಾಡಿಕೊಳ್ಳಲಾಗಿದೆ

ಅಮೇರಿಕದ ನೆರವು

ಅಮೇರಿಕದ ಮೊರಿಸನ್ ಕ್ನಡ್ಸನ್ ಕಂಪನಿ ಮಾರ್ಗ ಮತ್ತು ನೀರಾವರಿ ಯೋಜನೆ ಕಾಲುವೆಗಳನ್ನು ಕಲ್ಪಿಸಿ ಕೊಡುತ್ತಿದೆ ಅವರೆ ವ್ಯಾಪಾರದ ಲಾಭ ಸಿಗುತ್ತಿರುವುದರಿಂದ ಆ ಬಗ್ಗೆ ಬೇಕಾದಷ್ಟು ಖರ್ಚು ಮಾಡಲು ಸರಕಾರ ಹಿಂಜರಿಯುತ್ತಿಲ್ಲ. ಯಾಂತ್ರೀಕರಣವಾಗದೆ ಕಾಲಕಾಲಕ್ಕೆ ಬೆಳೆಯದಿರುವುದರಿಂದ ರಶಿಯದ ಪ್ರಭಾವ ಶಕ್ತಿ ಬಹಳ ಬೇಗ ಬೇರೂರದೆಂದು ಬಿಟಿಶರ ಭಯ. ಅಲ್ಲದೆ ಅಮೇರಿಕದ ಸಮರನೈತಿಕ ಧ್ಯಾನದಲ್ಲಿಲ್ಲವೆಂಬುದು ಅವರಿಗೆ ಮತ್ತೊಂದು ಸಮಾಧಾನ. ಆದರೂ ಯಾತದ ದಾರೋಂಬ ಪಕ್ಕಗಳಿಗೆಯಲ್ಲಿ ಮಧ್ಯಪೂರ್ವದಿಂದ ರಶಿಯದ ಪ್ರಬಲವಾತ ಬೀಸಿ ಬಂದು ಸಂತು ಬಿಟ್ಟರೆ ಆಂಗ್ಲೋ—ಅಮೇರಿಕನ್ನರ ಸ್ಥಾನ ಅಲ್ಲಿ ಅಭದ್ರವಾದೀತೆಂಬ ಅಂಜಿಕೆ ಅವರನ್ನು ಬಿಟ್ಟಿಲ್ಲ ಹಿಂದುಕುಶ್ ಪರ್ವತದ ಉತ್ತರದಲ್ಲಿರುವ ಅಫಗಾಣ ತುರ್ಕಿಸ್ತಾನವೆಂಬ ಪ್ರದೇಶ ಬಹಳ ಫಲವತ್ತಾಗಿದೆಯೆಂದೂ ಅದನ್ನು ಅಭಿವೃದ್ಧಿಗೆ ತರಲು ಧನಸಹಾಯ ಸಲ್ಲಿಸುವುದು ಯಾವ ಮಟ್ಟದಲ್ಲಿ ಲಾಭದಾಯಕವೋ ನಷ್ಟಕರವೋ ಎಂದೂ ಬ್ರಿಟಿಶರು ಮೀನ—ಮೇಷದಲ್ಲಿದ್ದಾರೆ ತಮ್ಮ ಕೈಯನ್ನು ಮೊದಲೇ ಅದರಲ್ಲಿ ಅದ್ದಿಕೊಂಡು ಹಕ್ಕನ್ನು ಸ್ಥಾಪಿಸುವ ದುರಾಲೋಚನೆ ಎಲ್ಲರಿಗೂ ಮೊದಲು ಬ್ರಿಟಿಶ್ ಮತ್ತು ಅಮೇರಿಕನ್ ರಾಜಕಾರಣಿಗಳಿಗೂ ವ್ಯಾಪಾರಿಗಳಿಗೂ ಉಂಟಾಗಿದೆ. ಈಗ ಪಾಕಿಸ್ತಾನದೊಡನೆ ಪಠಾಣರಿಗೆ ಸ್ವಯಂನಿರ್ಣಯದ ಅಧಿಕಾರ ಕೊಡಬೇಕೆಂದು ಅಫಗಾಣಿಸ್ತಾನದ ರಾಯಭಾರಿ ಹೇಳುತ್ತಿದ್ದಾನೆ ಆ ಪ್ರಕಾರ ಸ್ವಯಂ ನಿರ್ಣಯಾಧಿಕಾರ ದೊರೆತರೆ ಗಡಿನಾಡಿನ ಪಠಾಣರ ಮನವೊಲಿಸಿ ಅದನ್ನು ಅಫಗಾಣಿಸ್ತಾನಕ್ಕೆ ಸೇರಿಸಿಕೊಳ್ಳಬೇಕೆಂಬ

ಸ್ಟಾಲಿನ್ನರ ಶಾಂತಿಸೂಚನೆ

ಯುದ್ಧವನ್ನು ಅಕ್ರಮವೆಂದು ಅಮೇರಿಕದೊಡನೆ ಕೂಡಿ ಸಂಯುಕ್ತಘೋಷಣೆ ಮಾಡಲು ರಶಿಯ ಸಿದ್ಧವಿದೆಯೆಂದೂ ಜಾಗತಿಕ ಶಾಂತಿಯ ಒಪ್ಪಂದದ ಕರಡನ್ನು ರಚಿಸುವ ಬಗ್ಗೆ ಅಧ್ಯಕ್ಷ ಟ್ರೂಮನ್ನರನ್ನು ಭೆಟ್ಟಿಯಾಗಲು ತಾವು ಸ್ವತಃ ಸಿದ್ಧರಿರುವುದಾಗಿಯೂ ಕಳೆದ ೩೦ ರಲ್ಲಿ ಸ್ಟಾಲಿನ್ನರು ಹೇಳಿದರು. ಅಮೇರಿಕದ ಹರ್ಸ್ಟ್ ಸುದ್ದಿ ಸಂಸ್ಥೆಯ ಪ್ರಶ್ನೆಗಳಿಗೆ ಸ್ಟಾಲಿನ್ನರು ಮೇಲಿನಂತೆ ಉತ್ತರಿಸಿದ್ದನ್ನು ಮಾಸ್ಕೋ ರೇಡಿಯೋ ಬಿತ್ತರಿಸಿತು.

ಈ ಶಾಂತಿಸಂಧಾನ ಸೂಚನೆಗೆ ಅಮೇರಿಕದ ಉತ್ತರವೇನೆಂಬುದನ್ನು ಅಮೇರಿಕದ ವಿದೇಶ ಮಂತ್ರಿ ಮತ್ತು ಪಶ್ಚಿಮ ಯುರೋಪಿನ ಪಂಚರಾಷ್ಟ್ರಗಳ ರಾಜಕೀಯ ಪ್ರತಿನಿಧಿಗಳು ವಾಶಿಂಗ್‌ಟನ್ ಸಭೆಯಲ್ಲಿ ಚರ್ಚಿಸುವರೆಂದು ಸುದ್ದಿ. ಉತ್ತರವು ವ್ಯಾವಹಾರಿಕವಾಗುವುದೆಂದೂ ಸ್ಕಾಂಡಿನೇವಿಯ ಮತ್ತು ಇಟಲಿ ಪೋರ್ತುಗಲ್, ಆಯರ್‌ಲೆಂಡ್ ಮೊದಲಾದ ಯುರೋಪಿಯನ್ ರಾಷ್ಟ್ರಗಳಿಗೆ ಸಹ ಅಭಯ ಕೊಡಲಾಗುವುದೆಂದೂ ರಾಜಕಾರಣಿಗಳ ತರ್ಕವಿರುತ್ತದೆ.

ಅನೇಕ ಬ್ರಿಟಿಶ್ ವೃತ್ತಪತ್ರಿಕೆಗಳು ಸ್ಟಾಲಿನ್ನರ ಹೇಳಿಕೆಯ ಬಗ್ಗೆ ಸಾಶಂಕ ಧೋರಣವನ್ನು ತಳೆದಿರುತ್ತವೆ. ಘೋಷಣೆಯನ್ನು ವಾಶಿಂಗ್‌ಟನ್ನಿನಲ್ಲಿ ಟ್ರೂಮನರ ಗಮನಕ್ಕೆ ತಂದಾಗ ಅವರು ಏನೂ ಹೇಳಲಿಲ್ಲ. ಧುರೀಣರಿಬ್ಬರ ಭೆಟ್ಟಿಗಾಗಿ ರಶಿಯವು ಔಪಚಾರಿಕವಾಗಿ ಮುಂದಾಗಿಲ್ಲ ಎಂದು ಅಮೇರಿಕದ ವಿದೇಶ ಶಾಖೆ ಅಭಿಪ್ರಾಯಪಟ್ಟಿತು.

ಸ್ಟಾಲಿನ್ನರು ಟ್ರೂಮನ್ನರನ್ನು ಭೆಟ್ಟಿಯಾದರೆ ಅವರಿಗೆ ಕಳೆದ ಮೇಯಲ್ಲಿ ಹೆನ್ರಿವ್ಯಾಲೇಸರು ಬರೆದ ಪತ್ರದಲ್ಲಿಯ ಅಂಶಗಳನ್ನೆತ್ತಿಕೊಂಡೇ ಅವರು ಚರ್ಚೆ ಪ್ರಾರಂಭಿಸಬಹುದೆಂದು ಊಹಿಸಲಾಗಿದೆ. ಆ ಅಂಶಗಳೆಂದರೆ: ಶಸ್ತ್ರಾಸ್ತ್ರಗಳ ನಿರ್ಬಂಧನ, ಜರ್ಮನಿ ಜಪಾನುಗಳೊಡನೆ ಶಾಂತಿಯ ಒಪ್ಪಂದ ಮಾಡಿಕೊಳ್ಳುವುದು, ಜರ್ಮನಿ, ಜಪಾನು, ಚೀನ, ಕೊರಿಯಗಳಲ್ಲಿಯ ಸೈನ್ಯ ಹಿಂತೆಗೆದುಕೊಳ್ಳುವುದು, ಪ್ರತಿಯೊಂದು ರಾಷ್ಟ್ರಗಳ ಸಾರ್ವಭೌಮತ್ವವನ್ನು ಒಪ್ಪಿಕೊಂಡು ಅವುಗಳ ಆಂತರಿಕ ಸಂಗತಿಗಳಲ್ಲಿ ಕೈಹಾಕದಿರುವುದು, ಸಂ. ರಾ. ಸಂಘದ ಸದಸ್ಯ ರಾಷ್ಟ್ರಗಳಲ್ಲಿ ಸೈನ್ಯ ಠಾಣ್ಯಗಳನ್ನು ಕಟ್ಟಿಕೊಳ್ಳಕೂಡದು, ಅಂತಾರಾಷ್ಟ್ರೀಯ ವ್ಯಾಪಾರದಲ್ಲಿ ಪಂಕ್ತಿಭೇದ ಕೂಡದು, ಯುದ್ಧದಲ್ಲಿ ಹಾನಿಗೀಡಾದ ರಾಷ್ಟ್ರಗಳ ಆರ್ಥಿಕ ಪುನಾರಚನೆ ನಡೆಯಬೇಕು, ಪ್ರಜಾತಂತ್ರದ ರಕ್ಷಣೆ ಮಾಡುವುದು ಮತ್ತು ಎಲ್ಲ ರಾಷ್ಟ್ರಗಳ ನಾಗರಿಕ ಹಕ್ಕು ಬಾಧ್ಯತೆಗಳ ಆಶ್ವಾಸನ ಕೊಡುವುದು.

ಅಣುಶಕ್ತಿಚಾಲಿತ ಯುದ್ಧ ನಾವೆಗಳನ್ನು ಕಟ್ಟುವ ವಿಚಾರ ಅಮೇರಿಕನ್ ನೌಕಾತಜ್ಞರ ಅವಧಾನದಲ್ಲಿದೆ. ಅಣುವಿಕ ನೌಕೆಗಳು ಈವರೆಗೆ ಕಂಡು ಕೇಳದಷ್ಟು ವೇಗವಾಗಿ ಚಲಿಸಬಲ್ಲವಲ್ಲದೆ ಎಣ್ಣೆ ಸರಬರಾಯಿಯ ಅವಶ್ಯಕತೆಯಿಲ್ಲದ್ದರಿಂದ ಅವಿರತವಾಗಿಯೂ ಚಾಕಚಕ್ಯದಿಂದಲೂ ಹೋರಾಡಬಲ್ಲವೆಂದು ಅವರ ಹೇಳಿಕೆ.

ಆಸೆ ಅಫಗಾಣ ಸರಕಾರಕ್ಕೆ ಇರುವಂತೆ ತೋರುತ್ತದೆ ಮೊನ್ನೆ ಏಶಿಯ ಪರಿಷತ್ತಿಗೆ ಬಂದ ಅಲ್ಲಿಯ ಪ್ರತಿನಿಧಿ ಭಾರತದೊಡನೆ ಹೆಚ್ಚಿನ ಸ್ನೇಹ ಸೌಹಾರ್ದಗಳನ್ನು ಬೆಳೆಸಿಕೊಳ್ಳುವ ಬಯಕೆಯನ್ನು ವ್ಯಕ್ತಪಡಿಸಿದ್ದಾನೆ.

—ಅಜ್ಞಾನ

೧೯೫೦ ರೊಳಗೆ ಡಚ್ಚರು ತೊಲಗಬೇಕು

ಭದ್ರತಾಮಂಡಲದ ಇಂಡೊನೇಶಿಯದ ಮೇಲಿನ ಠರಾವು ಡಚ್ಚರ ಪ್ರಭುತ್ವದ ಕೊನೆಯನ್ನು ಸ್ಪಷ್ಟಪಡಿಸಿತು. ಅದರ ಪ್ರಕಾರ ಈಗಿಂದೀಗ ಇಂಡೊನೇಶಿಯದಲ್ಲಿ ಯುದ್ಧವು ನಿಲ್ಲಬೇಕು. ಬಂಧಿತ ನಾಯಕರನ್ನು ಬಿಡುಗಡೆಮಾಡಬೇಕು, ಪ್ರಜಾರಾಜ್ಯದ ನಾಯಕರನ್ನು ಅಧಿಕಾರಕ್ಕೆ ಮರಳಿಸಬೇಕು. ಡಚ್ಚರು ಜೋಗ್ಯಕರ್ತ ಪ್ರದೇಶದಲ್ಲಿ ಅವರಿಗೆ ಸರಕಾರ ನಡೆಸುವ ಸ್ವಾತಂತ್ರ್ಯವನ್ನು ಕೊಡಬೇಕು. ಅಲ್ಲದೆ, ಮಾರ್ಚ ೧೫ ರೊಳಗೆ ಅಲ್ಲಿ ಒಂದು ಸಂಯುಕ್ತ ಸರಕಾರವನ್ನು ರಚಿಸುವ ಬಗ್ಗೆ ಸಂಧಾನ ನಡೆಸಲು ನೆರವಾಗಲು ಒಂದು ಸಮಿತಿಯನ್ನು ಭದ್ರತಾ ಮಂಡಲ ಕಳಿಸಬೇಕು, ಅಕ್ಟೋಬರ ೧ ರೊಳಗೆ ಚುನಾವಣೆ ನಡೆಸಿ, ೧೯೫೦ ರ ಜುಲೈ ೧ ರೊಳಗೆ ಸಂಪೂರ್ಣ ಸಾರ್ವಭೌಮತ್ವವನ್ನು ಡಚ್ಚರು ಪ್ರಜಾರಾಜ್ಯಕ್ಕೆ ಬಿಟ್ಟು ಕೊಡಬೇಕು.

ಈ ಕ್ಷಣ ಡಚ್ಚರು ತಮ್ಮ ಸೈನ್ಯವನ್ನು ಇಂಡೊನೇಶಿಯದಿಂದ ಹಿಂತೆಗೆದುಕೊಳ್ಳಬೇಕೆಂದು ಸೋವಿಯಟ್ ತಂದ ತಿದ್ದುಪಡಿ ಬಿದ್ದು ಹೋಯಿತು. ಉಕ್ರೇನದ ಪ್ರತಿನಿಧಿ ಗೊತ್ತುವಳಿಗೆ ಬೆಂಬಲವಿತ್ತು, ಅದು ನ್ಯಾಯಬುದ್ಧಿಗೆ ಇನ್ನೂ ಹೆಚ್ಚು ಒಪ್ಪುವಂತಿರಬೇಕಾಗಿತ್ತು ಎಂದನು.

ಚರ್ಚೆಯ ಕಾಲದಲ್ಲಿ ಡಚ್ ಪ್ರತಿನಿಧಿ ಡಾ. ವಾನ್ ರಾಯೆನ್ನನು ಗೊತ್ತುವಳಿ ತನ್ನ ಸರಕಾರದ ಸಾರ್ವಭೌಮತ್ವಕ್ಕೆ ಧಕ್ಕೆ ತರುತ್ತದೆ ಎಂದು ಸುದೀರ್ಘವಾಗಿ ವಾದಿಸಿ, ಬಳಿಕ ಏಶಿಯ ಪರಿಷತ್ತಿನತ್ತ ಹೊರಳಿ ಭಾರತದ ಹೈದರಾಬಾದ ಪ್ರಕರಣವನ್ನು ಎತ್ತಿ, ತನ್ನ ಕುತ್ಸಿತ ಟೀಕೆಗೆ ಗುರಿಪಡಿಸಿದನು. ಆಗ ಭಾರತದ ಪ್ರತಿನಿಧಿ ಶ್ರೀ. ಎಂ. ಗೋಪಾಲ ಮೆನನ್ನರು ಅದೆಲ್ಲವನ್ನೂ ನಾಲ್ಕೇ ಮಾತುಗಳಲ್ಲಿ ಸುಳ್ಳೆಂದು ಸಿದ್ಧಪಡಿಸಿದರು. ಡಚ್ಚ ಪ್ರತಿನಿಧಿ ತನ್ನ ಭಾಷಣದಲ್ಲಿ ಭದ್ರತಾಮಂಡಲದ ಈ ಆದೇಶವನ್ನು "ಯಥಾಶಕ್ತಿ ಸಹಕರಿಸುವ" ಪದ್ಧತಿಯಂತೆ ಅನುಸರಿಸುವುದಾಗಿ ಹೇಳಿದನು. ಇದರಿಂದ ಇಂಡೊನೇಶಿಯದ ಪ್ರತಿನಿಧಿ ಶ್ರೀ ಎಲ್. ಎನ್. ಪಾಲಾರರು ಹೇಳಿದಂತೆ ಭದ್ರತಾಮಂಡಲದ ಹಿಂದಿನ ಆಜ್ಞೆಯನ್ನು ಉಲ್ಲಂಘಿಸಿದಂತೆ ಇದನ್ನಾದರೂ ಡಚ್ಚರು ಮೀರುವುದೇ ಸಾಮಾನ್ಯವಾಗಿ ತೋರುತ್ತದೆ. ಆದುದರಿಂದ ಇಂಡೊನೇಶಿಯದ ಸಮಸ್ಯೆ ಮತ್ತಷ್ಟು ಜಟಿಲವಾದಂತಾಯಿತು. ಸಂ. ರಾ. ಸಂಘ ತನ್ನ ಆಜ್ಞೆಯನ್ನು ಉಲ್ಲಂಘಿಸಿದ್ದಕ್ಕೆ ಡಚ್ಚರ ಮೇಲೆ ಯಾವ ಕ್ರಮತೆಗೆದುಕೊಳ್ಳುವುದೆಂಬುದು ಕುತೂಹಲ ಜನಕವಾಗಿದೆ. ಹಾಗೆ ಯಾವ ಕ್ರಮವನ್ನೂ ಕೈಗೊಳ್ಳದೆ ತೆಪ್ಪಗೆ ಕುಳಿತರೆ ಅದರ ಸದಸ್ಯಗಳಾದ ಏಶಿಯದ ಆಫ್ರಿಕದ ರಾಷ್ಟ್ರಗಳು ಹೊಸದಿಲ್ಲಿಯಲ್ಲಿ ತಾವು ಪ್ರತಿಶೀಲಿಸಿದ ಇಂಡೊನೇಶಿಯ ಪರವಾದ ಸಹಾನುಭೂತಿಯನ್ನು ಹೇಗೆ ಕಾರ್ಯರೂಪಕ್ಕೆ ತರುವವು ಎಂಬುದು ದುರೂಹ್ಯವಾಗಿದೆ. ಇವು ಸುಮ್ಮನೆ ಕುಳಿತರೆ ಜಗತ್ತಿನ ದೃಷ್ಟಿಯಲ್ಲಿ ಇವುಗಳ ಬೆಲೆ ಕ್ಷುಲ್ಲಕವಾದೀತು. ಡಚ್ಚರಿಗೆ ಸರಿಯಾಗಿ ಬುದ್ಧಿಗಲಿಸುವಷ್ಟರ ಐರೋಪ್ಯರ ಅಧಿಕಾರ ಏಶಿಯವನ್ನು ಪುನಃ ದ್ವಿಗುಣಿತ ಉಗ್ರತೆಯಿಂದ ವ್ಯಾಪಿಸಲು ತೊಡಗುವುದು ಖಂಡಿತ. ಇದನ್ನು ಗಮನಿಸಿ ಏಶಿಯದ ಪ್ರಮುಖ ರಾಷ್ಟ್ರಗಳ ರಾಜತಂತ್ರಜ್ಞರು ಈಗಿನಿಂದಲೇ ತಕ್ಕ ಉಪಾಯವನ್ನು ಚಿಂತಿಸುವರೆಂದು ತಿಳಿಯಬಹುದೆ?

ವಿಲಯನದ ಪ್ರಗತಿ

ಬಡೋದೆ, ಕೊಲ್ಹಾಪುರಗಳು ಸಾಲುಹಿಡಿದವು

ಭೋಪಾಳ ಮಂತ್ರಿಮಂಡಲದ ರಾಜೀನಾಮೆ

ಕೊಲ್ಹಾಪುರ ಮತ್ತು ಬಡೋದೆ ಸಂಸ್ಥಾನಗಳು ಮುಂಬಯಿ ಪ್ರಾಂತದಲ್ಲಿ ವಿಲೀನವಾಗಲು ನಿರ್ಧರಿಸಿವೆಯೆಂದು ಸಂಸ್ಥಾನ ಖಾತೆಯ ಮುಂದಿನ ಅಧಿಕೃತ ಪ್ರಕಟಣೆ ಹೊರಟಿದೆ. ಮೊದಲನೆಯದು ಮಾರ್ಚ ೧ಕ್ಕೆ ಮತ್ತು ಎರಡನೆಯದು ಮೇ ೧ಕ್ಕೆ ವಿಲೀನವಾಗುವವು. ಸರದಾರ ಪಟೇಲರ ಉಪದೇಶವನ್ನನುಸರಿಸಿ ತಾವು ವಿಲಯನಕ್ಕೆ ಒಪ್ಪಿರುವದಾಗಿ ಬಡೋದೆಯ ನಾಯಕರಾದವರು ಪ್ರಕಟನೆ ಹೊರಡಿಸಿದ್ದಾರೆ. ಕೊಲ್ಹಾಪುರದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ರತ್ನಪ್ಪ ಕುಂಭಾರರೂ ಸಂಸ್ಥಾನ ಪ್ರಜಾಪರಿಷತ್ತಿನವರೂ ಈ ಉಪಕ್ರಮವನ್ನು ಸ್ವಾಗತಿಸಿದ್ದಾರೆ.

ಕೊಲ್ಹಾಪುರ ಸಂಸ್ಥಾನದ ಸ್ಥಾಪನೆ ಕ್ರಿ. ಶ. ೧೭೩೦ ರಲ್ಲಿ ಆಗಿದ್ದು ಅದರ ಸದ್ಯದ ವಿಸ್ತಾರ ೩,೨೩೯ ಚ. ಮೈಲಿ. ವಾರ್ಷಿಕ ಉತ್ಪನ್ನ ೧ ಕೋಟಿ ೨೦ ಲಕ್ಷ. ಮಹಾರಾಜರಿಗೆ ೧೧ ಲಕ್ಷ ರೂಪಾಯಿ ವರ್ಷಾಶನ ಕೊಡಲು ನಿರ್ಧಾರವಾಗಿದ್ದು ಅವರ ಖಾಸಗಿ ಆಸ್ತಿಯ ಏರ್ಪಾಡಿನ ವಿಚಾರದಲ್ಲಿ ಸಂಸ್ಥಾನ ಖಾತೆಯೊಡನೆ ವಿಚಾರ ವಿನಿಮಯ ಪ್ರಾರಂಭವಾಗಿದೆ.

ಬಡೋದೆಯ ಆಡಳಿತದ ವ್ಯವಸ್ಥೆಯನ್ನು ಸಂಸ್ಥಾನದ ಅಧಿಕಾರಿಗಳ ಸಹಾಯದಿಂದ ನಿರ್ವಹಿಸಲಾಗುತಿದೆ.

ಈ ಎರಡು ಸಂಸ್ಥಾನಗಳ ವಿಲಯನದಿಂದ ಮುಂಬಯಿ ಪ್ರಾಂತದ ಜನಸಂಖ್ಯೆ ೨ ಕೋಟಿ ೧೭ ಲಕ್ಷವಾಗುವದು. ವಿಸ್ತೀರ್ಣ ೧,೩೧,೪೪೯ ಚ. ಮೈಲಾಗುವದು.

ಭೋಪಾಳದ ವಿಚಾರವೇನು ?

ಸಂಸ್ಥಾನ ಖಾತೆಯ ಸಲಹೆಗಾರ ಶ್ರೀ ವಿ. ಪಿ. ಮೆನನ್ನರು ಭೋಪಾಳಕ್ಕೆ ಹೋಗಿ ನವಾಬರೊಡನೆ ನಡೆಸಿದ ಚರ್ಚೆಯ ಫಲವಾಗಿ ಭೋಪಾಳದ ಸಮಸ್ಯೆಯೂ ಸಮಾಧಾನಕರವಾಗಿ ಬಿಡುವ ಸಂಭವ ಕಾಣುತ್ತಿರುವದರಿಂದ ಅಲ್ಲಿ ಪ್ರಾರಂಭವಾಗಿರುವ ಲೀನೀಕರಣ ಸತ್ಯಾಗ್ರಹವನ್ನು ನಿಲ್ಲಿಸಲು ಸಲಹೆ ಕೊಡಲಾಗಿದೆ. ಸಂಸ್ಥಾನ ಕಾಂಗ್ರೆಸ್ಸಿನಲ್ಲಿ ಐಕ್ಯವನ್ನು ಕಾಯ್ದುಕೊಳ್ಳಲಾರದ ಕಾರಣ ಭೋಪಾಳ ಮುಖ್ಯಮಂತ್ರಿ ಪಂ. ಚತುರ ನಾರಾಯಣ ಮಾಲವೀಯರು ರಾಜೀನಾಮೆ ಕೊಟ್ಟಿದ್ದನ್ನು ನವಾಬ ಸಾಹೇಬರು ಸ್ವೀಕರಿಸಿದ್ದು ಆಡಳಿತೆಯನ್ನು ತಾವೇ ವಹಿಸಿರುವದಾಗಿ ಪ್ರಕಟನೆ ಹೊರಡಿಸಿದ್ದಾರೆ.

ಭೋಪಾಳಕ್ಕೂ ಲೀನವೊಂದದೆ ಗತಿಯಿಲ್ಲವೆಂದೂ ಅದೂ ಬೇಗನೆ ಬಡೋದೆ ಕೊಲ್ಹಾಪುರಗಳ ಸಾಲು ಹಿಡಿಯುವದೆಂದೂ ರಾಜಕಾರಣಿಗಳು ತರ್ಕಿಸಿದ್ದಾರೆ.

ಹೈದರಾಬಾದದಲ್ಲಿ ಸಂಪು ಹೂಡಿರುವ ಮುನಸಿಪಾಲಿಟಿ ಕಸಗೂಡಿಸುವವರಿಗೂ ಪೋಲೀಸರಿಗೂ ಕೈಗೆಕೈಹತ್ತಿ ಪೋಲೀಸರು ಸಹಿತ ೧೦ ಜನರಿಗೆ ಗಾಯವಾಗಿದೆ. ೩೬೦೦ ಕಸಗೂಡಿಸುವವರು ಸಂಪು ಹೂಡಿದ್ದರು.

ಭಾರತದ ಆಹಾರ ಧಾನ್ಯ ಸಮಸ್ಯೆ

ಈ ವರ್ಷ ೬೦ ಲಕ್ಷ ಟನ್ ಕೊರತೆ

ಗುಜರಾಥದಲ್ಲಿ ಬರಗಾಲ

೧೯೪೭ ರಲ್ಲಿ ೨೫ ಲಕ್ಷ, ೧೯೪೮ ರಲ್ಲಿ ೩೦ ಲಕ್ಷ ಟನ್ ಆಹಾರ ಧಾನ್ಯಗಳನ್ನು ವಿದೇಶಗಳಿಂದ ತರಿಸಿದ ಭಾರತಕ್ಕೆ ೧೯೪೯ ರಲ್ಲಿ ೬೦ ಲಕ್ಷ ಟನ್ ಆಹಾರ ಧಾನ್ಯದ ಕೊರತೆ ಬಿದ್ದು ಅದರಲ್ಲಿ ಬಹಳವಾದರೆ ೪೦ ಲಕ್ಷ ಟನ್ನಿನಷ್ಟು ಹೊರಗಿಂದ ತರಿಸಬಹುದು ಇದಕ್ಕೆ ೧೫೦ ಕೋಟಿ ರೂಪಾಯಿಗಳನ್ನು ನಾವು ಸುರಿಯಬೇಕಾಗುವದೆಂದು ಮುಂಬಯಿ ಪೂರೈಕೆ ಮಂತ್ರಿ ಶ್ರೀ ದಿನಕರರಾವ ದೇಸಾಯರು ಮುಂಬಯಿಯ ಸಿಲ್ವರ್‌ಫಿಶ್ ಕ್ಲಬ್ಬಿನಲ್ಲಿ ಭಾಷಣ ಮಾಡುತ್ತ ಹೇಳಿದರು. ಶ್ರೀ ದೇಸಾಯರು ಈಚೆಗೆ ನಡೆದ ಜಾಗತಿಕ ಆಹಾರ ಪರಿಷತ್ತಿಗೆ ಭಾರತದ ಪ್ರತಿನಿಧಿಯಾಗಿ ಹೋಗಿದ್ದರು. ಈ ವರ್ಷ ಭಾರತಕ್ಕೆ ಕಠಿನ ಕಾಲ ಬಂದಿದೆಯೆಂದೂ ಆದರೂ ವಿದೇಶಗಳಿಂದ ಸರಾಗವಾಗಿ ಧಾನ್ಯ ಬಂದರೆ ಬರಗಾಲ ತಲೆದೋರಲಿಕ್ಕಿಲ್ಲೆಂದೂ ಅವರು ಅಭಿಪ್ರಾಯಪಟ್ಟರು.

ಮುಂಬಯಿ ಪ್ರಾಂತದ ಪರಿಸ್ಥಿತಿಯನ್ನು ವಿವರಿಸುತ್ತ ಪ್ರಾಂತಕ್ಕೆ ೧೦ ಲಕ್ಷ ಟನ್ ಧಾನ್ಯದ ಕೊರತೆ ಬಿದ್ದಿದೆಯೆಂದು ಅವರು ತಿಳಿಸಿದರು. ಆದರೆ ಅದರಲ್ಲಿ ೮॥ ಲಕ್ಷ ಟನ್ನನ್ನು ಮಾತ್ರ ಕೇಂದ್ರ ಸರಕಾರ ಕೊಡಮಾಡಿದೆ. ಅದು ಕೂಡ ಪೂರ್ತಿ ಕೈಗೆ ಬರುವದು ಸಂಶಯಾಸ್ಪದ. ಧಾನ್ಯ ವಸೂಲಿಯಿಂದ ೨॥ ಲಕ್ಷ ಟನ್ ಪ್ರಾಂತದಲ್ಲೆ ಸಂಗ್ರಹವಾಗಬಹುದು. ಇದರಲ್ಲಿ ಜನತೆ ಸಹಕರಿಸಬೇಕು.

ಪ್ರಾಂತದಲ್ಲಿ ಕಳೆದ ಮೂರು ವರ್ಷಗಳಲ್ಲಿ ೨೧೫ ಲಕ್ಷ ಎಕರೆ ಪಡಭೂಮಿಯನ್ನು ಸಾಗುವಳಿಗೆ ತಂದಿದ್ದರೂ ಮಳೆಯ ನ್ಯೂನತೆಯಿಂದ ಕೊರತೆ ತೊಲಗಿಲ್ಲವೆಂದು ಅವರು ವಿವರಿಸಿದರು. ೫ ಲಕ್ಷ ನಿರಾಶ್ರಿತರು ಬಂದು ನೆಲಸಿದ್ದು ಮತ್ತು ಹೆಚ್ಚು ಹೆಚ್ಚು ಸಂಸ್ಥಾನಗಳು ಪ್ರಾಂತದಲ್ಲಿ ಲೀನವಾದದ್ದು ಪರಿಸ್ಥಿತಿಯನ್ನು ಕೆಡಿಸಿತು ಎಂದು ಶ್ರೀ ದೇಸಾಯರು ನುಡಿದರು.

ಗುಜರಾಥದಲ್ಲಿ ಭೀಕರ ಬರಗಾಲ

ಗುಜರಾಥದಲ್ಲಿ ಈ ವರ್ಷ ಭೀಕರ ಬರಗಾಲ ಬಿದ್ದಿದೆಯೆಂದು ಸುದ್ದಿ ಬಂದಿದೆ. ಇಂಥ ಬರಗಾಲ ಕಳೆದ ೫೦ ವರ್ಷಗಳಲ್ಲಿ ಅಲ್ಲಿ ಅನುಭವಕ್ಕೆ ಬಂದಿದ್ದಿಲ್ಲೆಂದು ಮುಂಬಯಿ ಉದ್ದಿಮೆಗಾರರ ಸಭೆಯಲ್ಲಿ ಗೃಹಮಂತ್ರಿ ಶ್ರೀ ಮುರಾರಜಿಯವರು ಹೇಳಿ ಅದನ್ನೆದುರಿಸಲು ಜನತೆಯ ಸಹಕಾರವನ್ನು ಕೋರಿದರು. ಆ ಸಭೆಯಲ್ಲೆ ೧,೫೦,೦೦೦ ರೂಪಾಯಿ ನಿಧಿ ಕೂಡಿತು.

ಗುಜರಾಥ, ಸೌರಾಷ್ಟ್ರ ಮತ್ತು ಬಡೋದೆ ಸಂಸ್ಥಾನಗಳಿಗೆ ಈ ಬರಗಾಲದ ಪೀಡೆಯಿದ್ದು ಅಲ್ಲಿ ನೀರಿನ ಕೊರತೆಯೆ ಎಲ್ಲಕ್ಕಿಂತ ಭಯಾನಕವಾಗಿದೆ. ತಾಪಿ, ನರ್ಮದಾ ನದಿಗಳೂ ಹೆಚ್ಚು ಕಡಿಮೆ ಎಲ್ಲ ಬಾವಿ ಕೆರೆಗಳೂ ಬತ್ತಿ ಹೋಗಿವೆ. ೧೫೦ ಅಡಿ ಆಳಕ್ಕೆ ತೂತು ಕೊರೆದರೂ ನೀರು ಸಿಗದಾಗಿದೆ. ಮೋಟಾರು ಲಾರಿಗಳಿಂದ ನೀರನ್ನು ಸಂತ್ರಸ್ತ ಪ್ರದೇಶಗಳಿಗೊಯ್ದು ಸೀದಾದಂತೆ ಹಂಚಬೇಕಾಗಿದೆ.

ದನಗಳನ್ನೂ ಮನುಷ್ಯರನ್ನೂ ಉಪವಾಸದಿಂದ ರಕ್ಷಿಸುವ ಸರ್ವಪ್ರಯತ್ನಗಳನ್ನೂ ಮಾಡಲಾಗುತಿದೆ. ಪರಿಹಾರ ಸಮಿತಿ ಸ್ಥಾಪಿಸಲ್ಪಟ್ಟಿದ್ದು ಪ್ರತಿಯೊಬ್ಬ ನಾಗರಿಕನೂ ತನ್ನ ಆಹಾರದಲ್ಲಿ ತಿಂಗಳಿಗೊಂದು ಪೌಂಡಿನಷ್ಟು ಉಳಿಸಿ ಪೀಡಿತ ಜನರಿಗೆ ಅವು ಮುಟ್ಟುವಂತೆ ಸ್ವಯಂಸೇವಕರ ಕೈಯಲ್ಲಿ ಕೊಡಬೇಕೆಂದು ಡಾ. ಜೀವರಾಜ ಮೆಹತಾರು ಬಿನ್ನವಿಸಿದ್ದಾರೆ.

● ಮಧ್ಯಪ್ರಾಂತದ ಖಪರಖೇಡಾ ಮತ್ತು ಕೋರಬಾ ಎಂಬೆರಡು ಸ್ಥಳಗಳಲ್ಲಿ ಕಲ್ಲಿದ್ದಲ ಅದುರುಗಳು ಕಂಡು ಹಿಡಿಯಲ್ಪಟ್ಟಿವೆ. ಅದನ್ನು ತೆಗೆಯುವ ಗಣಿಯಲ್ಲಿ ಕೆಲಸ ಬೇಗನೆ ಪ್ರಾರಂಭವಾಗಲಿದೆ.

● ಬ್ರಿಟಿಶ ಪಾರ್ಲಮೆಂಟಿನ ಸ್ತ್ರೀ ಸದಸ್ಯರಾದ ಶ್ರೀಮತಿ ಜೀನ್ ಮ್ಯಾನರು ಒಂದು ಹೊಸ ಮಸೂದೆಯನ್ನು ಪಾರ್ಲಿಮೆಂಟಿನಲ್ಲಿ ಮಂಡಿಸಲಿರುವರು. ಗಂಡಂದಿರು ಗೃಹಕೃತ್ಯಕ್ಕಾಗಿ ಕೊಟ್ಟಿದ್ದರಲ್ಲಿ ಉಳಿಸಿಕೊಂಡ ಹಣವನ್ನು ಸ್ವಂತವಿತ್ತವೆಂದು ಇಟ್ಟುಕೊಳ್ಳಲು ಹೆಂಡಂದಿರಿಗೆ ಹಕ್ಕು ಕೊಡುವದೇ ಮಸೂದೆಯ ಆಶಯ.

● ಸೌರಾಷ್ಟ್ರ ಮಂತ್ರಿಮಂಡಲದಲ್ಲಿ ಶ್ರೀ ಶಾಮಲದಾಸ ಗಾಂಧಿ ಮತ್ತು ಶ್ರೀ ಗಿರಿಧರಲಾಲ ಕೋಟ ಇವರಿಬ್ಬರನ್ನು ಹೆಚ್ಚಿಗೆ ಸೇರಿಸಿಕೊಳ್ಳಲಾಗಿದೆ.

ಜಾಗತಿಕ ಶಾಂತಿಗಾಗಿ ಮಹಿಳೆಯರ ಕರೆ

೨೧ ನೆ ಅ. ಭಾ. ಮಹಿಳಾ ಪರಿಷತ್ತು

ಎಲ್ಲ ರಾಷ್ಟ್ರಗಳಿಗೆ ಸಮಾನಸ್ವಾತಂತ್ರ್ಯ ಮತ್ತು ಸಾಮಾಜಿಕ ನ್ಯಾಯ ದೊರೆತಾಗಲೆ ಜಾಗತಿಕ ಶಾಂತಿ ಸಾಧ್ಯ. ಜಗತ್ತಿನಲ್ಲಿ ಕೆಲ ಬಲಾಢ್ಯ ರಾಷ್ಟ್ರಗಳು ಇತರ ರಾಷ್ಟ್ರಗಳ ಮೇಲೆ ಆಕ್ರಮಕ ಧೋರಣೆಯನ್ನು ತಳೆದುದರಿಂದ ಇನ್ನೊಂದು ಯುದ್ಧದ ಭೀತಿ ಆವರಿಸಿದೆ. ಏಶಿಯದಲ್ಲಿ ಇನ್ನೂ ಅನೇಕ ರಾಷ್ಟ್ರಗಳು ಗುಲಾಮಗಿರಿಯಲ್ಲಿವೆಯೆಂದು ಮುಂತಾಗಿ ಜಾಗತಿಕ ಶಾಂತಿ ಗೊತ್ತುವಳಿಯನ್ನು ಗ್ವಾಲೇರದಲ್ಲಿ ಕಳೆದವಾರ ಸೇರಿದ ಅ. ಭಾ. ಮಹಿಳಾ ಪರಿಷತ್ತಿನಲ್ಲಿ ಪಾಸು ಮಾಡಲಾಯಿತು. ಇಂಡೊನೇಶಿಯದಲ್ಲಿ ಡಚ್ಚರು ನಡೆಸಿದ ದಬ್ಬಾಳಿಕೆಯನ್ನು ಆ ಗೊತ್ತುವಳಿಯಲ್ಲಿ ಖಂಡಿಸಲಾಗಿದೆ. ಗೊತ್ತುವಳಿಯನ್ನು ಶ್ರೀಮತಿ ಕಮಲಾದೇವಿಯವರು ಮಂಡಿಸಿದ್ದರು.

ಶ್ರೀಮತಿ ಊರ್ಮಿಲಾ ಮೆಹತಾ ಅವರು ಪರಿಷತ್ತಿನ ಅಧ್ಯಕ್ಷರಾಗಿದ್ದರು. ಅವರು ತಮ್ಮ ಭಾಷಣದಲ್ಲಿ ಪ್ರತಿಯೊಬ್ಬರು ಸ್ವಾರ್ಥವನ್ನು ಬದಿಗೊತ್ತಿ ರಾಷ್ಟ್ರೀಯ ಹಿತಕ್ಕಾಗಿ ದುಡಿಯುವದು ಅವಶ್ಯವಿರುವದೆಂದು ಒತ್ತಿಹೇಳಿದರು. ಸಾಮಾಜಿಕ ಅನಿಷ್ಟಗಳಾದ ಲಂಚ, ಲಾಭಬಡಕತನಗಳನ್ನು ತಡೆಯಲು ಸ್ತ್ರೀಯರು ಜನರ ಸಾಮಾಜಿಕ ಬುದ್ಧಿಗೆ ಅರಿವು ಮಾಡಿಕೊಡುವಲ್ಲಿ ವಿಶೇಷ ಕಾರ್ಯ ಮಾಡಬಲ್ಲಳು. ನಮ್ಮ ಪೀಳಿಗೆಯವರು ಈಗ ಪಡುತಿರುವ ಸಂಕಷ್ಟಗಳಿಂದ ಮುಕ್ತವಾಗಿರುವ ಸ್ವತಂತ್ರ ವಾತಾವರಣದಲ್ಲಿ ನಮ್ಮ ಮಕ್ಕಳು ಬೆಳೆಯುವಂತೆ ಮಹಿಳೆಯರೆಲ್ಲ ಜಾಗರೂಕತೆ ವಹಿಸಬೇಕೆಂದು ಅವರು ಉಪದೇಶಿಸಿದರಲ್ಲದೆ ಭಾರತದ ಜನಸಂಖ್ಯೆ ವರ್ಷಕ್ಕೆ೫೦ ಲಕ್ಷದಂತೆ ಬೆಳೆಯುತಿರುವದರಿಂದ ಸಂತತಿನಿಯಮನದ ಕಡೆಗೂ ಮಹಿಳೆಯರು ಲಕ್ಷ್ಯ ಕೊಡಬೇಕೆಂದು ಸೂಚಿಸಿದರು.

ಪರಿಷತ್ತನ್ನು ಮಧ್ಯ ಭಾರತದ ರಾಜಪ್ರಮುಖರಾದ ಗ್ವಾಲೇರ ಮಹಾರಾಜರು ಉದ್ಘಾಟಿಸಿದರು. ಗ್ವಾಲೇರ ಮಹಾರಾಣಿಯರೇ ಅದರ ಸ್ವಾಗತಾಧ್ಯಕ್ಷರಾಗಿದ್ದರು. ಪರಿಷತ್ತಿನ ಅಂಗವಾಗಿ ಗ್ವಾಲೇರ ಮಹಿಳಾ ಮಂಡಳದವರು ಏರ್ಪಡಿಸಿದ್ದ ಕಲೆ ಕೈಗಾರಿಕೆಗಳ ಪ್ರದರ್ಶನದ ಉದ್ಘಾಟನವು ಭಾರತ ಸರಕಾರದ ಆರೋಗ್ಯ ಮಂತ್ರಿಗಳಾದ ರಾಜಕುಮಾರಿ ಅಮೃತ ಕುವರರ ಹಸ್ತದಿಂದ ನೆರವೇರಿತು.

ಪರಿಷತ್ತು ಮೇಲ್ಕಾಣಿಸಿದ ಶಾಂತಿ ಗೊತ್ತುವಳಿಯಲ್ಲದೆ ಇನ್ನೂ ಅನೇಕ ಮಹತ್ವದ ಗೊತ್ತುವಳಿಗಳನ್ನು ಅಂಗೀಕರಿಸಿತು. ಭಾರತದಲ್ಲಿ ವಿವಾಹಿತ ಮಹಿಳೆಯರಿಗೆ ಪ್ರಸವಪೂರ್ವ ಮತ್ತು ಪ್ರಸವೋತ್ತರ ವೈದ್ಯಕೀಯ ಸಲಹೆ ಸಹಾಯಗಳು ದೊರೆಯುವಂತೆ ಮಾಡಬೇಕು, ಲಿಂಗಭೇದದಿಂದ ಸ್ತ್ರೀಯರಿಗಾಗುತಿರುವ ಅನ್ಯಾಯಗಳನ್ನು ದೂರೀಕರಿಸಲು ಕಾಯದೆ ಮಾಡಬೇಕು, ಹಿಂದೂ ಕಾಯದೆ ತಿದ್ದುಪಡಿ ಮಸೂದೆಯನ್ನು ಬೇಗನೆ ಪಾಸು ಮಾಡಬೇಕೆಂಬವೇ ಮೊದಲಾದವು ಅವುಗಳಲ್ಲಿ ಉಲ್ಲೇಖಾರ್ಹವಾಗಿವೆ.

ಅರ್ಥಗರ್ಭಿತ ಅಂಕೆ ಸಂಖ್ಯೆಗಳು

● ಅಮೇರಿಕೆಯ ಅಧ್ಯಕ್ಷರಿಗೆ ಸದ್ಯಕ್ಕೆ ವಾರ್ಷಿಕ ವೇತನ ಸುಮಾರು ೨,೫೦,೦೦೦ ರೂಪಾಯಿ ಮತ್ತು ಕರಮುಕ್ತ ಭತ್ತೆ ೧,೦೦,೦೦೦ ರೂಪಾಯಿ ಬರುತಿತ್ತು, ಆದರೆ ಈ ಸಂಬಳ ಏನೂ ಸಾಲದೆಂದು ಅದನ್ನು ಹೆಚ್ಚಿಸುವ ಪ್ರಯತ್ನ ನಡೆದಿದೆ. ಏಕೆಂದರೆ ಸಂಬಳದ ಮೇಲಿನ ಕರವನ್ನು ಕಳೆದ ಮೇಲೆ ಶೇಷ ಉತ್ಪನ್ನ ವರ್ಷಾಂತ್ಯದಲ್ಲಿ ಕೇವಲ ೧೪,೦೦೦ ರೂಪಾಯಿ ಉಳಿಯುತ್ತದಂತೆ.

● ಇಟೆಲಿಯಲ್ಲಿ ೨೫,೦೦,೦೦೦ ನಿರುದ್ಯೋಗಿಗಳಿದ್ದಾರೆಂದು ಸರಕಾರದ ಪ್ರಕಟನೆಯೊಂದರಲ್ಲಿ ಹೇಳಿದೆ. ಅಲ್ಲಿ ವರ್ಷಕ್ಕೆ ೪,೦೦,೦೦೦ ದಂತೆ ಜನಸಂಖ್ಯೆ ಬೆಳೆಯುತಿದೆ. ವಲಸೆ ಹೋಗಲು ವ್ಯವಸ್ಥೆಯಿಲ್ಲದ್ದು ದೊಡ್ಡ ತೊಂದರೆಯೆಂದು ಸರಕಾರ ದೂರುತಿದೆ. ಪ್ರತಿವರ್ಷ ೫,೦೦,೦೦೦ ಜನ ಪರದೇಶಗಳಲ್ಲಿ ನೆಲಸಿದರೆ ಎಲ್ಲ ಸರಿಹೋಗುವದಂತೆ. ಆದರೆ ಇಷ್ಟೆಲ್ಲ ಜನರನ್ನು ಎಲ್ಲಿ ನೆಲೆಗೊಳಿಸಬೇಕು? ಕಳೆದ ವರ್ಷ ೧,೭೫,೦೦೦ ಜನ ವಲಸೆ ಹೋದರು. ಇದಕ್ಕಿಂತ ಹೆಚ್ಚಿಗೆ ಸಾಧ್ಯವೇ ಇಲ್ಲ. ಜಗತ್ತಿನ ಜನಸಂಖ್ಯೆ ವರ್ಷಕ್ಕೆ ೧೦,೦೦,೦೦೦ ಬೆಳೆಯುತಿದೆ.

ಏಶಿಯನ್ ಐಕ್ಯದ ಸವಿಗನಸು

ರಾಷ್ಟ್ರಗಳು ಸಂಕುಚಿತ ಸ್ವಾರ್ಥವನ್ನು ತ್ಯಜಿಸಿದರೆ ಮಾತ್ರ ಈಡೇರಬಹುದು—ಯು ರಾ. ಸಂಘದಲ್ಲಿ ವಿವಿಧ ರಾಷ್ಟ್ರಗಳ ಭೂಮಿಕೆಯ ಪರಿಶೀಲನೆ

ಏಶಿಯದ ರಾಷ್ಟ್ರಗಳು ಒಗ್ಗಟ್ಟಾಗಿ ಸಾಗಿ ತಮ್ಮ ಅಧಿಭೌತಿಕ ಅಭಿವೃದ್ಧಿಯನ್ನು ಸಾಧಿಸಿಕೊಳ್ಳಬೇಕೆಂಬೀ ಬಯಕೆ, ಅಭಿಲಾಷೆ ಇಂದುನಿನ್ನೆಯದಲ್ಲ ನಿಜವಾಗಿ ಕೇಳಿದರೆ, ಜಪಾನದ ಪ್ರಸ್ಥ ಆಕಾಶಬಾಣದಂತೆ ಒಮ್ಮಿಂದೊಮ್ಮೆ ಏರಿ ಆಕಾಶದಲ್ಲಿ – ಕ್ಷಣಿಕವಾಗಿಯೆ ಇರಲೊಲ್ಲದೇಕೆ—ಉಜ್ವಲವಾಗಿ ಬೆಳಗಿ ಜಗತ್ತನ್ನು ಚಕಿತಗೊಳಿಸಿದ್ದಕ್ಕೆ, ಈ ಅಭಿಲಾಷೆಯನ್ನು ಅದು ತನ್ನ ಕಾರ್ಯಸಾಧನೆಗಾಗಿ ಉಪಯೋಗಿಸಿಕೊಂಡದ್ದೇ ಕಾರಣವೆಂದು ಖಂಡಿತವಾಗಿ ಹೇಳಬಹುದು. ಏಶಿಯದ "ಸಹ – ಸಮೃದ್ಧಿ" (Co-prosperity) ಯ ಮಂತ್ರವನ್ನು ಚೀರಿಸಿ ಪಾಶ್ಚಾತ್ಯರ ಸುಲಿಗೆಯಿಂದ ಸೋತು ಸುಣ್ಣವಾಗಿದ್ದ ಪೌರಸ್ತ್ಯ ರಾಷ್ಟ್ರಗಳಲ್ಲಿ ಒಂದು ಅಪೂರ್ವ ಆಶೆಯನ್ನು ಕೆರಳಿಸಿ ಜಪಾನಿ ನಾಯಕರು ಆಗ್ನೇಯ ಏಶಿಯವನ್ನು ಕೆಲವೇ ವಾರಗಳಲ್ಲಿ ಕಬಳಿಸಲು ಸಮರ್ಥರಾದರು. ಈ ಗತ್ತು ಪರಿಣಾಮದಲ್ಲಿ ಯಶಸ್ವಿಯಾಗದಿರಲು ಏನೇನು ಕಾರಣಗಳಿದ್ದುವೆಂದು ಚರ್ಚಿಸಲು ಇದು ಸ್ಥಾನವಲ್ಲ ಒಂದು ಮಾತನ್ನು ಅವಶ್ಯವಾಗಿ ಹೇಳಬಹುದು: ಜಪಾನಿಗಳು ದೂರದಲ್ಲಿ ಕಂಡದ್ದರ ಅರ್ಧದಷ್ಟಾದರೂ ಒಳ್ಳೆಯತನವನ್ನು ಹತ್ತಿರದಲ್ಲಿಯೂ ಪ್ರದರ್ಶಿಸಲು ಪ್ರಯತ್ನಿಸಿದ್ದರೆ ಅವರು ಸೋಲುತಿರಲಿಲ್ಲ. ಒಂದು ಮಾತಿನಲ್ಲಿ, ಮುಂದಾಳ್ತನಕ್ಕೆ ಸರ್ವಥಾ ಅಯೋಗ್ಯರೆನಿಸುವಷ್ಟು ಪಶುತ್ವ ಜಪಾನರಲ್ಲಿತ್ತು.

ಜಪಾನಿಗಳು ಮಣ್ಣುಮುಕ್ಕಿ ಹೋದರೂ ಏಶಿಯದ ಐಕ್ಯದ ಕನಸೇನೂ ಹರಿದಿಲ್ಲ. ಇಂಡೋ ಚೀನದಲ್ಲಿ ಫ್ರೆಂಚರೂ ಇಂಡೊನೇಶಿಯದಲ್ಲಿ ಡಚ್ಚರೂ ಅವರಿಬ್ಬರ ಬೆಂಬಲಕ್ಕೆ ನಿಂತು ಆಗ್ನೇಯ ಏಶಿಯದಲ್ಲಿ ಬ್ರಿಟಿಶರೂ ನಡೆದುಕೊಳ್ಳುತ್ತಿರುವ ರೀತಿ ನೀತಿಗಳನ್ನು ನೋಡಿದ ಮೇಲೆ, ಜರ್ಮನಿಯಲ್ಲಿದ್ದ ದಾನವ್ಯವನ್ನು ಕೆಡಹಿದ ಪಾಶ್ಚಾತ್ಯ ಮಿತ್ರರ ಹೃದಯದಲ್ಲಿದ್ದ ದಾನವನು ಮಾತ್ರ ಇನ್ನೂ ಬಿದ್ದಿಲ್ಲ, ಮಾತ್ರವಲ್ಲ, ಎದ್ದು ಕುಣಿಯತೊಡಗಿದ್ದಾನೆಂದು ಸ್ಪಷ್ಟವಾಗಿ ಮನವರಿಕೆಯಾಗುವದು. ಅದರಿಂದ ಏಶಿಯದಲ್ಲಿ "ಪರಸ್ಪರಂ ಭಾವಯಂತಃ" ಎಂದು ಸಕಲ ರಾಷ್ಟ್ರಗಳು ಸಹಕರಿಸಿದಲ್ಲದೆ ಶೋಷಕರ ಕಪಿಮುಷ್ಟಿಯಿಂದ ಬಿಡುಗಡೆಯೂ ಇಲ್ಲ, ಏಳಿಗೆಯ ಆಸೆಯೂ ಇಲ್ಲ. ಈ ಮಾತು ಏಶಿಯದ ಎಲ್ಲ ರಾಷ್ಟ್ರಗಳಿಗೂ ಹೆಚ್ಚುಕಡಿಮೆ ಮನದಟ್ಟಾಗಿರಬೇಕು. ದಿಲ್ಲಿಯಲ್ಲಿ ಇಂಡೊನೇಶಿಯದ ಬಗ್ಗೆ ನಡೆದ ಏಶಿಯಾ ಸಮ್ಮೇಲನಕ್ಕೆ ದೊರೆತ ಸ್ವಾಗತದಿಂದ ಈ ಮನವರಿಕೆ ಸ್ವಲ್ಪ ಮಟ್ಟಿಗಾದರೂ ಆಗಿದೆಯೆಂದು ತಿಳಿದುಕೊಳ್ಳಬಹುದು.

ಯು. ರಾ. ಸಂಘದಲ್ಲಿ

ಆದರೆ ಮನವರಿಕೆಯಾಗುವ ಮಾತು ಬೇರೆ, ನಿಜವಾದ ಸಹಕಾರ ಬೇರೆ. ನಿಜವಾದ ಸಹಕಾರ ಎಷ್ಟು ಮಟ್ಟಿಗೆ ಏಶಿಯದ ರಾಷ್ಟ್ರಗಳಲ್ಲಿ ಕಾಣಿಸಿಕೊಂಡಿದೆ? ಈ ಮಾತಿಗೆ ದಿಲ್ಲಿ ಪರಿಷತ್ತಿನಂಥ ನಿಷೇದಿಪರ ಸಭೆಗಿಂತಲೂ ಯುಕ್ತರಾಷ್ಟ್ರ ಸಂಘದಂಥ ಸಭೆಗಳಲ್ಲಿನ ಏಶಿಯನ್ ರಾಷ್ಟ್ರಗಳ ನಡವಳಿ ಯೋಗ್ಯ ಮಾನದಂಡವಾಗಬಲ್ಲದು. "ಅಯುಕ್ತರಾಷ್ಟ್ರಸಂಘ"ವೆಂದು ಆ ಸಂಘವನ್ನು ಸಕಾರಣವಾಗಿಯೆ ತೆಗಳಲಾಗುತಿದ್ದರೂ ಇಂದು ಜಗತ್ತಿನ ಚದುರಂಗದಾಟ ಸ್ವಲ್ಪವಾದರೂ ಗಂಭೀರವಾಗಿ ನಡೆಯುತಿರುವದು ಅಲ್ಲಿಯೆ. ಅಲ್ಲಿ ನಮ್ಮ ಏಶಿಯನ್ ಬಂಧುಗಳ ವ್ಯವಹಾರ ಏಶಿಯನ್ ಐಕ್ಯಕ್ಕೆ ಎಷ್ಟು ಮಟ್ಟಿಗೆ ಸಾಕ್ಷಿಯಾಗಿತ್ತು? ಎಷ್ಟು ಮಟ್ಟಿಗೆ ಸಾಧಕವಾಗಿತ್ತು? ಪ್ಯಾರೀಸಿನಲ್ಲಿ ಕಳೆದ ವರ್ಷದ ಕೊನೆಯಲ್ಲಿ ನಡೆದ ಯುಕ್ತರಾಷ್ಟ್ರ ಸಂಘದ ಸಾಧಾರಣ ಅಧಿವೇಶನದಲ್ಲಿ ನಡೆದುದನ್ನು ಗಮನಿಸಿದರೆ ನಾವು ಈ ಕುರಿತು ಸ್ವಲ್ಪ ನಿರಾಶೆಯ ನಿಟ್ಟುಸಿರನ್ನೆ ಬಿಡಬೇಕಾಗಿ ಬರುತ್ತದೆಯೆಂದು ಒಪ್ಪಿಕೊಳ್ಳದೆ ವಿಧಿಯಿಲ್ಲ. ಅಲ್ಲಿ ಏಶಿಯನ್ ರಾಷ್ಟ್ರಗಳಲ್ಲಿ ಸಂಘಟಿತವಾದ ಕ್ರಿಯೆಯ ಅಭಾವ ತಾನೇ ತಾನಾಗಿತ್ತು.



ಏಶಿಯಾ ಪರಿಷತ್ತಿಗೆ ಬಂದ ಪ್ರತಿನಿಧಿಗಳಿಗೆ ಪಂ. ನೆಹರೂರು ಸತ್ಕಾರಕೂಟವಿತ್ತಾಗ ಗವರ್ನರ ಜನರಲ್ ರಾಜಾಜಿಯವರೊಂದಿಗೆ ಯೆಮನ್‌ದ ಪ್ರತಿನಿಧಿಗಳು

ಯುಕ್ತರಾಷ್ಟ್ರ ಸಂಘದಲ್ಲಿ ಏಶಿಯಕ್ಕೆ ಇರುವ ಪ್ರಾತಿನಿಧ್ಯವು ಜನಸಂಖ್ಯೆಯ ಮಾನದಿಂದ ಅಪರ್ಯಾಪ್ತವಾಗಿಯೆ ಇದ್ದರೂ ಸರ್ವಥಾ ಕ್ಷುದ್ರವೆಂದು ಹೇಳಬರುವದಿಲ್ಲ. ೫೮ ಸದಸ್ಯರುಳ್ಳ ಸಭೆಯಲ್ಲಿ ಏಶಿಯಕ್ಕೆ ೧೪ ಸ್ಥಾನಗಳಿವೆ. ಅವರು ಜಗತ್ತಿನ ಹೆಚ್ಚುಕಡಿಮೆ ಅರ್ಧದಷ್ಟು ಜನರನ್ನು ಪ್ರತಿನಿಧಿಸುತ್ತಾರೆ. ಅವುಗಳಲ್ಲಿ ಕೆಲವು ಖಂಡಗಳೆನಿಸುವಷ್ಟು ವಿಸ್ತಾರವಾಗಿದ್ದರೆ ಇನ್ನು ಕೆಲವು ಚಿಕ್ಕಪುಟ್ಟವುಗಳು. ಮೇಲಾಗಿ ಪಾಶ್ಚಾತ್ಯ ದಬ್ಬಾಳಿಕೆಯ ಸವಿ ನಿನ್ನೆ ಮೊನ್ನೆಯವರೆಗೆ ತನಕವೂ ಚುರುಚುರು ಎಂದು ಅವೆಲ್ಲವನ್ನೂ ಸುಡುತ್ತಿತ್ತು. ಇದಿಷ್ಟೇ ಅವುಗಳನ್ನು ಒಗ್ಗಟ್ಟು ಮಾಡಲು ಸಾಲಬೇಕಾಗಿತ್ತು. ಭದ್ರತಾ ಮಂಡಳದಲ್ಲಿಯೂ ಒಂದು ಶಾಶ್ವತ ಮತ್ತು ಇನ್ನೊಂದು ಸಂಚಾರಿ ಸ್ಥಾನ ಏಶಿಯಕ್ಕಿವೆ. ಇಷ್ಟಿದ್ದೂ ಪರಿಣಾಮಕರವಾಗಿ ಏಶಿಯದ ರಾಷ್ಟ್ರಗಳು ತಮ್ಮ ಪಾತ್ರಗಳನ್ನು ವಹಿಸಿದವೆಂದು ಹೇಳಬರುವದಿಲ್ಲ.

ಚೀನದ ಉದಾಸೀನವೃತ್ತಿ

ಮಹಿಮಾನುಕ್ರಮದಿಂದ ಯುಕ್ತರಾಷ್ಟ್ರ ಸಂಘದ ಏಶಿಯನ್ ಸದಸ್ಯರಲ್ಲಿ ಮೊದಲನೆ ಸ್ಥಾನ ಚೀನಕ್ಕೆ ಸಲ್ಲಬೇಕು. ಹೆಸರಿಗಾದರೂ ಪಂಚಮಹಾರಾಷ್ಟ್ರಗಳಲ್ಲಿ ಅದೊಂದಾಗಿದೆಯಲ್ಲದೆ ಭದ್ರತಾಮಂಡಲದ ಶಾಶ್ವತ ಸದಸ್ಯರಲ್ಲಿ ಅದೂ ಒಂದಾಗಿದೆ. ಅದ್ದರಿಂದ ಮನಸಿದ್ದರೆ ಅದು ಜಾಗತಿಕ ಪ್ರಶ್ನೆಗಳಲ್ಲಿ ತನ್ನ ಪ್ರಭಾವವನ್ನು ಚನ್ನಾಗಿ ಬೀರಬಹುದು. ಅದು ಟೊಂಕಕಟ್ಟಿ ನಿಂತರೆ ಏಶಿಯನ್ ರಾಷ್ಟ್ರಗಳ ಸ್ಥಿತಿಗತಿಗಳನ್ನು ಕೇಳುವವರಿಲ್ಲವೆಂದಾಗಲು ಅವಕಾಶವೇ ಇರಲಿಲ್ಲ. ಆದರೆ ಅದು ತನ್ನ ಪಾತ್ರವನ್ನು ಚನ್ನಾಗಿ ಆಡಿ ತೋರಿದೆಯೆಂದು ಹೇಳಬೇಕಾದರೆ ತೀರ ಅಪ್ರಸ್ತುತ ಪ್ರಶಂಸೆಗಿಳಿಯಬೇಕಾದೀತು. ಅದರ ಪ್ರತಿನಿಧಿಗಳು ಮಾತಾಡುವದೇ ವಿರಳ, ಆಡಿದಾಗಲೂ ತೊದಲಿ ತೊದಲಿ ಬೆದಬೆದರಿ ಮಾತಾಡಿದ್ದಾರೆ. ಯಾರನ್ನೂ ನೋಯಿಸಬಾರದೆಂಬ ಒಂದು ಭ್ರಮೆಯೇ ಅವರನ್ನು ಹಿಡಿದಂತೆ ತೋರುತ್ತದೆ. ಮತದಾನ ಮಾಡುವ ವಿಚಾರದಲ್ಲಿ ಕೂಡ ಅದು ಹೆಚ್ಚಾಗಿ ಅಮೇರಿಕನ್ ವಿದೇಶ ಖಾತೆಯ ಕಣ್ಸನ್ನೆಯನ್ನೇ ಅವಲಂಬಿಸಿದೆಯೆಂದು ಹೇಳಿದರೆ ಸತ್ಯಕ್ಕೆ ದೂರವಾಗದು. ಭದ್ರತಾಮಂಡಲದಲ್ಲಿ ಭಾರತಕ್ಕೊಂದು ಸ್ಥಾನ ವಿರಬೇಕೆಂಬ ಮಾತಿಗೆ ಚೀನ ಸಹಾನುಭೂತಿ ತೋರಿಸಿತ್ತೆಂಬುದನ್ನು ತಿಳಿದುಕೊಂಡರೂ ಅದರ ನಡೆವಳಿ ಮೂರ್ತಿಮಂತ ನಿರಾಶೆಯೆ. ಆಗಿದೆಯೆಂಬ ಶಕ್ಯ ಬದಲಾಗದು. ಚೀನದ ಈ ನೀತಿಗೆ ಕಾರಣಗಳೇನೆಂದು ಎಲ್ಲರೂ ಬಲ್ಲರು. ಆದರಿಂದ ಇದಿ ಏಶಿಯದ ಅಭ್ಯುದಯಕ್ಕೆ ಮಾತ್ರ ಧಕ್ಕೆ ತಗಲಿದೆ.

ಸಂಧಿಸಾಧಕ ಫಿಲಿಪೈನ್ಸ್

ಫಿಲಿಪೈನ್ಸ್ ರಾಜ್ಯ ಏಶಿಯದ ಅಖಂಡ ಭೂಮಿಗೆ ಸೇರಿಲ್ಲವಾದರೂ ಈ ದ್ವೀಪ ಖಂಡದ ರಾಜಕಾರಣವಲಯದಿಂದ ಅದು ಪ್ರತ್ಯೇಕವಾಗಿರಲಾರದು. ಮೊನ್ನೆ ಮೊನ್ನೆ ಸ್ವಾತಂತ್ರ್ಯವನ್ನು ಸಂಪಾದಿಸಿದ ಈ ಎಳೆಯ ರಾಜ್ಯ ಎಷ್ಟುಮಟ್ಟಿಗೆ ತನ್ನ ಪ್ರಭಾವವನ್ನು ಏಶಿಯದ ಉನ್ನತಿಗಾಗಿ ಉಪಯೋಗಿಸಿದೆ? ಮಾತಿನಲ್ಲೇನೋ ಅವರು ಪ್ರತಿಯೊಂದು ಪ್ರಸಂಗದಲ್ಲಿಯೂ ಏಶಿಯದ ಅಭಿಮಾನಿಗಳೇ ಆಗಿದ್ದರು. ಪ್ರತಿನಿಧಿಗಳು ಮುಂದಿಡಲಿಸು ವಲ್ಲಿ ಅಪ್ರತಿಮಲ್ಲರಾದ ರಶಿಯನ್ನರಿಗೆ ಪ್ರತಿಮಲ್ಲರೆಂಬಂತೆ ಅವರು ಅಭಿಮಾನ್ಯತ್ವವನ್ನು ಪ್ರದರ್ಶಿಸಿದ್ದುಂಟು. ಆದರೆ ನಿಜವಾದ ನಿರ್ಣಾಯಕ ಪ್ರಶ್ನೆಗಳು ಬಂದಾಗ ಮಾತ್ರ ಅವರು ಶಬ್ದರಾಶಿಗಳಲ್ಲಿ ತಲೆ ಮರೆಸಿಕೊಂಡು ಸಂಕುಚಿತ ಸಂಧಿಸಾಧಕತೆಯನ್ನು ಆಶ್ರಯಿಸುವರೆಂಬದಕ್ಕೆ ಉದಕಮಂಡಲದಲ್ಲಿ ಯುಕ್ತರಾಷ್ಟ್ರ ಆರ್ಥಿಕ ಸಂಸ್ಥೆಯ ಸಭೆ ಸೇರಿದಾಗ ಅವರ ನಡೆವಳಿಯೆ ನಿದರ್ಶನ.

ಭೀರುತನದ ಬ್ರಹ್ಮ, ಶ್ಯಾಮ ದೇಶಗಳು

ಇಂಡೋಚೀನಕ್ಕೂ ಇಂಡೊನೇಶಿಯಕ್ಕೂ ಸಂಘದಲ್ಲಿ ಪ್ರಾತಿನಿಧ್ಯವಿಲ್ಲದ ಪ್ರಯುಕ್ತ, ಆಗ್ನೇಯ ಏಶಿಯದ ದನಿ-ಅದು ಮೊರೆಯೆಂದೇ ಹೇಳಿದರೆ ಉಚಿತ-ಶ್ಯಾಮ ಮತ್ತು ಬ್ರಹ್ಮದೇಶಗಳ ಕಂಠಗಳಿಂದಲೇ ಕೇಳಿಬರಬೇಕು. ಬ್ರಹ್ಮದ ಪ್ರತಿನಿಧಿ ಪ್ಯಾರಿಸ್ ಅಧಿವೇಶನದ ಪ್ರಾರಂಭದಲ್ಲಿ ಚಿಕ್ಕಪುಟ್ಟ ರಾಷ್ಟ್ರಗಳು "ಈ ಸಭೆಯಲ್ಲಿ ಮಕ್ಕಳಂತೆ ಚಂದಕ್ಕೇ ಹೊರತು ಮಾತಾಡಲಿಕ್ಕಲ್ಲವೆಂದು ತೋರುತ್ತದೆ" ಎಂದು ಹೇಳಿದ್ದನು. ಇವೆರಡೂ ರಾಷ್ಟ್ರಗಳು ಈ ಬಗೆಯ ಭೀರು ನೀತಿಯನ್ನೆ ಅನುಸರಿಸುತ್ತ ಬಂದಿವೆ. ಬ್ರಹ್ಮದ ಪ್ರತಿನಿಧಿಗಳು ಸ್ವತಂತ್ರ ವಿಚಾರದ ಪ್ರಯತ್ನವನ್ನು ಕೆಲವೇಳೆ ಮಾಡಿದರು. ಆದರೆ ಶ್ಯಾಮದ ನೀತಿ ಮಾತ್ರ ಬಾಯಿಮುಚ್ಚಿಕೊಂಡು ಲಂಡನ್ ವಾಶಿಂಗ್‌ಟನ್‌ಗಳ ನೀತಿಯನ್ನು ಅನುಸರಿಸುವದೇ ಆತ್ತು.

ಪಾಕಿಸ್ತಾನದ ದುರಭಿಲಾಷೆ

ಆ ನೇಲೆ ಮುಸ್ಲಿಂ ಗುಂಪನ್ನು ತೆಗೆದುಕೊಳ್ಳಬಹುದು. ಪಾಕಿಸ್ತಾನ 'ಅತಿ ಪ್ರಚಂಡ ಮುಸ್ಲಿಂ ರಾಷ್ಟ್ರ'ವೆಂಬ ಘನವಂತಿಕೆಯನ್ನು ಹಚ್ಚಿಕೊಂಡಿದೆ. ಏಶಿಯದ ಉನ್ನತಿಯ ವಿಶಾಲ ಕ್ಷೇತ್ರದಲ್ಲಿ ಅದರ ಧೋರಣೆಯನ್ನು ನೋಡಿದರೆ ಏನು ಕಾಣುತ್ತದೆ? ಯುಕ್ತರಾಷ್ಟ್ರ ಸಂಘದ ವ್ಯಾಸಪೀಠದಲ್ಲಿ ನಡೆಯುವ ಪ್ರತಿಯೊಂದು ಕೇಶಾಕೇಶಿಯನ್ನೂ ಭಾರತದ ವಿರುದ್ಧ ಅಪಪ್ರಚಾರಕ್ಕಾಗಿ ಉಪಯೋಗಿಸಿಕೊಳ್ಳುವದೇ ಆದರ ಪಾಚಾಲ ವಿದೇಶಮಂತ್ರಿ ಜಫರುಲ್ಲಾಖಾನರ ನಿಶ್ಯವೃತ್ತಿಯಾಗಿದೆ. ಭಾರತದ ವಿರುದ್ಧ ಏಶಿಯದ ವೈರಿಗಳ ಸಹಾಯವನ್ನು ಪಡೆಯುವ ಅಯೋಗ್ಯ ಧೋರಣೆಯನ್ನು ಇದು ತೋರಿಸುತ್ತದೆ. ಅಷ್ಟಲ್ಲದೆ, ಮಧ್ಯಪೂರ್ವದ ಹಿಂದುಳಿದ ಮುಸ್ಲಿಂ ರಾಷ್ಟ್ರಗಳ ನಾಯಕತ್ವ ವಹಿಸುವ ಮಹತ್ವಾಕಾಂಕ್ಷೆಯಿಂದ ಪಾಕಿಸ್ತಾನವು [illegible] ... ತಾನೆಂದು ತೋರಿಸಿಕೊಳ್ಳುವದೇ ಅದರ ಪ್ರಧಾನ ಉದ್ದೇಶವಾಗಿದೆ [illegible] ... [illegible]

ಅರಬ ರಾಷ್ಟ್ರಗಳ ಅರ್ಥರಹಿತ ನೀತಿ

[illegible]

ಅರಬ ಲೀಗಿನ [illegible] ವಾದ ಪಾಶ [illegible] ಮನೋವೃತ್ತಿಯ ಅಭಾವ ಅನೇಕ ಯುಕ್ತ ರಾಷ್ಟ್ರ ಅಧಿವೇಶನಗಳಲ್ಲಿ ಸ್ಪಷ್ಟವಾಗಿ ಗೋಚರಕ್ಕೆ ಬಂದಿದೆ. ಏಶಿಯನ್ ಐಕ್ಯದ ವಿಶಾಲ ದೃಷ್ಟಿಯಿಂದ ನೋಡಿದರೆ, ಕಾಶ್ಮೀರ ಮತ್ತು ಹೈದರಾಬಾದ ಇವೆರಡೂ ಪ್ರಶ್ನೆಗಳಲ್ಲಿ ಸೀರಿಯದ ಪ್ರತಿನಿಧಿ ವಹಿಸಿದ ಪಾತ್ರಕ್ಕೆ ಅರ್ಥವೇ ಇದ್ದಿಲ್ಲ. ಇಂದಿಗೂ ಧಾರ್ಮಿಕ ಭಾವನೆಗಳೇ ಅರಬ ರಾಜಕಾರಣಗಳನ್ನು ಪ್ರೇರಿಸುವ ಶಕ್ತಿಯಾಗಿರುವಂತೆ ತೋರುತ್ತದೆ. ಸೀರಿಯನ್ ಪ್ರತಿನಿಧಿಯಾದ ಸೌಜನ್ಯಶಾಲಿ ಫರಿಸ್-ಎಲ್-ಖೌರಿಯವರು ಹೈದರಾಬಾದದ ಪ್ರಶ್ನೆಯಲ್ಲಿ ವಾದಿಸುತ್ತ ಚಿಕ್ಕ ರಾಷ್ಟ್ರಗಳ ರಕ್ಷಣೆಯ ಬಗ್ಗೆ ಕಳಕಳಿಯಿಂದ ಬಹಳ ಮಾತಾಡಿದರು. ಆದರೂ ಹೈದರಾಬಾದಿನ ಅರಸನು ಮುಸ್ಲಿಮನಾಗಿರುವ ಬದಲು ಹಿಂದುವೋ ಬೌದ್ಧನೋ ಆಗಿದ್ದರೆ ಅವರ ಕಣ್ಣುಗಳಿಂದ ಒಕ್ಕಿ ಕಣ್ಣೀರು ಸುರಿಯುತಿತ್ತೊ ಎಂಬುದು ಸಂಶಯಾಸ್ಪದ. ಈ ಬಗೆಯ ಭಾವನೆಗಳಿಗೆ ಎಡೆಯಿರುವಷ್ಟು ದಿನ ಅರಬ ರಾಷ್ಟ್ರಗಳ ಚಳವಳಿ ನಿಜವಾದ ಏಶಿಯನ್ ಐಕ್ಯಸಾಧಕ ಜನಪ್ರಿಯ ಚಳವಳಿಯಾಗಿ ರೂಪುಗೊಳ್ಳುವ ಆಸೆಯಿಲ್ಲ.

ಭಾರತವೂ ಜಾರತೊಡಗಿದೆ

ಕೊನೆಯದಾಗಿ ಯುಕ್ತ ರಾಷ್ಟ್ರ ಸಂಘದಲ್ಲಿ ಭಾರತ ವಹಿಸಿದ ಪಾತ್ರವನ್ನು ತೆಗೆದುಕೊಳ್ಳಬಹುದು. ಅದು ದುಡಕ್ಕ್ಷಣ ಪಾತ್ರವನ್ನು ವಹಿಸಿದೆಯೆಂದು ಹೇಳಿದರೆ ನಮಗೆ ತುಂಬ ಹೆಮ್ಮೆಯೆನಿಸಬಹುದಾದರೂ ಅದು ಸತ್ಯಕ್ಕೆ ತೀರ ಸಮೀಪವಾಗಿದೆಯೆಂದು ಹೇಳಬರುವದಿಲ್ಲ. ಸಂಘದ ಸಾಧಾರಣ ಸಭೆಯಲ್ಲಿ ಭಾರತ [illegible] ಅಪೂರ್ವ ಗೌರವ ನಮ್ಮ [illegible] ಮಂತ್ರಿ [illegible] ದೊರೆತದ್ದು [illegible] ಏಶಿಯನ್ ರಾಷ್ಟ್ರಗಳ ಉನ್ನತಿಯ ಅವಶ್ಯಕತೆಯನ್ನು ಎಲ್ಲ ಬಗೆಯ [illegible] ... [illegible] ನಮ್ಮ [illegible] ಯು. ರಾ. ಸಂಘದಲ್ಲಿ [illegible] ... [illegible]?

ನಮ್ಮ ಧೋರಣೆ [illegible] ... [illegible]

—[illegible]

ಪೂರ್ವ ನಿರ್ಮಿತ ಮನೆಗಳ ಪ್ರಸಾರ

ಕೆಳಗೆ: ಲಂಡನ್ನಿನ ಪೂರ್ವನಿರ್ಮಿತ ಗೃಹದ ಮುಂದಿನ ಹೂದೋಟಗಳ ಅಕೃತಿ.



ಪೂರ್ವ ನಿರ್ಮಿತ ಭಾಗಗಳಿಂದ ಮನೆಗಳನ್ನು ಕಟ್ಟುವ ಪದ್ಧತಿ ಯುದ್ಧ ವಿಧ್ವಸ್ತ ದೇಶಗಳಲ್ಲಿ ಹೆಚ್ಚಾಗಿ ಬಳಕೆಗೆ ಬರುತಿದೆ. ಕಾರಖಾನೆಗಳಲ್ಲಿ ವಿಶಿಷ್ಟ ಅಳತೆಗಳ ಗೃಹ ಭಾಗಗಳು ಸಿದ್ಧವಾಗುತಿದ್ದು, ಅವುಗಳಲ್ಲಿ ಸಾಮಾನ್ಯ ಮನೆಗಳಲ್ಲಿರುವ ಎಲ್ಲ ಸೌಕರ್ಯಗಳಿಗೂ ಅವಕಾಶ ಕಲ್ಪಿಸಲ್ಪಟ್ಟಿದೆ. ಇದರ ಅಕ್ಕ ಪಕ್ಕಗಳಲ್ಲಿರುವ ಚಿತ್ರಗಳಲ್ಲಿ ಲಂಡನ್ನಿನ ಟೊಂಬಾಲ ರಸ್ತೆಯ ಪೂರ್ವನಿರ್ಮಿತ ಗೃಹಗಳ ಸಾಲಿನ ಒಳ ಹೊರಗಿನ ದೃಶ್ಯಗಳನ್ನು ಕಾಣುವಿರಿ.

ಭಾರತದಲ್ಲಿಯೂ ಈ ಪೂರ್ವನಿರ್ಮಿತ ಭಾಗಗಳಿಂದ ಮನೆಗಳನ್ನು ಕಟ್ಟುವ ಉಪಕ್ರಮ ಸಣ್ಣಾಗಿ ಪ್ರಾರಂಭವಾಗಿದೆ. ಸಾಮಾನ್ಯ ಕುಟುಂಬಗಳಿಗೆ ಅವಶ್ಯವಾದ ಎರಡು ಕೋಣೆಗಳು, ಹೊರಜಗಲಿ, ಅಡಿಗೆ ಮನೆ, ಬಚ್ಚಲ ಮನೆ ಮತ್ತು ಪಾಯಖಾನೆಗಳುಳ್ಳ ಮನೆಗಳ ಬಿಡಿಭಾಗಗಳು ತಯಾರಿಸಲ್ಪಡುವ ಕಾರಖಾನೆಯೊಂದು ದಿಲ್ಲಿಯ ಸಮೀಪದಲ್ಲಿ ಸರಕಾರದಿಂದ ಪ್ರಾರಂಭಿಸಲ್ಪಟ್ಟಿದ್ದು ಅಲ್ಲಿ ವರ್ಷಕ್ಕೆ ಸುಮಾರು ೫೦೦೦ ಮನೆಗಳು ತಯಾರಾಗುವ ವ್ಯವಸ್ಥೆ ಮಾಡಲ್ಪಟ್ಟಿದೆ.





ಎಡ(ಕ್ಕೆ) ಪೂರ್ವ ನಿರ್ಮಿತ ಗೃಹಗಳ ಒಂದು ದೃಶ್ಯ. (ಬಲಕ್ಕೆ) ಪೂರ್ವ ನಿರ್ಮಿತ ಗೃಹದ ಒಳಭಾಗದ ?

ಗೋರಿಯಿಂದ ಹೊರ ಬಂದ ಹುಡುಗ

ಬ್ರಿಟನ್ನಿನ "ರೆನಾಲ್ಡ್ಸ ನ್ಯೂಸ್" ಪತ್ರಿಕೆಯಲ್ಲಿ ಭಾರತದಲ್ಲಿ ಜರಗಿದ ಚಮತ್ಕಾರಿಕ ಘಟನೆಯೊಂದರ ವರದಿ ಬಂದಿದೆ. ಈ "ಕಥೆಗೆ" ಆ ಪತ್ರಿಕೆ ಮೂರು ಕಾಲಂ ಸ್ಥಳ ಕೊಟ್ಟು "ಇದು ಮಂತ್ರಯೋಗವೆ?" ಎಂದು ಪ್ರಶ್ನಿಸಿದೆ.

ತಮಿಳು ನಾಡಿನ ಸಮುದ್ರ ತೀರದ ಪಮುನಿಯನ್ ಕೊಟ್ಟಂ ಎಂಬ ಹಳ್ಳಿಯಲ್ಲಿ ನಡೆದ ಸಂಗತಿ. ಹರಿಜನ ಜಾತಿಯಿಂದ ಕ್ರೈಸ್ತಮತಕ್ಕೆ ಸೇರಿದ ಒಂದು ಕುಟುಂಬದಲ್ಲಿ ಗುರುಪಾದಂ ಎಂಬ ಹುಡುಗನೂ ಅವನ ಇಬ್ಬರು ತಮ್ಮಂದಿರೂ ಅಮಶಂಕೆಯಿಂದ ಸತ್ತಿದ್ದರು. ಅವರನ್ನು ಊರ ಹೊರಗೆ ಹುಗಿಯಲಾಗಿತ್ತು. ನಡುರಾತ್ರಿಯಲ್ಲಿ 'ಹೊರಗೆ ಬಾ!' ಎಂದು ಯಾರೋ ಕರೆಯುವಂತೆ ಗುರುಪಾದಂಗೆ ಕೇಳಿತು. ಮೇಲೆ ಮಣ್ಣು ಜರಿದಿದ್ದುದರಿಂದ ಅವನು ಬಹಳ ಕಷ್ಟಪಟ್ಟು ಹೊರಗೆ ಬಂದ. ಎದುರಿಗೆ ಒಬ್ಬ ಸಾಧು. 'ಹೋಗು, ಮನೆಗೆ ಹೋಗು!' ಎಂದು ಆಜ್ಞಾಪಿತನಾಗಿ ಆತ ಮನೆಗೆ ಹೋದರೆ ಅವನ ತಂದೆ ತಾಯಿಗಳು ದೆವ್ವ ಬಂತೆಂದು ಬಗೆದು ಬಾಗಿಲು ಹಾಕಿಬಿಟ್ಟರು. ಆಗ ಆ ಸಾಧು ಅವನನ್ನು ನೆರೆಯೂರಿಗೆ ಕರೆದೊಯ್ದು ಅಲ್ಲಿ ಕೂಲಿ ಕೆಲಸಕ್ಕೆ ಹಚ್ಚಿದ.

ಒಂದು ವರ್ಷದ ನಂತರ ಅವನ ಈ ಕತೆಯನ್ನು ಕೇಳಿ ಇತರ ಕೂಲಿಕಾರರು ಅವನ ತಂದೆಯೊಡನೆ ಸಂಪರ್ಕ ಬೆಳೆಸಿದರು. ಹುಡುಗನನ್ನು ಅಟ್ಟಿ ಮರುದಿನ ತಂದೆ ಹೋಗಿ ಅವನ ಗೋರಿಯನ್ನು ಪರೀಕ್ಷಿಸಿದಾಗ ಶವ ಕಣ್ಮರೆಯಾಗಿತ್ತು. ನರಿಗಳ ಕೆಲಸವಿರಬೇಕೆಂದು ಸುಮ್ಮನಿದ್ದ. ಮತ್ತೆ ಸುದ್ದಿ ಬಂದೊಡನೆ ಅವನು ಮಗನನ್ನು ನೋಡಹೋದ. ಆದರೆ ಅವನನ್ನು ಕಂಡೊಡನೆ ಅವನ ಜಂಘಾಬಲವೇ ಉಡುಗಿಹೋಯಿತು. ಹುಡುಗನ ಮೈಯಲ್ಲಿದ್ದ ಗಾಯದ ಕುರುಹು ಸಹಿತ ಎಲ್ಲವೂ ಯಥಾಪ್ರಕಾರವಾಗಿತ್ತು. ಮುಂದೂ ಕೆಲ ತಿಂಗಳ ಮೇಲೆ ತಂದೆ ಧೈರ್ಯ ಮಾಡಿ ಅವನನ್ನು ಕರೆದೊಯ್ದ.

ಹುಡುಗ ನಿಜವಾಗಿ ಸತ್ತಿರದೆ ಬರಿ ಮೂರ್ಛಿತನಾಗಿದ್ದಿರಬಹುದು. ಆದರೆ ಸಜೀವ ಪ್ರಾಣಿಯೊಂದು ನೆಲದ ಉಡಿಯಲ್ಲಿದೆಯೆಂದು ಸಾಧುವಿಗೆ ಹೇಗೆ ಗೊತ್ತಾಯಿತು?— ಎಂದು ಸುದ್ದಿಗಾರ ಆಶ್ಚರ್ಯಪಟ್ಟಿದ್ದಾನೆ.

*

ಬಿಳಿಯರು ಬಿಳಿಯರಲ್ಲ ಕರಿಯರು ಕರಿಯರಲ್ಲ!

ಬಿಳಿಯೆಂದರೆ ಉಚ್ಚ, ಕರಿಯೆಂದರೆ ನೀಚ, ಎಂಬ ತತ್ವವನ್ನವಲಂಬಿಸಿ "ಸುಜ್ಞಾನ"ದ ಈ ಇಪ್ಪತ್ತನೆ ಶತಮಾನದಲ್ಲಿ ಕೂಡ ಜಗತ್ತಿನ ಅನೇಕ ಪ್ರದೇಶಗಳಲ್ಲಿ ಮನುಷ್ಯರು ಮನುಷ್ಯರನ್ನು ಮೆಟ್ಟುತ್ತಾರೆ. ಆದರೆ ಈಚೆಗೆ ಅಮೇರಿಕೆಯ ಜನರಲ್ ಇಲೆಕ್ಟ್ರಿಕ್ ಕಂಪನಿಯವರು ಮನುಷ್ಯನಿಗೆ ಅತಿ ನೆಮ್ಮದಿಯಾಗುವಂತೆ ಮಾಡಬೇಕಾದರೆ ವಿದ್ಯುದ್ದೀಪದ ಬಲಬುಗಳು ಯಾವ ಬಣ್ಣದವಿರಬೇಕೆಂದು ಕಂಡುಹಿಡಿಯುವಗೋಸ್ಕರ ಸಂಗ್ರಹಿಸಿದ ಅಂಕೆ ಸಂಖ್ಯೆಗಳ ಪರಿಣಾಮದಿಂದ ಬಣ್ಣದ ಬಣ್ಣ ಹೊರಬಿತ್ತು. ಬಿಳಿಯರು ಬಿಳಿಯರೇ ಅಲ್ಲ, ಹಳದಿ ಬಣ್ಣದವರು ಬಿಳಿಯರಿಗಿಂತ ಬಿಳಿಯರು, ಕರಿಯರು ಕರಿಯರೂ ಅಲ್ಲ ಬಿಳಿಯರೂ ಅಲ್ಲವೆಂದು ವಿವಿಧ ಜನಾಂಗಗಳ ಸಾವಿರಾರು ಜನರ ಚರ್ಮ ಬಣ್ಣವನ್ನು ವೈಜ್ಞಾನಿಕರು ಅಳೆದಾಗ ತಿಳಿದುಬಂತು.

ಮನುಷ್ಯ ಲೋಕವನ್ನು ಮುಖ್ಯವಾಗಿ ಮೂರು ಕುಲಗಳಾಗಿ ವಿಂಗಡಿಸಲಾಗುತ್ತದೆ. ಯುರೋಪಿಯನ್ನರನ್ನೊಳಗೊಂಡ (ಭಾರತೀಯರು ಸಹ) ಕಾಕೇಶಿಯನ್ನರು, ಏಶಿಯನ್ನರು (ಚೀನಿ ಮೊದಲಾದವರು) ಮತ್ತು ನಿಗ್ರೋಗಳು (ಆಫ್ರಿಕನ್ನರು). ಈ ಮುಖ್ಯ ಕುಲಗಳಲ್ಲಿ ವಿವಿಧ ವರ್ಣಗಳ ಜನರ ಚರ್ಮದಲ್ಲಿ ಕಾಣುವ ಬಣ್ಣಗಳ ಅಂಶ ಈ ಕೆಳಗಿನಂತಿದೆ:

	ಕಾಕೇಶಿಯನ್	ಏಶಿಯನ್	ನಿಗ್ರೊ
ಕೆಂಪು	೬೫	೫೬	೪೦
ಕಿತ್ತಳೆ	೬೨	೫೩	೩೩
ಹಳದಿ	೪೭	೩೮	೨೬
ಹಸುರು	೩೦	೨೬	೧೬
ನೀಲಿ	೩೨	೨೪	೧೪
ಕಡುನೀಲಿ (ಇಂಡಿಗೊ)	೧೮	೧೨	೮
ನೇರಳೆ (ಜಾಂಬಳಿ)	೧೮	೧೩	೮

ಬಿಳಿಯ ಬಣ್ಣವೆಂಬದೇ ಚರ್ಮದಲ್ಲಿಲ್ಲ. ಬಿಳಿಯರೆನಿಸಿಕೊಳ್ಳುವವರು ನಿಜವಾಗಿ ಕೆಂಪು ಬಣ್ಣದವರು. ಕಾಕೇಶಿಯನ್ ಕುಲಕ್ಕೆ ಸೇರಿದ ಸಾಮಾನ್ಯ "ಬಿಳಿಯ"ರಿಗಿಂತಲೂ ಹೆಚ್ಚು ಬೆಳ್ಳಗಿರುವ ನಿಗ್ರೋ ಮತ್ತು ಏಶಿಯನ್ ಜನರೆಷ್ಟೋ ಇದ್ದಾರೆ!

ಇಷ್ಟೇ ಅಲ್ಲ. ಹೆಂಗಸರು ಸಾಮಾನ್ಯವಾಗಿ ಗಂಡಸರಿಗಿಂತ ಹೆಚ್ಚು ಲಘುವಾದ ಬಣ್ಣವುಳ್ಳವರು. ಅಂದ ಮೇಲೆ ಬಣ್ಣ ಬಣ್ಣಗಳ ಭೇದವನ್ನೆಣಿಸುವದಾದರೆ ಎಲ್ಲ ಗಂಡಸರನ್ನು ಮೆಟ್ಟಬೇಕಾದೀತು. ಇನ್ನು ಒಬ್ಬನೇ ಮನುಷ್ಯನ ಬಣ್ಣವೂ ಹನ್ನೆರಡೂ ತಿಂಗಳೂ ಒಂದೇ ಬಗೆಯಾಗಿರುವದಿಲ್ಲ. ಸೆಪ್ಟೆಂಬರ ತಿಂಗಳಲ್ಲಿ ಸಾಮಾನ್ಯವಾಗಿ ಇಡಿ ಉತ್ತರಾರ್ಧ ಗೋಲದಲ್ಲಿ ಜನರು ಹೆಚ್ಚು ಕಪ್ಪಗಾಗಿ ಕಾಣುವರು!

*

ಮೋಡಗಳನ್ನು ಒಲಿಸುವದು

ಕಳೆದೆರಡು ವರ್ಷಗಳಿಂದ ಅನಾವೃಷ್ಟಿ ಪೀಡಿತವಾದ ದೇಶಗಳು ಕವಿ ಸಮುದಾಯದ ಚಾತಕ ಪಕ್ಷಿಗಳಂತೆ ವೃಷ್ಟಿ ಸೃಷ್ಟಿಯ ಪ್ರಯತ್ನಗಳ ಫಲವನ್ನು ಎದುರು ನೋಡುತಿವೆ. ಕೃಪಣವಾದ ಒಣ ಮೇಘಗಳು ಆಕಾಶದಲ್ಲಿ ಹಾಯ್ದು ಹೋಗುವಾಗ ವಿಮಾನಗಳಲ್ಲಿ ಅವುಗಳಾಚೆಗೆ ಹಾರಿ ಮೇಲಿಂದ 'ಒಣ ಮಂಜುಗಡ್ಡೆ' ಗಳನ್ನು ಪಸರಿಸುವ ಮೂಲಕ ಅವುಗಳನ್ನು ಪ್ರಸನ್ನಗೊಳಿಸಿದರೆ, ಒಮ್ಮೊಮ್ಮೆ ಮಳೆಯಾದುದು ಕಂಡು ಬಂದಿತ್ತು. ಆದರೆ ಅಮೇರಿಕೆಯಲ್ಲಿ ಮಾಡಿದ ಈ ಬಗೆಯ ಪ್ರಯತ್ನಗಳು ಬಹುತೇಕ ಅಯಶಸ್ವಿಯಾಗಿದೆಯೆಂದು ವರದಿಯಾಗಿದೆಯಾದರೂ ದಕ್ಷಿಣ ಆಫ್ರಿಕೆಯ ಟ್ರಾನ್ಸವಾಲದಲ್ಲಿ ಅವು ಹೆಚ್ಚು ಯಶಸ್ವಿಯಾಗಿವೆಯೆಂದು "ನೇಚರ್" ಪತ್ರಿಕೆ ವರದಿ ಮಾಡಿದೆ. ಕೆಲವು ಹುಟ್ಟುಬಂಜೆ ಮೋಡಗಳಿದ್ದು ಅವು ಏನು ಮಾಡಿದರೂ ಮಳೆ ಹಡೆಯುವದಿಲ್ಲಂತೆ! ಆದರೆ ಕೆಲ ಮೋಡಗಳು ಪೋಷಣದೋಷದಿಂದ ಬಂಜೆಯಾಗಿರುತ್ತವೆ. ಅವುಗಳನ್ನು ಗುರುತಿಸುವದೇ ದೊಡ್ಡ ಕಷ್ಟ. ಮೇಲಾಗಿ ಮೋಡಗಳ ಮೇಲಿಂದ ಮಂಜಿನಗಡ್ಡೆ ಹರಹಿದರೂ ಮೋಡ ಗಡ್ಡೆಗಟ್ಟುವಷ್ಟು ತಂಪು ಮಾಡಿದರೆ ಕೆಲಸ ಕೆಡುತ್ತದೆ. ಅಲ್ಲದೆ ಮೋಡದ ಕೆಳಗಿನ ವಾತಾವರಣ ತೀರ ಉಷ್ಣವಾಗಿದ್ದರೆ ಹನಿಗೂಡಿದ ಮಳೆಯೂ ತಿರುಗಿ ಹಬೆಯಾಗಿ ಹಾರಿ ಹೋಗಬಹುದು. ಕೆಳಗೂ ತಂಪು ಮೇಲೂ ತಂಪು ಮಾಡಿದರೆ ಬಂಜೆಯಲ್ಲದ ಮೋಡಗಳು ಪ್ರಸನ್ನವಾಗುವವು. ಆದರೆ ಈ ವಿಷಯದಲ್ಲಿ ಪ್ರಯೋಗಗಳ ಮೂಲಕ ವೃಷ್ಟಿ ಸ್ವಭಾವವನ್ನು ಪೂರ್ತಿ ಅರಿತುಕೊಳ್ಳುವದು ಅವಶ್ಯವಾಗಿದೆ.

● ದೀರ್ಘಾಯುಷಿಗಳಲ್ಲಿ ನ್ಯೂಝೀಲಂಡಿನ ಜನರು ಅದ್ವಿತೀಯರು; ಅವರ ಸರಾಸರಿ ಆಯುಸ್ಸು ೬೬ ವರ್ಷ. ಡಚ್ಚರೂ ಆಸ್ಟ್ರೇಲಿಯನ್ನರೂ ಸರಾಸರಿ ೬೫ ವರ್ಷ ಬದುಕುತ್ತಾರೆ. ನಾರ್ವೆ ಸ್ವೀಡನ್ನುಗಳಲ್ಲಿ ಆಯುರ್ಮಾನ ೬೩, ಇಂಗ್ಲಂಡಿನಲ್ಲಿ ೬೨, ಜರ್ಮನಿ, ಸ್ವಿಝರ್ಲಂಡ್, ಸಂಯುಕ್ತಸಂಸ್ಥಾನ (ಅಮೇರಿಕೆ), ಫ್ರಾನ್ಸ್, ಇಟಲಿ, ರಶಿಯಾಗಳಲ್ಲಿ ೪೩ ವರ್ಷಗಳು. ಇಜಿಪ್ತ ಮತ್ತು ಭಾರತ ಅಲ್ಪಾಯುಷಿಗಳಲ್ಲಿ ಅಗ್ರೇಸರರು.

ವ್ಯಾಪಾರ ಪ್ರಪಂಚ

ಮುಂಬಯಿ ಶೇರಪೇಟೆ

ತಾ. ೨

ಮುಂಬಯಿ ಪೇಟೆಯಲ್ಲಿ ಹಣದ ಮುಗ್ಗಟ್ಟು ಹೆಚ್ಚಿ ಈಗೆರಡು ವಾರಗಳಿಂದ ಮಾರುವವರ ಒತ್ತಡ ಹೆಚ್ಚಾಗಿದೆ. ಬೆಲೆಗಳು ಕುಸಿಯ ತೊಡಗಿವೆ. ಮುಂಗಡ ಪತ್ರದ ಸಮೀಪದ ದಿನವಾದುದರಿಂದ ಪೇಟೆಯಲ್ಲಿ ಅಸ್ಥಿರತೆಯ ವಾತಾವರಣವಿದೆ. ಇಂದಿನ ಕೊನೆಯ ಬೆಲೆಗಳು ಇಂತಿವೆ:

ಮುಂಬಯಿ ಡಾಯಿಂಗ್	೯೬೮ ೧೨-೦
ಸೆಂಟ್ರಲ ಇಂಡಿಯಾ	೨೪೯-೦-೦
ಸೆಂಚುರಿ	೨೪೦-೦-೦
ಗೋಕಾಕ	೨೭೬-೦-೦
ಕೋಹಿನೂರು	೧೭೬-೪-೦
ಸಿಂಪ್ಲೆಕ್ಸ	೦೭೬-೦-೦
ಸ್ವದೇಶಿ	೨೭೬ ೦ ೦
ಬೇಲಾಪುರ ಸಕ್ಕರೆ	೨೨೬-೦-೦
ಸಿಂಧ್ಯ ಸ್ಟೀಮ	೨೦-೧-೦
ಟಾಟಾ ಸ್ಟೀಲ ಡೆಫರ್ಡ	೧೬೨೦-೦-೦
ಇಂಡಿಯನ್ ಆಯರ್ನ	೨೨ ೨-೦
ಅಸೊ ಸಿಮೆಂಟ್ಸ	೧೫೮-೮ ೦
ಸೆಂಟ್ರಲ ಬ್ಯಾಂಕ್	೯೦ ೪-೦
ಇಂಪೀರಿಯಲ್ ಪೂರ್ಣ	೧೯೦೫ ೦ ೦
ಬ್ಯಾಂಕ ಆಫ್ ಇಂಡಿಯಾ	೨೦೦-೦ ೦

ಚಿನ್ನ ಬೆಳ್ಳಿ

ಸುಂಕದ ಅಧಿಕಾರಿಗಳು ವಿದೇಶಗಳಿಂದ ಕಳ್ಳ ದಾರಿಯಲ್ಲಿ ಬರುವ ಚಿನ್ನದ ಮೇಲೆ ಬಹಳ ಸೂಕ್ಷ್ಮವಾಗಿ ಕಣ್ಣಿಟ್ಟು ಲಕ್ಷಾಂತರ ರೂಪಾಯಿಗಳ ಚಿನ್ನವನ್ನು ಹಿಡಿದಿದ್ದಾರೆ. ಪೇಟೆಗೆ ಬರುವ ಚಿನ್ನ ಕಡಿಮೆಯಾಗಿ ಬೆಲೆಗಳೇರಿವೆ. ಬೆಳ್ಳಿಯೂ ಏರುತಿದೆ. ಚಿನ್ನ ೧೧೯-೦-೦ರ ತನಕವೂ ಹೋಗಿತ್ತು. ಇಂದು ೧೧೮ ೦ ೦ರಲ್ಲಿ ಕೊನೆಗೊಂಡಿದೆ. ಬೆಳ್ಳಿ ೧೮೭ ೦-೦ ರಲ್ಲಿತ್ತು ಸಾವರೀನ ೭೫-೧೨-೦

ಅರಳಿ

ಅರಳಿ ದರಗಳು ಸ್ವಲ್ಪಾಂತರದಲ್ಲಿ ಓಡಾಡುತಿವೆ. ಹತ್ತಿ ವ್ಯಾಪಾರದ ಬಗ್ಗೆ ಲೈಸನ್ಸ ತೆಗೆದುಕೊಳ್ಳಬೇಕೆಂದು ಸರಕಾರ ವಿಧಿಸಿದೆ.

ಮೇ	೬೧೮-೧೦ ೦
ಜುಲೈ	೬೧೭ ೪-೦
ಸೆಪ್ಟೆಂಬರ	೬೧೬-೪ ೦

ಎಣ್ಣೆಕಾಳು

ಶೇಂಗಾ (ತಯಾರಿ)	೧೭೧ ೪ ೦
ಅಗಸಿ ,,	೨೬-೧೦-೦
ಅಗಸಿ (ಡಿಸೆಂ ಜನೆ)	೨೬ ೧೦-೦
ಅಗಸಿ ಎಣ್ಣೆ	೧೬ ೧೦-೦

ಸಾಂಗಲಿ ಪೇಟೆ

ಅರಿಸಿಣ	೧೧೫-೧೨೧
ಮೆಣಸಿನಕಾಯಿ	೧೦೦-೧೮೨
ಶೇಂಗಾ	೧೨೬॥
ಬೆಲ್ಲ	೪೦-೪೫

ಹುಬ್ಬಳ್ಳಿ

ತಾ. ೨

ಜ. ಹತ್ತಿ ನಗಕ್ಕೆ		೪೯೫-೫೨೧
ಮುಂ. ಹತ್ತಿ		೪೭೫-೫೦೧
ಜ. ಅರಳಿ ,,		೨೯೦ ೩೧೧
ಜ. ಹತ್ತಿಕಾಳು	ರೂ.ಗೆ	೫¼ ಪೌಂಡು
ಬಿ. ಹತ್ತಿಕಾಳು	,,	೫½ ಪೌಂಡು
ಕುಸುಬಿ (ಬ ಮಣಕ್ಕೆ)		೧೬-೧೬॥
ಅಗಸಿ (ಚೀಲಕ್ಕೆ)		೩೭-೩೮॥
ಔಡಲ	,,	೪೦ ೪೧
ಜ. ಹೆಸರು	,,	೫೩-೫೫
ಕರಿ ಎಳ್ಳು	,,	೫೮-೬೦
ಬಿಳಿ ಎಳ್ಳು	,,	೬೪ ೬೮
ಕಡಲೆ	,,	೫೬ ೫೮॥
ಜ. ತೊಗರಿ	,,	೩೨ ೩೩
ಹುರಳಿ	,,	೩೪ ೩೫
ಕೆಂ. ಅಲಸಂದಿ	,,	೫೩ ೫೫
ಬಿ. ಅಲಸಂದಿ	,,	೫೮ ೬೦
ಶೇಂಗಾ (ಹೇರು)		೪೦ ೪೬

ಶಿವಮೊಗ್ಗೆ

ತಾ. ೨

ಬೇಶಾವರ ನಂ. ೧	ರೂ.	೩೦-೩೩
,, ೨		೨೭ ೩೦
,, ೩		೨೫-೨೭
ರಾಜಾ ಅಲವು		೨೭ ೩೦
ಬೆಟ್ಟವಂತಿ		೧೬ ೧೭
ಬೆಟ್ಟ		೧೩ ೧೫

ಬೇಡಿಕೆ ಚೆನ್ನಾಗಿದೆ.

ಲಂಡನ್ ಪತ್ರ

★ ಏಶಿಯ ಪರಿಷತ್ತಿನ ಪ್ರತಿಕ್ರಿಯೆ
★ ಆಂಗ್ಲೋ-ಅಮೇರಿಕನ್ನರ ಸಹಾನುಭೂತಿ
★ ಹೊಸ ಕೊಡುಗೆಯ ವಿಸ್ತರಣ

(ನಮ್ಮ ಲಂಡನ್ ಕಚೇರಿಯಿಂದ)

ಜನವರಿ ೨೬

ಭಾರತ ಮತ್ತು ಚೀನಗಳಷ್ಟೇ ಅಲ್ಲ—ಇಡೀ ಏಶಿಯವೇ ಕಳೆದ ವಾರ ಪಾಶ್ಚಾತ್ಯ ಪ್ರಭುತ್ವಗಳ ಮಿದುಳಿಗೆ ಆಹಾರವನ್ನು ಕೊಟ್ಟಿತು. ಇಲ್ಲಿ ಎಲ್ಲರೂ ಏಶಿಯ ಪರಿಷತ್ತಿನ ಬಗ್ಗೆ ಮೊದಲು ಭಯ ಸಂಶಯಗಳನ್ನು ತಾಳಿದ್ದರು. ಏಶಿಯದ ಒಂದು ಗುಂಪು ತಮ್ಮ ವಿರುದ್ಧ ಸ್ಥಾಪಿಸಲ್ಪಡಬಹುದೆಂದು ಅವರು ಊಹಿಸಿದ್ದರು. ಆ ಊಹೆ ಸುಳ್ಳಾದ್ದರಿಂದ ಪರಿಷತ್ತಿನ ಬಗ್ಗೆ ಈಗ ಎಲ್ಲೆಲ್ಲೂ ಅನುಕೂಲಾಭಿಪ್ರಾಯಗಳೇ ಹೊರಟಿವೆ.

ಕೆಲವೆಡೆ ನಿರಾಶೆಯಿದೆ. ಆದರೆ ಸನಾತನಿಗಳಿಗೆಲ್ಲ ಪರಿಷತ್ತು ಸಂ. ರಾ. ಸಂಘದಿಂದ ದೂರಹೋಗದೆ ಮೂರು ಮಧ್ಯಮಾರ್ಗದ ಗೊತ್ತುವಳಿಗಳನ್ನು ಸ್ವೀಕರಿಸಿದ್ದು ಸಂತೋಷಪ್ರದವಾಗಿದೆ. ಪರದೇಶೀಯರ ದೃಷ್ಟಿಯಿಂದ ಪರಿಷತ್ತು ಮೊದಲಿಂದ ಕೊನೆಯ ವರೆಗೂ ಯಶಸ್ವಿಯಾಗಿ ತೋರುತ್ತದೆ ಎಂದು ಅಮೇರಿಕದ ಸುದ್ದಿಗಾರನೊಬ್ಬನೆಂದ. ೨ ವರ್ಷದ ಹಿಂದೆ ನಡೆದ "ಏಶಿಯದ ಸಂಬಂಧಗಳ ಪರಿಷತ್ತಿ"ನಲ್ಲಿ ಕಂಡು ಬಂದ ಅಸ್ತವ್ಯಸ್ತ ರಾಜತಂತ್ರಜ್ಞತೆ, ಅಕ್ಷಮತ್ವ ಮತ್ತು ಕರೆಯ ಮರೆಯ ದುರ್ವಹಾರ ಈ ಬಾರಿಯ ದಿಲ್ಲಿನ ಪರಿಷತ್ತಿನಲ್ಲಿ ತೋರಲಿಲ್ಲ. ಅದರಿಂದ ಯುರೋಪಿಯನ್ನರು ಇದನ್ನು "ಸನ್ನ ಗಂಭೀರ ವಾತಾವರಣ ಮತ್ತು ವಿವೇಕಕ್ಕೆ ಕಿವಿಗೊಡುವ ಇಚ್ಛೆಗಳಿಂದ ಇದು ಎದ್ದು ಕಾಣುವಂತಿದೆ" ಎಂದು ವರ್ಣಿಸುತ್ತಾರೆ.

ಇನ್ನು ಮುಂದೆ ಏಶಿಯನ್ನರ ಬೇಳಿಕೆಗಳನ್ನೂ ಆಶಯಗಳನ್ನೂ ಅಲಕ್ಷಿಸುವುದು ಯೋಗ್ಯವೂ ಅಲ್ಲ ಸಾಧ್ಯವೂ ಅಲ್ಲ ಮತ್ತು ತಾವು ಹಿಂದಿನ ದೃಷ್ಟಿ ಕೋನ ನಾನಾ ವಿಧಾನಗಳಿಂದ ವಿವಿಧಾಂಶದ ಜಯದಿಂದ ಏಶಿಯನ್ನರ ಸಂಪತ್ತನ್ನು ಸೂರೆಗೊಳ್ಳುವ ವಿಚಾರವನ್ನು ಬಿಟ್ಟುಕೊಟ್ಟು ಅವರೊಡನೆ ಪುನಃ ಸಂಧಿ ಕೂಡುವ ಧೋರಣ ವಹಿಸಬೇಕಾಗಿದೆ. ಎಂಬುದು ಪಾಶ್ಚಾತ್ಯರಿಗೀಗ ಗೊತ್ತಾಗುವಂತಾಯಿತು. ಗೊತ್ತುವಳಿಗಳಿಗಿಂತ ಏಶಿಯದ ವ್ಯಕ್ತಿತ್ವ ಉನ್ನತವಾದುದೇ ಪರಿಷತ್ತಿನಲ್ಲಿ ಬಹಳ ಮಹತ್ವದ್ದಾಗಿದೆ. ಇದಕ್ಕೆ ಪಂಡಿತ ನೆಹರುಗಳ ಪ್ರಯತ್ನ ಕಾರಣವಲ್ಲದೆ ಬೇರಾವುದು?

ಚೀನೀ ಸಂಗತಿಗಳು

ಚಿಯಾಂಗರ ಅಧಃಪಾತ ದಿಲ್ಲಿಯ ಪರಿಷತ್ತಿಗೆ ಮತ್ತಷ್ಟು ಪಿರುಗುಕೊಟ್ಟುದಲ್ಲದೆ, ಬ್ರಿಟನ್ ಮತ್ತು ಅಮೇರಿಕಗಳ ವಿದೇಶಶಾಖೆಗಳಲ್ಲಿ ಕಾರ್ಯಗತಿ ತೀವ್ರವಾಗುವಂತೆ ಮಾಡಿತು. ಒಮ್ಮಿಂದೊಮ್ಮೆ ತಾವು ಚೀನದ ಬಗ್ಗೆ ತಮ್ಮ ಧೋರಣವನ್ನು ಬದಲಾಯಿಸಬೇಕೆಂಬ ಬುದ್ಧಿ ಈ ನಾಡುಗಳಿಗುಂಟಾಯಿತು. ಚಿಯಾಂಗರೊಡನಿಟ್ಟುಕೊಂಡಿದ್ದ ಸರ್ವ ಸಂಬಂಧಗಳನ್ನು ಪರಿತ್ಯಜಿಸಿ ಕೈತೊಳೆದುಕೊಳ್ಳಬೇಕೆಂದು ಪತ್ರಿಕೆಗಳು ಬರೆದಿವೆ. ಅಲ್ಲದೆ, ಶೀಘ್ರವಾಗಿ ಹೊಸ ಸರಕಾರದೊಡನೆ ಒಪ್ಪಂದ ಮಾಡಿಕೊಳ್ಳಬೇಕೆಂದು ಅವು ಬುದ್ಧಿವಾದ ಕೊಡುತ್ತಿವೆ. ಚೀನೀ ಸರಕಾರ ಉರುಳಿದ್ದು ಸ್ಥಳೀಯ ಕಮ್ಯೂನಿಸ್ಟರಿಗಷ್ಟೇ ಅಲ್ಲದೆ ರಶಿಯಕ್ಕೂ ಮಹಾಯುದ್ಧಾನಂತರ ದೊರೆತ ಅದ್ಭುತ ವಿಜಯವೆನಿಸಿದೆ. ಆದರೂ ಆಂಗ್ಲೋ ಅಮೇರಿಕನ್ನರು ಚೀನದ ಕಮ್ಯುನಿಸ್ಟ್ ಸರಕಾರದೊಡನೆ ಒಪ್ಪಂದಮಾಡಿಕೊಳ್ಳಲು ಸಿದ್ಧವಾಗುತ್ತಿವೆ. ಇದು ನಾಳೆ ಬರಲಿರುವ ಜಾಗತಿಕ ಪರಿಸ್ಥಿತಿಗೆ ಸೂಚಕವೆಂಬುದನ್ನು ಹೊಸದಾಗಿ ಹೇಳಬೇಕೇ?

ಟ್ರೂಮನ್ನರ ನವವಿಧಾನ

ಟ್ರೂಮನ್ನರ ನವವಿಧಾನದ ವಿಸ್ತರಣದಿಂದ ಅಮೇರಿಕವೀಗ ಕೇವಲ ರಾಜಕೀಯವಾಗಿ ಅಲ್ಲದೆ ಆರ್ಥಿಕವಾಗಿಯೂ ತನ್ನ ಪ್ರತ್ಯೇಕ ಅಸ್ತಿತ್ವವನ್ನು ಬಿಟ್ಟುಕೊಟ್ಟಿತೆನ್ನಬಹುದು. ಶಾಂತಿ ಸ್ವಾತಂತ್ರ್ಯಗಳ ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಕೆಳಗಿನ ನಾಲ್ಕು ಕಾರ್ಯವಿಧಾನಗಳನ್ನು ಪ್ರಧಾನವಾಗಿ ಇಟ್ಟುಕೊಳ್ಳಬೇಕೆಂದು ಟ್ರೂಮನ್ನರೆಂದರು: (೧) ಸಂ. ರಾ. ಸಂಘಕ್ಕೆ ಸ್ಥಿರವಾದ ಬೆಂಬಲ ನೀಡುವುದು; (೨) ಜಗತ್ತಿನ ಆರ್ಥಿಕ ಪುನರುದ್ಧಾರಕ್ಕಾಗಿ ಹಿಡಿದ ಕಾರ್ಯಕ್ರಮಗಳನ್ನು ಮುಂದೆಯೂ ನಡೆಸಿಕೊಂಡು ಹೋಗುವುದು; (೩) ಕಮ್ಯುನಿಸ್ಟರ ಪ್ರಭಾವದಿಂದ ದೂರವಿರುವ ದೇಶಗಳಿಗೆ ಶಸ್ತ್ರಬಲ ಕೊಡುವುದು; (೪) ಜಗತ್ತಿನಲ್ಲಿ ಅರ್ಧದಷ್ಟಿರುವ ಆಫ್ರಿಕ ಮತ್ತು ದೂರಪ್ರಾಚ್ಯಗಳ ಸುದೈವಹೀನ ಪ್ರಜೆಗಳ ಸ್ಥಿತಿಗತಿಗಳನ್ನು ಸುಧಾರಿಸುವುದು.

ಮಾತಾಡುವ ಕೈಗಂಬಗಳು

ಲಂಡನ್ನಿನ ಪೋಲೀಸರು ಮಕ್ಕಳ ಮಾರ್ಗದರ್ಶನಕ್ಕಾಗಿ ಅಲ್ಲಿ ಹೊಸದಾಗಿ ತಯಾರಿಸಿದ ಮಾತಾಡುವ ಕೈಗಂಬಗಳನ್ನು ಸ್ಥಾಪಿಸಿದ್ದಾರೆ.

ಈ ಕಂಬಗಳು ಬೆಳಕನ್ನು ಧ್ವನಿಯೊಡನೆ ಸಂಯೋಜಿಸಿ ಏಕಕಾಲದಲ್ಲಿ ಅವು ಕಣ್ಣಿಗೆ ಕಿವಿಗೆ ಪ್ರದರ್ಶನೀಯವಾಗಿ ಎಚ್ಚರಿಕೆ ಕೊಡುವಂತೆ ಮಾಡಲಾಗಿದೆ. ದೀಪ ಬದಲಾದ ಕೂಡಲೆ ಸೌಮ್ಯ ಸ್ವರದಿಂದ ಅವು "ಎಡಕ್ಕೆ ನೋಡು," "ಈಗ ದಾಟು" "ಅಡಕ್ಕಾಗಿ ಕಾದಿರು," ಮುಂತಾದ ಸಲಹೆಯನ್ನು ಕೊಡುವವು. ಮಕ್ಕಳು ದಾಟುವಾಗ ವಿಶೇಷ ಎಚ್ಚರಿಕೆಗಳಿವೆ: "ಮಕ್ಕಳೇ ನೀವು ಬೇಗ ಹೋಗುವಿರೆಂಬುದನ್ನು ನೋಡಿಕೊಳ್ಳಿರಿ," "ಮಕ್ಕಳೇ, ನೀವೀಗ ದಾಟಬಹುದು, ಆದರೆ ಬೇಗನೆ ದಾಟಬೇಕು" ಎಂದು ಆಯಾ ಸ್ಥಳದ ಆಡುಭಾಷೆಗಳಲ್ಲಿ ಕಂಬಗಳು ನುಡಿಯುತ್ತವೆ.



ಲಂಡನ್ನಿನ ವೆಸ್ಟ್ ಮಿನಿಸ್ಟರ್ ಚರ್ಚಿಗೂ ಪಾರ್ಲಿಮೆಂಟಿನ ಸೇಂಟ್ ಸ್ಟೀಫನ್ಸ್ ಹೆಬ್ಬಾಗಿಲಿಗೂ ನಡುವಣ ರಸ್ತೆಯಲ್ಲಿ ಈ ಪ್ರಕಾರ ಬೇಗ ತೆಂತಿಒತನ ಬಿಳಿಯ ಬಣ್ಣದ ಪಟ್ಟೆಗಳಿಂದ ಕಾಲುನಡೆಯುವರು ದಾಟುವ ಸ್ಥಳಗಳನ್ನು ಗುರುತಿಸಲಾಗಿದೆ. ಈ ರಾಗವೆಲ್ಲಿ ೧೫ ಅಂಗುಲ ಅಗಲ ಮತ್ತು ಐದು ಅಡಿ ಉದ್ದವಿದೆ.

ಉತ್ತರ ಅಟ್ಲಾಂಟಿಕ್ ಸಂರಕ್ಷಣದ ಒಪ್ಪಂದ

ಯುರೋಪಿನಲ್ಲಿ ಉತ್ತರ ಅಟ್ಲಾಂಟಿಕ್ ಸಂರಕ್ಷಣ ಒಪ್ಪಂದ ಕೊನೆಯದಾಗಿ ರೂಪಿಸಲ್ಪಡುತ್ತಿದೆ. ಸಂರಕ್ಷಣಕ್ಕಾಗಿ ಡಚ್ ತೀರದಿಂದ ಸ್ವಿಸ್ ಗಡಿಯವರೆಗಿನ ಪ್ರದೇಶವನ್ನು ಒಬ್ಬ ಉಚ್ಚ ಸೇನಾಪತಿಯ ವಶಕ್ಕೆ ಒಪ್ಪಿಸುವುದು ಒಪ್ಪಂದದ ಮುಖ್ಯಾಂಶ. ಈ ವಾರ ಒಪ್ಪಂದದ ಮುಖ್ಯ ವಿವರಗಳು ಶ್ರೀ ಅರ್ನೆಸ್ಟ್ ಬೆವಿನ್ನರ ಅಧ್ಯಕ್ಷತೆಯಲ್ಲಿ ಚರ್ಚಿಸಲ್ಪಡಬಹುದು.

ಬ್ರಹ್ಮೀ ಯಾದವಿ

ಬ್ರಹ್ಮದೇಶದಲ್ಲಿ ಸರಕಾರಕ್ಕೂ ಕಾರೆನ್ ಗುಂಪಿಗೂ ನಡೆಯುತ್ತಿದ್ದ ಕಲಹವಿಂದು ಪ್ರಬಲವಾಗಿದೆ. ಅದರ ಫಲವಾಗಿ ರಂಗೂನಿಗೆ ೪೦ ಮೈಲು ದೂರದಲ್ಲಿರುವ ಪೆಗುವನ್ನು ಹಿಡಿಯಲು ಕಾರೆನ್ನರು ಪ್ರಯತ್ನಿಸುತ್ತಿದ್ದಾರೆಂದೂ ಬ್ರಹ್ಮೀ ಸರಕಾರವು ಕಳೆದುಕೊಂಡ ತೌಂಗು ಮತ್ತು ಪ್ಯು ನಗರಗಳನ್ನು ಪುನಃ ಆಕ್ರಮಿಸಲು ದಂಡೆತ್ತಿ ಹೋಗಿದೆಯೆಂದೂ ತಿಳಿಯುತ್ತದೆ.

ಯುದ್ಧ ಬಹಳ ಜೋರಾಗಿ ಸಾಗಿದೆ. ಅವರ ಮಧ್ಯಬ್ರಹ್ಮದಲ್ಲಿ ಕಾರೆನ್ನರು ಕಮ್ಯುನಿಸ್ಟರೊಡನೆ ಕೂಡಿದರೋ ಹೇಗೆಂಬುದು ಗೊತ್ತಿಲ್ಲ. ಪೌಂಗುವನ್ನು ಕಾರೆನ್ನರು ಹಿಡಿದುದರಿಂದ ಉತ್ತರ ಮತ್ತು ದಕ್ಷಿಣ ಬ್ರಹ್ಮದೇಶಗಳ ನಡುವಣ ಸಾರಿಗೆಯ ಸಂಪರ್ಕ ನಿಂತುಹೋಗಿದೆ. ಅದರ ಪರಿಣಾಮವಾಗಿ ರಂಗೂನಿನಲ್ಲಿ ಆಹಾರದ ಕೊರತೆಯುಂಟಾಗಬಹುದಾಗಿದೆ. ಇಷ್ಟಲ್ಲದೆ, ೨೦೦ ಕಾರೆನ್ನರು ಬ್ರಹ್ಮದೇಶದ ಗಡಿಯನ್ನು ದಾಟಿ ಸಯಾಮಿನೊಳಗೆ ನುಗ್ಗಿ ಮೊದಾಂಗ್ವಾನಲ್ಲಿಯ ವಾಲ್‌ಫ್ರಾಂ ಗಣಿಯ ಮೇಲೆ ದಾಳಿ ಮಾಡಿದರೆಂದು ಸುದ್ದಿ.

ಚೀನೀ ಸಂಧಾನ

ಚೀನದ ಅಧ್ಯಕ್ಷ ಜನರಲಿಸಿಮೋ ಚಿಯಾಂಗ್ ಕೈಶೇಕರನ್ನು ಹಿಡಿದು ಒಪ್ಪಿಸಬೇಕೆಂದು ಕಮ್ಯುನಿಸ್ಟರು ಹಾಕಿದ ಕರಾರು ಅವರ ಕೊನೆಯ ಮಾತಾಗಿರಲಾರದೆಂದೂ ಕಮ್ಯುನಿಸ್ಟರು ಮನಸ್ಸು ಬದಲಿಸಬಹುದೆಂದೂ ತಾತ್ಪೂರ್ತಿಕ ಅಧ್ಯಕ್ಷ ಲಿ ಸುಂಗರು ಇನ್ನೂ ನಂಬಿದ್ದಾರೆ. ಅವರ ಖಾಸಗಿ ರಾಯಭಾರಿಯಾದ ಪಾಂಗ್ ಚಿಹಾನರು ಪೀಪಿಂಗಿಗೆ ಹೋಗಿ ಕಮ್ಯುನಿಸ್ಟ್ ಧುರೀಣರೊಡನೆ ಮಾತುಕತೆ ನಡೆಸಿಬಂದರು. ಅದರ ವಿವರ ವಿನ್ನೂ ತಿಳಿದಿಲ್ಲ. ಚೀನೀ ಕಮ್ಯುನಿಸ್ಟರು ಚೀನೀ ಸರಕಾರದ ವಶದಲ್ಲಿರುವ ಬೇರೆ ಬೇರೆ ಪಂಗಡಗಳೊಡನೆ ಒಡಂಬಡಿಕೆ ಮಾಡಿಕೊಳ್ಳಬಹುದೆಂದು ತರ್ಕಿಸಲಾಗಿದೆ.

ತಿದ್ದುಪಡಿ

[ಈ ಸಂಚಿಕೆಯ ಪುಟ ೧೫ ರಲ್ಲಿ ಪ್ರಕಟವಾಗಿರುವ ಭವಿಷ್ಯ ತಾ. ೭ ರಿಂದ ೧೩ ರ ವರೆಗಿನ ದಿರದೆ ೧೪ ರಿಂದ ೨೦ ರ ವರೆಗಿನದಿದೆ.

— ಸಂ. ಕ]

Reg.

ಕರ್ಮವೀರ

[illegible]

ಸ್ಟಾಲಿನ್ನರು ಸಿದ್ಧರು !

ಸ್ಟಾಲಿನ್ನರು ಮಾತಾಡುವದೇ ಅಪೂರ್ವ. ಮಾತಾಡಿದಾಗಲೆಲ್ಲ ಜಗತ್ತು ಬೆಚ್ಚಿಬಿದ್ದು ಅತ್ತ ಆಶೆಯಿಂದಲೋ ಭೀತಿಯಿಂದಲೋ ನೋಡತೊಡಗುವದು ರೂಢಿಯಾಗಿಬಿಟ್ಟಿದೆ. ಕಳೆದ ರವಿವಾರ ಅವರು ಅಮೇರಿಕೆಯ ಹರ್ಸ್ಟ ಸುದ್ದಿ ಸಂಸ್ಥೆಯ ಶ್ರೀ ಕಿಂಗ್ಸಬರಿ ಸ್ಮಿತ್ ಇವರ ಪ್ರಶ್ನೆಗಳಿಗೆ ಕೊಟ್ಟ ಉತ್ತರ ಯಾವರೂ ನಾಲ್ಕೂ ಸುತ್ತಲೂ ಕುತೂಹಲವನ್ನು ಕೆರಳಿಸಿದ್ದರೆ ಚೋದ್ಯವೇನೂ ಇಲ್ಲ. ಇನ್ನೂ ಒಂದು ಯುದ್ಧದ ಗಾಯಗಳು ಮಾಯವಾಗಿರದಿರುವಾಗಲೆ ಇನ್ನೊಂದು ಘನಘೋರ ಯುದ್ಧ ಪ್ರಾರಂಭವಾಗುವ ಲಕ್ಷಣಗಳಿಂದ ಕಂಗೆಟ್ಟು ಹೋಗಿದ್ದ ಜಗತ್ತಿನ ಜನಸಾಮಾನ್ಯರು ಸ್ಟಾಲಿನ್ನರ ಹೇಳಿಕೆಗಳಿಂದ ಸ್ವಲ್ಪ ಸಮಾಧಾನ ಹೊಂದುವಂತಿದೆಯೆಂದು ಹೇಳಬಹುದಾಗಿತ್ತು. ಸ್ಟಾಲಿನ್ನರು ಮುಖ್ಯವಾಗಿ ವ್ಯಕ್ತಗೊಳಿಸಿದ ಅಭಿಪ್ರಾಯಗಳಿವು: ಅಮೇರಿಕೆ ಮತ್ತು ರಶಿಯಗಳಿಗೆ ಪರಸ್ಪರ ಯುದ್ಧ ಹೂಡುವ ಇಚ್ಛೆಯಿಲ್ಲವೆಂದು ಅಧ್ಯಕ್ಷ ಟ್ರೂಮನ್ನರೊಡನೆ ಜತೆ ಹೇಳಿಕೆ ಹೊರಡಿಸಲು ತಾವು ಸಿದ್ಧರು; ಜಾಗತಿಕ ಶಾಂತಿ ಒಪ್ಪಂದವನ್ನು ಜಾರಿಗೆ ತರಲು ಮತ್ತು ಕ್ರಮಕ್ರಮೇಣ ನಿಶ್ಶಸ್ತ್ರೀಕರಣ ಮಾಡಲು ಕೈಕೊಳ್ಳುವ ಉಪಾಯದಲ್ಲಿ ರಶಿಯವು ಸ್ವಾಭಾವಿಕವಾಗಿ ಸಹಕರಿಸುವದು; ಅಮೇರಿಕೆ, ಬ್ರಿಟನ್ ಮತ್ತು ಫ್ರಾನ್ಸಗಳು ಪಶ್ಚಿಮ ಜರ್ಮನಿಯನ್ನು ಪ್ರತ್ಯೇಕವಾಗಿ ನಿರ್ಮಿಸುವದನ್ನು ಮುಂದೆ ತಳ್ಳಿದರೆ ಮತ್ತು ಅವು ವ್ಯಾಪಾರ ಮತ್ತು ಸಾರಿಗೆಯ ಮೇಲೆ ಹೇರಿರುವ ನಿರ್ಬಂಧಗಳನ್ನು ತೆಗೆದರೆ ಬರ್ಲಿನ್ ದಿಗ್ಬಂಧನವನ್ನು ಹಿಂತೆಗೆದುಕೊಳ್ಳಲು ರಶಿಯವು ಸಿದ್ಧವಿದೆ; ಜಾಗತಿಕ ಶಾಂತಿ ಒಪ್ಪಂದವನ್ನು ಸಿದ್ಧಪಡಿಸುವದಕ್ಕಾಗಿ ಅಧ್ಯಕ್ಷ ಟ್ರೂಮನ್ನರನ್ನು ಕಾಣಲು ತಾವು ಸಿದ್ಧರು.

ಸ್ಟಾಲಿನ್ನರು ಈ ಬಗೆಯಾಗಿ ಸಂಧಾನಕ್ಕೆ ಸಿದ್ಧರಾಗಬಹುದೆಂದು ಊಹಿಸಲು ಬೇಕಾದಷ್ಟು ಪೂರ್ವಸೂಚನೆಗಳು ಕೆಲ ದಿನಗಳಿಂದ ಬಂದಿದ್ದವು. ಫ್ರೆಂಚ ಕಮ್ಯುನಿಸ್ಟ ಮುಂದಾಳೊಬ್ಬನು ಅಲ್ಲಿಯ ಶಾಸನ ಸಭೆಯಲ್ಲಿ ಮಾಡಿದ ತುಂಬ ಸೌಮ್ಯ-ಸದಾಶಯಭರಿತ ಭಾಷಣವು ರಶಿಯನ್ ಧೋರಣೆ ಬಾಗಿಳಿಯುತಿರುವದನ್ನೆ ಸೂಚಿಸಿತ್ತು. ಮೇಲಾಗಿ ಇಟೆಲಿಯನ್ನೊಡಗೊಂಡು ಪಶ್ಚಿಮದ ಪಂಚರಾಷ್ಟ್ರಗಳು ಒಂದು ಬಗೆಯ ಕೂಟವನ್ನು ರಚಿಸಿಕೊಂಡು ಅಮೇರಿಕೆಯ ಸಂಯುಕ್ತ ಸಂಸ್ಥಾನ ಮತ್ತು ಕೆನಡಾದ ಸಹಯೋಗದಿಂದ ಪ್ರಬಲವಾದ ಪಾಶ್ಚಿಮಾತ್ಯ ಶಕ್ತಿಸಮೂಹವನ್ನು ಕಟ್ಟುವ ವಿಚಾರಮಾಡಿವೆ. ಪಶ್ಚಿಮ ಜರ್ಮನಿಯ ಮೂರೂ ವಿಭಾಗಗಳನ್ನು ಕೂಡಿಸಿ ರಶಿಯನ್ ಆಕ್ರಮಿತ ಜರ್ಮನಿಗಿಂತ ತೀರ ಭಿನ್ನವಾದ ರಾಜ್ಯವಾಗಿ ಕಟ್ಟುವ ಪ್ರಯತ್ನವೂ ತುಂಬ ಮುಂದುವರಿದಿದೆ. ಇದನ್ನೆಲ್ಲ ಕಂಡು ಸ್ಟಾಲಿನ್ನರು ತಮ್ಮ ಮುಂದೋಟದ ಸೀಮೆ ಬಂದಿದೆಯೆಂದು ಅರಿತುಕೊಂಡು ತಮ್ಮ ಧೋರಣೆಯನ್ನು ಹಿಂ-ನಡೆಗೆ ಅಣಿಗೊಳಿಸಿರಬಹುದು.

ಆದರೆ ಶಾಂತಿಗಾಗಿ ಹಾತೊರೆಯುತಿರುವ ಜಗತ್ತಿಗೆ ಅಕಸ್ಮಾತ್ತಾಗಿ ಕಂಡ ಈ ಆಶಾಕಿರಣ ಕ್ಷಣಮಾತ್ರದಲ್ಲಿ ಲೀನವಾಗುವ ಲಕ್ಷಣಗಳಿವೆ. ಸ್ಟಾಲಿನ್ನರ ಸೂಚನೆಗಳ ಬಗ್ಗೆ ಅಮೇರಿಕನ್ ವಿದೇಶ ಮಂತ್ರಿ ಡೀನ್ ಆಚಿಸನ್ನರು ಬಹಳ ಬೇಗಿಕೊಂಡು ಹೇಳಿಕೆ ಕೊಟ್ಟಿದ್ದಾರೆ. ಅವರು ಸ್ಟಾಲಿನ್ನರ ಶರ್ತಾಪರಂಪರೆಗಳನ್ನು ಎಣಿಸಿ ಅವರ ಸದುದ್ದೇಶದ ಬಗ್ಗೆಯೇ ಸಂಶಯವನ್ನು ವ್ಯಕ್ತಗೊಳಿಸಿದ್ದಾರಲ್ಲದೆ ಸ್ಟಾಲಿನ್ನರೇ ವಾಶಿಂಗಟನ್ನಿಗೆ ಬರಬೇಕೆಂದು ಹೇಳಿಕೊಟ್ಟಿದ್ದಾರೆ. ಸಂಬಂಧಪಟ್ಟ ಎಲ್ಲ ರಾಷ್ಟ್ರಗಳನ್ನು ಮಾತುಕತೆಗೆ ಕರೆಯಬೇಕೆಂಬುದು ಇದರ ತಾತ್ಪರ್ಯ. ಈಗ ಸ್ಟಾಲಿನ್ನರೇ ಸಂಧಾನ ಮನೋವೃತ್ತಿಯನ್ನು ಪ್ರದರ್ಶಿಸುತ್ತಿರುವಾಗ ಹಿಂದಿನದೆಲ್ಲವನ್ನೂ ಕೆದರಿಕೊಂಡು ಕುಳಿತು ಒಣ ಪ್ರತಿಷ್ಠೆಯ ಮಬ್ಬಿಗೆ ಅಧ್ಯಕ್ಷ ಟ್ರೂಮನ್ನರು ಬೀಳುತಿರುವಂತೆ ತೋರುತ್ತದೆ. ಈ ಪ್ರಸಂಗವನ್ನು ಹೀಗೆ ತಿರಸ್ಕರಿಸಿಬಿಟ್ಟರೆ ಜಗತ್ತಿನ ಅತ್ಯಂತ ಬಲಿಷ್ಠ ರಾಷ್ಟ್ರವೇ ಯೋಗ್ಯ ಸಂಧಿಯಲ್ಲಿ ಮುತ್ಸದ್ದಿತನದ ಅಭಾವವನ್ನು ತೋರಿಸಿತೆಂದು ನಾಳಿನ ಪೀಳಿಗೆಗಳು ಜರೆಯಬಹುದು. ಅಧ್ಯಕ್ಷ ಟ್ರೂಮನ್ನರು ಒಂದಕ್ಕಿಂತ ಹೆಚ್ಚು ಸಲ ಹೇಳಿರುವಂತೆ ಕ್ರೆಮ್ಲಿನ್ನಿನಲ್ಲಿ ಎರಡು ಪಂಗಡಗಳಿರುವದೇ ನಿಜವಿದ್ದರೆ ಶಾಂತಿಯ ಪಕ್ಷದಲ್ಲಿರುವ ಸ್ಟಾಲಿನ್ನರ ಕೈಗಳನ್ನು ಬಲಗೊಳಿಸುವದು ಟ್ರೂಮನ್ನರ ಕರ್ತವ್ಯವಾಗಿದೆ. ನಿಜವಾಗಿ ಸ್ಟಾಲಿನ್ನರಲ್ಲಿ ಸದಾಶಯವಿಲ್ಲದಿದ್ದರೆ ಕೂಡ ಮಾತುಕತೆ ನಡೆಸಿದಾಕ್ಷಣ ಯಾರದೂ ಏನೂ ಕೆಡುವದಿಲ್ಲವಷ್ಟೆ?

ಜಗತ್ತಿನ ಭಾಗ್ಯವಿಧಾತರು !



ಜನರಲಿಸಿಮೋ ಸ್ಟಾಲಿನ್



ಅಧ್ಯಕ್ಷ ಟ್ರೂಮನ್

ಸ್ಟಾಲಿನ್ನರು ಸಂಧಾನದ ಸಿದ್ಧತೆಯನ್ನು ತೋರ್ಪಡಿಸಿದ್ದಾರೆ. ಟ್ರೂಮನ್ನರು ಒಲ್ಲೆನೆಂದು ನೇರವಾಗಿ ಅಲ್ಲದಿದ್ದರೂ ಸುತ್ತುಸುತ್ತಾಗಿ ಹೇಳಿದ್ದಾರೆ. ಇವರಿಬ್ಬರ ಈ ಲೀಲೆ ಮುಗಿದು ಯುದ್ಧದ ಭಯದಿಂದ ಬೇಗನೆ ಜಗತ್ತು ಮುಕ್ತವಾದೀತೇ?

ವಾರದ ಸಿಂಹಾವಲೋಕನ

ಚೀನದ ಸಂಕಟ

ಚೀನದ ದುರ್ದೈವಕ್ಕೆ ಪಾರವೇ ಇಲ್ಲದಂತೆ ಕಾಣುವದು. ಮೊದಲು ಪೀಡಕ ರಾಜಸತ್ತೆಯ ಉಪದ್ರವ, ಆ ಮೇಲೆ ಪಾಳೆಯಗಾರರ ಕಾಟ, ಕ್ರಾಂತಿಯ ವಿಪತ್ತು, ೧೯೩೭ರಿಂದಲೂ ಜಪಾನಿಗಳ ಆಕ್ರಮಣ, ನಡುನಡುವೆ ಕಮ್ಯುನಿಸ್ಟ ತಂಟೆ ಮತ್ತು ಈಗ ಪ್ರಚಂಡ ಯಾದವೀಕಲಹದ ಪವಣೆಯಲ್ಲಿ ಸಿಲುಕಿದ ಅದರ ಆರ್ಥಿಕ ಮತ್ತು ಸಾಮಾಜಿಕ ಜೀವನ ಸರ್ವಥಾ ಶಿಥಿಲವಾಗಿ ಮುಟ್ಟಿದರೆ ಕುಸಿದುಬೀಳುವಂತಾಗಿದೆ. ಅಮೇರಿಕನ್ನರ ಅಪಾರ ಸಹಾಯ ದೊರೆತರೂ ಅಧ್ಯಕ್ಷ ಚಿಯಾಂಗ ಕೈಶೇಕರು ಕಮ್ಯುನಿಸ್ಟ ಸಮಸ್ಯೆಯನ್ನು ಸಂಧಾನದಿಂದಾಗಲಿ ಸಂಗ್ರಾಮದಿಂದಾಗಲಿ ಬಿಡಿಸಲು ಸಮರ್ಥರಾಗಲಿಲ್ಲ. ಕಳೆದ ವರ್ಷ ಸಂಕ್ಷಿಪ್ತವಾದ ಗೆಲವಿನ ಅವಧಿಯ ನಂತರ ಚಿಯಾಂಗರ ಸೇನೆಗಳು ಇಸ್ಪೀಟಿನ ಮನೆಯಂತೆ ಪಟಪಟನೆ ಕುಸಿದು ಬೀಳುತ್ತ ಬಂದಿದ್ದು ಈಗಹಳೆ ರಾಜಧಾನಿಯಾದ ಪೀಪಿಂಗು ಕಮ್ಯುನಿಸ್ಟರ ಕೈವಶವಾಗಿ ಅವರು ರಾಜಧಾನಿ ನಾನ್‌ಕಿಂಗಿನ ಸಮೀಪಕ್ಕೆ ಬಂದಿರುವ ಹೊತ್ತಿನಲ್ಲಿ ಚಿಯಾಂಗ್ ಕೈಶೇಕರು ರಾಜೀನಾಮೆ ಕೊಟ್ಟು ದೂರ ಸರಿದು ನಿಂತರು. ಹೊಸ ಅಧ್ಯಕ್ಷ ಲೀಯವರೂ ಕಮ್ಯುನಿಸ್ಟರೊಡನೆ ಸಂಧಿ ಮಾಡಿಕೊಳ್ಳುವಲ್ಲಿ ಯಶಸ್ವಿಯಾಗುವ ಲಕ್ಷಣ ತೋರುವದಿಲ್ಲ. ಚಿಯಾಂಗ್ ಪ್ರಭೃತಿಗಳನ್ನು ಬಂಧಿಸಿ ತಮಗೊಪ್ಪಿಸಿದರೇ ಸಂಧಿಯೆಂದು ಕಮ್ಯುನಿಸ್ಟ ನೇತೃ ಮಾವ್ ತ್ಸೆಟಂಗರು ಹಟಹಿಡಿದಿರುವರು. ಅತ್ತ ಸಂಧಾನ ನಡೆಸುತ್ತ ಇತ್ತ ಯಾಂಗ್‌ತ್ಸೆ ನದಿಯ ದಂಡೆಯಲ್ಲಿ ಕಮ್ಯುನಿಸ್ಟರನ್ನು ಸರ್ವಶಕ್ತಿಯನ್ನುಪಯೋಗಿಸಿ ಪ್ರತಿಭಟಿಸುವ ನೂತನ ಅಧ್ಯಕ್ಷರ ನೀತಿಗೆ ಫಲ ದೊರೆತರೆ ಅದೂ ಒಂದು ಚಮತ್ಕಾರವೇ ಎನಿಸೀತು. ಚಿಯಾಂಗರನ್ನು ಒಪ್ಪಿಸಲು ರಾಷ್ಟ್ರೀಯ ಸರಕಾರ ಸಿದ್ಧವಾಗಿಲ್ಲವಾಗಿ ಶಾಂತಿಗಾಗಿ ಹಾತೊರೆಯುತಿಪ್ಪ ಚೀನೀಯ ಜನಸಾಮಾನ್ಯರ ವಿಮೋಚನೆ ಮೃಗಜಲದಂತೆ ದೂರದೂರ ಸರಿಯುತಿದೆ.

ಜಾಗತಿಕ ಬ್ಯಾಂಕಿನಿಂದ ಸಾಲ

ಮಂಗಳವಾರ (ತಾ ೧) ಕ್ಕೆ ಪ್ರಾರಂಭವಾದ ಭಾರತದ ಹಿರಿಯೋಲಗದ ಅಧಿವೇಶನದಲ್ಲಿ ಅರ್ಥ ಸಚಿವ ಡಾ. ಜಾನ್ ಮಥಾಯರು ಭಾರತದ ಅಭಿವೃದ್ಧಿಯೋಜನೆಗಾಗಿ ಅಂತರ್‌ರಾಷ್ಟ್ರೀಯ ಆರ್ಥಿಕ ಸಂಸ್ಥೆಗಳಿಂದ ಸಾಲಪಡೆಯುವ ಸರಕಾರದ ಇಚ್ಛೆಯನ್ನು ವ್ಯಕ್ತಗೊಳಿಸಿದರು. ಅಂತರ್‌ರಾಷ್ಟ್ರೀಯ ಹಣಕಾಸಿನ ನಿಧಿ ಮತ್ತು ಜಾಗತಿಕ ಬ್ಯಾಂಕ್ ಇವೆರಡರಲ್ಲಿಯೂ ಈ ದೇಶ ಸದಸ್ಯವಾಗಿದ್ದು ೪೦ ಕೋಟಿ ಡಾಲರು (೧೩೨ ಕೋಟಿ ರೂಪಾಯಿ)ಗಳಷ್ಟು ತೇವಣಿಟ್ಟಿದೆ. ತಾತ್ಕಾಲಿಕ ವಿನಿಮಯಕ್ಕಾಗಿ ಬೇರೆ ಬೇರೆ ದೇಶದ ನಾಣ್ಯಗಳನ್ನು ಪೂರೈಸುವ ಅಂತರ್‌ರಾಷ್ಟ್ರೀಯ ನಿಧಿಯಿಂದ ನಾವು ಈಗಾಗಲೆ ೮ ಕೋಟಿ ಡಾಲರುಗಳ ಸಾಲ ಪಡೆದಿದ್ದೇವೆ. ಆದರೆ ಅವು ಅಲ್ಪಾವಧಿ ಸಾಲಗಳು ಈ ದೇಶದ ಆರ್ಥಿಕ ಸ್ಥಿತಿಯನ್ನು ಶಾಶ್ವತವಾಗಿ ಸುಧಾರಿಸಬೇಕಾದರೆ ಒಕ್ಕಲತನದ ಮತ್ತು ಔದ್ಯೋಗಿಕ ಅಭಿವೃದ್ಧಿ ಅವಶ್ಯವಿದೆ. ಅದಕ್ಕೆ ದೀರ್ಘಾವಧಿಯ ಸಾಲವೇ ಬೇಕು. ಅದಕ್ಕಾಗಿ ಜಾಗತಿಕ ಬ್ಯಾಂಕಿಗೆ ಬರೆದುಕೊಂಡಿದ್ದು ಆ ಬ್ಯಾಂಕಿನವರು ಇಲ್ಲಿಯ ಯೋಜನೆಗಳನ್ನು ಕಣ್ಣಾರೆ ಪರೀಕ್ಷಿಸಲು ಈಗಾಗಲೆ ಭಾರತಕ್ಕೆ ಬಂದಿದ್ದಾರೆ. ಸ್ವಾತಂತ್ರ್ಯ ದೊರೆತ ನಂತರದ ಈ ಒಂದೂವರೆ ವರ್ಷದ ಅವಧಿಯಲ್ಲಿ ನಮ್ಮ ಆಂತರಿಕ ಉಳಿತಾಯವೊಂದರಿಂದಲೇ ದೇಶದಲ್ಲಿ ಆವಶ್ಯಕ ಅಭಿವೃದ್ಧಿ ಯೋಜನೆಗಳನ್ನು ಸಫಲಗೊಳಿಸಿ ಆರ್ಥಿಕ ಸ್ಥಿತಿಯನ್ನು ಸುಧಾರಿಸುವದು ಅಸಾಧ್ಯವೆಂದು ಧಾರಾಳವಾಗಿ ಸಿದ್ಧವಾಗಿದೆ. ನಮ್ಮ ವಿದೇಶ ವಾಣಿಜ್ಯದ ಶಿಲ್ಕು ಆಹಾರ ಆಯಾತಕ್ಕೇ ಸಾಲುವದಿಲ್ಲ. ಸ್ಟರ್ಲಿಂಗ್ ಶಿಲ್ಕು ಯಂತ್ರಾದಿ ಸಾಮುಗ್ರಿಗಳನ್ನು ಕೊಳ್ಳಲು ಅಷ್ಟು ಉಪಯೋಗ ಬೀಳುವದಿಲ್ಲ. ಆದುದರಿಂದ ಈ ಸಾಲಕ್ಕೆ ಕೈನೀಡಲೇ ಬೇಕಾಯಿತು. ಶಿಷ್ಟ ಮಂಡಲದವರು ನಮಗೆ ಬೇಕಾದ ಕನಿಷ್ಠ ಮೊತ್ತವನ್ನಾದರೂ ಮಂಜೂರು ಮಾಡಿದರೆ, ನೀರಾವರಿ, ವನಭೂಮಿಯ ಸಾಗುವಳಿ ಮತ್ತು ಜಲವಿದ್ಯುತ್ ಉತ್ಪಾದನೆಗಾಗಿ ಬೇಕಾಗುವ ಯಂತ್ರ ಸಾಮುಗ್ರಿಗಳನ್ನೂ, ರೇಲ್ವೆ ಎಂಜಿನುಗಳನ್ನೂ ಕೊಳ್ಳಲು ಅನುಕೂಲವಾಗುವದು. ಆಗ ಇನ್ನೂ ಕಾಗದದಲ್ಲಿರುವ ನಮ್ಮ ಅಭಿವೃದ್ಧಿಯೋಜನೆಗಳು ಕಾರ್ಯರೂಪಕ್ಕಿಳಿದು ಬಡವರು ಬಯಸುತಿದ್ದ ಮತ್ತು ನಾವು ಯಾವಾಗಲೂ ಅವರಿಗೆ ಭರವಸೆಕೊಡುತ್ತ ಬಂದಿರುವ ಸುಭಿಕ್ಷಯುಕ್ತ ಸ್ವರಾಜ್ಯವು ಸಮೀಪಿಸಬಹುದು.

ಬಡೋದೆ, ಕೊಲ್ಹಾಪುರ

ಸರದಾರ ಪಟೇಲರ ಕಲ್ಲಗಾಣ ಪುನಃ ಉರುಳತೊಡಗಿದೆ. ಮಯೂರಭಂಜ ಮೊದಲಾದ ಹಿಂಜರಿಯುತಿದ್ದ ಚಿಲ್ಲರೆ ಸಂಸ್ಥಾನಗಳ ಲೀನೀಕರಣವನ್ನು ಮುಗಿಸಿ, ಅವರೀಗ ಮಧ್ಯ ತರಗತಿಯ ಸಂಸ್ಥಾನಗಳಿಗೆ ಕೈಹಚ್ಚಿದ್ದಾರೆ. ರಜಪೂತಸ್ಥಾನದ ಹಿರಿ ಸಂಸ್ಥಾನಗಳು ಕಳೆದ ತಿಂಗಳಲ್ಲೆ ಬೃಹತ್ತರ ರಾಜಸ್ಥಾನದ ಒಕ್ಕೂಟದಲ್ಲಿ ಸೇರಲು ಸಮ್ಮತಿಸಿದವು. ಈ ತಿಂಗಳ ಪ್ರಾರಂಭದಲ್ಲಿ ಕೊಲ್ಹಾಪುರ ಮತ್ತು ಬಡೋದೆ ಸಂಸ್ಥಾನಗಳು ಲೀನವಾಗಲೊಪ್ಪಿದ ಸುದ್ದಿಯನ್ನು ಪ್ರಕಟಿಸಲು ಸಂಸ್ಥಾನ ಖಾತೆ ಸಮರ್ಥವಾಗಿದೆ. ಅಲ್ಲಿಗೆ ದಕ್ಷಿಣದಲ್ಲಿ ಕೊಚ್ಚಿ, ಮಧ್ಯದಲ್ಲಿ ಭೋಪಾಳ ಮತ್ತು ಪೂರ್ವದಲ್ಲಿ ಮಣಿಪುರ, ಕುಚಬಿಹಾರ ಮೊದಲಾದ ಕ್ಷುದ್ರ ಉದಾಹರಣೆಗಳನ್ನು ಬಿಟ್ಟರೆ, ಚಿಕ್ಕಪುಟ್ಟ ಸಂಸ್ಥಾನಗಳೆಲ್ಲವೂ ಅಳಿದು ಆಡಳಿತಕ್ಕೆ ಅನುಕೂಲವಾದ ಘಟಕಗಳಲ್ಲಷ್ಟೆ ಸಂಸ್ಥಾನಗಳು ಉಳಿದಂತಾಗುವದು. ಅವುಗಳಿಗೆ ಕೂಡ ಘಟನಾ ಸಮಿತಿಯು ಏಕರೂಪವಾದ ಮಾದರಿ ಘಟನೆಯನ್ನು ಕೊಡಲಿರುವ ಮೂಲಕ ಭಾರತದ ರಾಜಕೀಯ ಭೂಪಕ್ಕೆ ಒಂದು ಬಗೆಯ ಏಕರೂಪತೆ ಬರುವದು. ಇದರಿಂದ ಭಾಷಾನ್ವಯ ಪುನರ್ಘಟನೆಗೆ ಕೂಡ ಅನುಷಂಗಿಕವಾಗಿ ಹೆಚ್ಚು ಅನುಕೂಲ ವಾತಾವರಣವೊದಗುವಲ್ಲಿ ಸಂಶಯವಿಲ್ಲ. ಕನ್ನಡಿಗರಿಗೆ ವಿಶೇಷ ಆಸ್ಥೆಯುಳ್ಳ ಮಾತೆಂದರೆ, ಕೊಲ್ಹಾಪುರವನ್ನು ಮುಂಬಯಿ ಪ್ರಾಂತದಲ್ಲಿ ಅಳವಡಿಸಿ ಜಿಲ್ಹೆ ತಾಲೂಕುಗಳಲ್ಲಿ ಹಂಚಿಹಾಕುವಾಗ, ಕನ್ನಡ ಮರಾಠಿ ಭಾಗಗಳು ಕಲಬೆರಕೆಯಾಗಿ ನಾಳಿನ ನಮ್ಮ ಬೇಡಿಕೆಗೆ ವ್ಯತ್ಯಯವಾಗದಂಥ ರೀತಿಯನ್ನು ಮುಂಬಯಿ ಸರಕಾರ ಅನುಸರಿಸುವದು ಅವಶ್ಯವಿದೆ. ಈಚೆಗೆ ದಕ್ಷಿಣ ಸಂಸ್ಥಾನಗಳನ್ನು ಹಂಚಿಹಾಕಿದ ರೀತಿ ದೂರುಗಳಿಗೆಡೆ ಕೊಟ್ಟಿದೆ. ಈ ಹೊಸ ವಿಲಯನದೊಡನೆ ಆ ದೂರುಗಳೂ ಸಮಂಜಸವಾಗಿ ಬಗೆಹರಿಸಲ್ಪಡಲಿ

ಸೈನ್ಯದ ಪಕ್ಷಾತೀತತೆ

ಪುಣೆಯಲ್ಲಿ ಕಳೆದವಾರ ನಮ್ಮ ಮುಖ್ಯ ಸೇನಾಪತಿ ಜನರಲ್ ಕಾರ್‍ಯಪ್ಪನವರು ಸೈನ್ಯಾಧಿಕಾರಿಗಳನ್ನು ಕುರಿತು ಆಡಿದ ಮಾತುಗಳು ಮನನೀಯವಾಗಿವೆ. ಸೈನ್ಯವು ತೆರಿಗೆ ತೆರುವವರನ್ನು ಅವಲಂಬಿಸಿದ್ದು ಅವರ ಪ್ರಾಣವಿತ್ತಗಳ ರಕ್ಷಣೆಯೇ ಅದರ ಪರಮ ಕರ್ತವ್ಯವೆಂದು ಅವರು ಹೇಳಿದರು. ಜನತೆಯ ಸೇವೆ ಮತ್ತು ಜನಪ್ರೀತಿ ಸಂಪಾದನೆಯ ಆದರ್ಶಗಳನ್ನು ಅವರು ಸೈನ್ಯದ ಮುಂದೆ ಎತ್ತಿ ಹಿಡಿದರು. ಇದು ಪರಕೀಯ ಸತ್ತಾಧಾರಿಗಳು ತೋರಿದ್ದಕ್ಕಿಂತ ತೀರ ಭಿನ್ನವಾದ ಉದಾತ್ತ ಧ್ಯೇಯವಾಗಿದೆ. ಸ್ವಾತಂತ್ರ್ಯ ರಕ್ಷಣೆಗಾಗಿ ಪ್ರಾಣವನ್ನಾದರೂ ತೆರುವ ಧೀರವೃತ್ತಿಯನ್ನೂ ಅವರು ಉಪದೇಶಿಸಿದರು. ಎಲ್ಲಕ್ಕಿಂತ ಮಿಗಿಲಾಗಿ ಸೈನ್ಯದ ಪಕ್ಷಾತೀತತೆಯನ್ನೂ ಜಾತ್ಯತೀತತೆಯನ್ನೂ ಒತ್ತಿ ಹೇಳಿದ್ದು ಮಹತ್ವದ್ದು. ಅಧಿಕಾರಾರೂಢ ಸರಕಾರಕ್ಕೆ ಅಧೀನರಾಗಿರುವದೇ ಸೈನಿಕರ ಕರ್ತವ್ಯವಲ್ಲದೆ ಪಾಕ್ಷಿಕ ರಾಜಕಾರಣದಲ್ಲಿ ಬೀಳುವದಲ್ಲ. ಜಾತೀಯತೆಯಿಂದಲೂ ಅವರು ಸರ್ವಥಾ ಮುಕ್ತರಾಗಿರಬೇಕು. ಪಾರ್ಲಮೆಂಟರಿ ಪ್ರಜಾತಂತ್ರದ ಯಶಸ್ಸಿಗೆ ಜನರಲ್ ಕಾರ್‍ಯಪ್ಪನವರು ಉಪದೇಶಿಸಿದ ಸೈನ್ಯಧರ್ಮ ಅತ್ಯಂತ ಅವಶ್ಯವಾಗಿದೆ. ತಾವಿರುವ ವರೆಗೂ ಆ ಧರ್ಮವನ್ನು ರಕ್ಷಿಸುವದಾಗಿ ಅವರು ತೊಟ್ಟ ಶಪಥ ತುಂಬ ಸಮಾಧಾನಕರವೇ ಸರಿ.

ಆಯಾತ ಸಮಿತಿಯಲ್ಲಿ ಕನ್ನಡಿಗರು

ಆಯಾತದ ವಿಷಯಗಳಲ್ಲಿ ಸಲಹೆ ಕೊಡುವದಕ್ಕಾಗಿ ಹಿಂದುಸ್ಥಾನ ಸರಕಾರದವರು ನೇಮಿಸಿರುವ ಇಪ್ಪತ್ತು ಸದಸ್ಯರ ಆಯಾತ ಸಲಹೆ ಸಮಿತಿಯಲ್ಲಿ ಮೂವರು ಕನ್ನಡಿಗರಿಗೆ ಸ್ಥಾನ ದೊರೆತಿದೆ. ಅವನ್ನು ಪಡೆದ ಹವಾನಾ ಪರಿಷತ್ತಿನ ಭಾರತೀಯ ಶಿಷ್ಟ ಮಂಡಲದ ಸದಸ್ಯರಾಗಿದ್ದ ಶ್ರೀ ದ. ಪ. ಕರಮರಕರ, ಪ್ರಸಿದ್ಧ ಅರ್ಥಶಾಸ್ತ್ರಜ್ಞರಾದ ಡಾ. ವಿಜಯೀಂದ್ರ ರಾವ್ ಮತ್ತು ಘಟನಾ ಸಮಿತಿ ಸದಸ್ಯರಾದ ಶ್ರೀನಿವಾಸಮಲ್ಯರು ಅಭಿನಂದನೀಯರಾಗಿದ್ದಾರೆ. ಇವರು ಮೂವರೂ ತಮ್ಮ ಅನುಭವ ಬಲದಿಂದ ಸಮಿತಿಯ ಸದಸ್ಯತ್ವಕ್ಕೆ ತುಂಬ ಅರ್ಹರಾಗಿರುವರೆಂದು ಬೇರೆ ಹೇಳಬೇಕಿಲ್ಲ. ಅಖಿಲ ಭಾರತೀಯ ವಿಷಯಗಳಲ್ಲಿ ಪರಿಣಾಮಕಾರಿಯಾದ ಪಾತ್ರವಹಿಸಲು ಕನ್ನಡಿಗರಿಗೆ ಹೆಚ್ಚು ಹೆಚ್ಚಾಗಿ ಅವಕಾಶ ದೊರೆಯುತಿರುವದು ಸಂತೋಷದ ಸಂಗತಿ.

ಅಪ್ರಾಮಾಣಿಕತೆಯ ಉಬ್ಬರ

ಲಂಚ ತೆಗೆದುಕೊಳ್ಳುವವ ಮತ್ತು ಕೊಡುವವ ಈ ಇಬ್ಬರೂ ಕಾಯಿದೆಯಂತೆ ಅಪರಾಧಿಗಳಾಗುವ ಹಾಗೆ ಕಳ್ಳಪೇಟೆಯ ದರದಲ್ಲಿ ಕೊಳ್ಳುವವ ಮತ್ತು ಮಾರುವವ ಈ ಇಬ್ಬರನ್ನೂ ಸಮಾಜಘಾತಕ ಕೃತ್ಯಮಾಡಿದ ಅಪರಾಧಿಗಳೆಂದು ಎಣಿಸಬೇಕು ಎಂದು ಒತ್ತಿ ಒತ್ತಿ ಹೇಳಲಾಗುತ್ತಿದೆ. ವ್ಯಾಪಾರಿಯ ಪರವಾಗಿ ಹೇಳುವ ಈ ಬಿನ್ನಹ ಕೆಲಮಟ್ಟಿಗೆ ನ್ಯಾಯವೆನ್ನಬಹುದು. ಕಾಯಿದೆ ವಿಧಿಸಿದ್ದಕ್ಕಿಂತ ಹೆಚ್ಚು ಸರಕು ತೆಗೆದುಕೊಂಡು ಸ್ವಾರ್ಥಿಗಳಾದ ಗಿರಾಕಿಗಳು ಮಾರಾಟಗಾರರಿಗೆ ಕಳ್ಳಪೇಟೆಯ ದರದಂತೆ ದುಡ್ಡು ಕೊಟ್ಟ ಉದಾಹರಣೆಗಳನ್ನು ನಾನು ಕೇಳಿದ್ದೇನೆ.

ಆದರೆ ಬೆರಕೆ ಮಾಡುವುದರ ಬಗ್ಗೆ ಏನು ಹೇಳೋಣ? ಬೆರಕೆಯ ಪದಾರ್ಥಗಳ ಬಗ್ಗೆ ಮಾರಾಟಗಾರನಷ್ಟೇ ಬಳಕೆಗಾರನೂ ದೋಷಿಯಾಗುವನೇನು? ಬೆರಸಿ ಹಾಲು ಮಾರುವುದು ಬಹಳ ಕಾಲದಿಂದ ಬಂದ ಅಪ್ರಾಮಾಣಿಕ ವ್ಯವಹಾರ. ಆದರೆ ಸುದೈವದಿಂದ ಹಾಲಿನೊಡನೆ ಬೆರಸುವುದು ನೀರಾದುದರಿಂದ ಅದು ಅಷ್ಟೇನೂ ಅಪಾಯಕರ ವಸ್ತುವಾಗಿಲ್ಲ. ತುಪ್ಪ ಮತ್ತು ವನಸ್ಪತಿಗಳನ್ನು ಬೆರಕೆಮಾಡಿ ಮಾರುವುದು ಅಪ್ರಾಮಾಣಿಕವಷ್ಟೇ ಅಲ್ಲ, ಅಪಾಯಕರವೂ ಆಗಿದೆ. ಒಂದುವೇಳೆ ಅದೇನೂ ಅಷ್ಟು ವಿಷಮಯವಲ್ಲ ಎಂದು ಹೇಳಬಹುದು. ಅದಕ್ಕೆ ಎಣ್ಣೆಯು ಒಳ್ಳೆಯ ಬದಲಿಯಾಗಬಲ್ಲುದೆಂದು ಎಣಿಸಲಾಗಿತ್ತು. ಆದರೆ ಎಣ್ಣೆಯನ್ನು ಕೂಡ–ಅದೂ ಕೂಡ ತಿನ್ನಲು ಬರದ ವಿಷಮಯವಾದ "ಬಿಳಿಯೆಣ್ಣೆ"ಯೊಡನೆ–ಬೆರಸಿ ಮಾರುವುದು ಕೆಲವೊಮ್ಮೆ ರೂಢಿಯಲ್ಲಿ ಬಂದಿದೆ. ಅದು ಶುದ್ಧ ಮಾಡಿದ ಸೀಮೆ ಎಣ್ಣೆಯ ಒಂದು ಮಾದರಿ. ಶುದ್ಧ ತುಪ್ಪದಂತೆ ತಿನ್ನಲಿಕ್ಕೆ ಬರುವ ಶುದ್ಧ ಎಣ್ಣೆಯಾದರೂ ಸಿಗುವುದು ದುಸ್ತರ ಎಂದು ಮೇಲಿಂದ ಮೇಲೆ ನನಗೆ ಕಾಗದಗಳು ಬರುತ್ತಿವೆ.

ವ್ಯಾಪಾರಿಜಾತಿ ಧರ್ಮ, ನೀತಿಗಳೆಲ್ಲವನ್ನು ಕಳೆದುಕೊಂಡು ಬಿಟ್ಟಿತೇ? ವ್ಯಾಪಾರಿಗಳೇಕೆ ಅಷ್ಟು ಕ್ರೂರಿಗಳೂ ಸ್ವಾರ್ಥಿಗಳೂ ದೇಶಬಾಂಧವರ ಹಿತಾಹಿತಗಳನ್ನು ಅಲಕ್ಷ್ಯ ಮಾಡುವವರೂ ಪಶುಗಳಂತೆ ನಾಚಿಕೆಗೇಡಿಗಳೂ ಆಗಿ ಹೋದರು?

೧೯೪೬–೪೭ ರಲ್ಲಿ ಭಾರತದಲ್ಲಿ ಹಾಯ್ದು ಹೋದ ಭ್ರಾತೃಹತ್ಯಾತರಂಗವನ್ನು ನಾವೆಲ್ಲ ಬಲ್ಲೆವು. ಪೂರ್ವ ಬಂಗಾಲದಿಂದ ಕಾಶ್ಮೀರದವರೆಗೆ ಗಾಂಧಿಯವರ 'ಮಾಡು ಇಲ್ಲವೆ ಮಡಿ' ಎಂಬ ವ್ರತಾಚರಣೆ ಅದಕ್ಕೆ ಅಗತ್ಯವೆನಿಸಿತು ಮತ್ತು ಅದನ್ನು ಹಿಡಿತದಲ್ಲಿ ತರಲು ಎರಡು ಆಮರಣ ಉಪವಾಸ ಬೇಕಾಯಿತು. ಅವರು ಅದನ್ನು ಮಾಡಿಯೂ ಮಡಿದರು, ಅದಕ್ಕಾಗಿ ಜೀವನವನ್ನೂ ತೆತ್ತರು.

ಅಪ್ರಾಮಾಣಿಕತೆಯ ಉಬ್ಬರದ ವಿರುದ್ಧವಾಗಿ ಮತ್ತು ವ್ಯಾಪಾರಾದಿ ಜೀವನದ ಬೇರೆ ಬೇರೆ ಕ್ಷೇತ್ರಗಳಲ್ಲಿಯ ಒಂದು ಬಗೆಯ ಸಮಾಜವಾದಕ್ಕಾಗಿ ಕೆಲ ನಿಷ್ಠಾವಂತ ಜೀವಿಗಳ ಆತ್ಮಬಲಿ ಮತ್ತು ಆತ್ಮಾಹುತಿ ಬೇಕಾಗಿರುವುದೇನು? ಜನರ ಯಾವನಾದರೊಬ್ಬ ನಿಷ್ಠಾವಂತ ಸೇವಕ ಬಲವಾಗಿ ಅಲುಗಾಡಿಸಿದಲ್ಲದೆ ವ್ಯಾಪಾರಿಜಾತಿಯ ಮನಃಸಾಕ್ಷಿಗೆ ಎಚ್ಚರಾಗುವಂತಿಲ್ಲವೇನು?

ಇಂದಿಗಿಂತ ಎತ್ತರದ ನೈತಿಕ ಮಟ್ಟಕ್ಕೆ ಏರಬೇಕೆಂಬುದನ್ನು ನಾವೆಲ್ಲರೂ ಅರಿತುಕೊಳ್ಳೋಣ. ನಮ್ಮ ಇಂದಿನ ಅಧಃಪಾತ ಕೇವಲ ಅವ್ಯವಸ್ಥೆ ಮತ್ತು ಸಾರ್ವತ್ರಿಕ ಅಧೋಗತಿಗಳಿಗೆ ನಮ್ಮನ್ನು ಒಯ್ಯದಿರದು. ಮೊದಲು ಆರ್ಥಿಕವಾಗಿ ಅಲ್ಲ, ನೈತಿಕವಾಗಿ ಸುಧಾರಿಸಿಕೊಂಡಲ್ಲದೆ ನಮ್ಮ ಗತಿ ಚೀನದ ಗತಿಗಿಂತ ಎಷ್ಟರಮಟ್ಟಿಗೂ ಉತ್ತಮವೆನಿಸದು.

ಸರ್ವೋದಯದಲ್ಲಿ ಶ್ರದ್ಧೆಯುಳ್ಳವರೆಲ್ಲರೂ ಈ ಉದ್ದೇಶ ಸಾಧನೆಗಾಗಿ ನಿಷ್ಠಾಪೂರ್ವಕವಾಗಿಯೂ ಹೃದಯಪೂರ್ವಕವಾಗಿಯೂ ಕೆಲಸ ಮಾಡಬೇಕು. ನೂರನೆಯ ಒಂದಂಗುಲದಷ್ಟಾದರೂ ಜನತೆಯ ನೈತಿಕ ಮತ್ತು ಸಾಮಾಜಿಕ ಬುದ್ಧಿಯನ್ನು ಉನ್ನತಗೊಳಿಸಲಾದರೆ ಅದಕ್ಕೆ ಯಾವ ತ್ಯಾಗವೂ ಹೆಚ್ಚಿನದೆನಿಸದು ಮತ್ತು ಗಾಂಧಿಯವರ ವರ್ಗಕ್ಕೇ ಬಹುಸಂಖ್ಯವಾಗಿ ಸೇರಿದ ವ್ಯಾಪಾರಗಳಿಗೆ ಅಂತರ್ಮುಖರಾಗಿ ಆತ್ಮಸಾಕ್ಷಿಯ ನುಡಿಯನ್ನು ಆಲಿಸಿರೆಂದು ನಾನು ಹೃತ್ಪೂರ್ವಕವಾಗಿ ಬಿನ್ನವಿಸಿಕೊಳ್ಳುತ್ತೇನೆ. ಮಿಕ್ಕವರು ಅವರ ಅಪಕೃತ್ಯಗಳಿಂದ ನರಳುತ್ತಿರುವಾಗ ಅವರು ತಮ್ಮನ್ನು ಉಳಿಸಿಕೊಳ್ಳಲಾರರು.

ಮುಂಬಯಿ

೨೧–೧–೪೯ ಕಿ. ಘ. ಮಶ್ರುವಾಲಾ

ದರ್ಬಾನದ ಗಲಭೆಗಳು

ಕೆಲದಿವಸಗಳ ಕೆಳಗೆ ದರ್ಬಾನು ಗಂಭೀರವಾದ ವರ್ಣದ್ವೇಷಾತ್ಮಕ ಗಲಭೆಗಳ ರಂಗವಾಯಿತು. ಇಲ್ಲಿರುವ ಮತ್ತು ಅಲ್ಲಿರುವ ಹಿಂದೀಯರಿಗೆ ಇದು ಅಂಜನಸ್ವರೂಪವಾಗಬೇಕು. ಭಾರತದಲ್ಲಿ ನಾವು ಶಾಂತಿಯಿಂದಲೂ ಐಕ್ಯದಿಂದಲೂ ಬಾಳಲಾರೆವಾದರೆ ಬೇರೆ ಕಡೆಗೂ ಬಾಳಲಾರೆವು. ಇಲ್ಲಿ ನಾವು ನ್ಯಾಯದಿಂದ ನಡೆದುಕೊಳ್ಳದಿದ್ದರೆ ಅನ್ಯತ್ರ ಅದು ನಮಗೆ ಲಭ್ಯವಾಗದು.

ದಕ್ಷಿಣ ಆಫ್ರಿಕೆ, ಪೂರ್ವ ಆಫ್ರಿಕೆ ಮತ್ತು ಇತರ ವಿದೇಶಗಳಲ್ಲಿರುವ ಹಿಂದೀಯರು ತಮ್ಮ ಮಾತೃಭೂಮಿಯಲ್ಲಿ ಪ್ರಚಲಿತವಾದ ದುರಭ್ಯಾಸಗಳನ್ನು ಅಲ್ಲಿಯೂ ಆಚರಣೆಗೆ ತರುತಿರುವರೆಂದು ಕೇಳಬರುತ್ತದೆ. ಉದಾಹರಣೆಗಾಗಿ ದಕ್ಷಿಣ ಆಫ್ರಿಕೆಯಲ್ಲಿಯೂ ಪೂರ್ವ ಆಫ್ರಿಕೆಯಲ್ಲಿಯೂ ಹಿಂದೂ ಮಹಾಸಭಾವಾದಿಗಳು ಮತ್ತು ಪಾಕಿಸ್ತಾನಿಗಳು ಅಥವಾ ಮುಸ್ಲಿಂ ಲೀಗ್ ಪಕ್ಷಪಾತಿಗಳು ಇದ್ದಾರಂತೆ. ಅಲ್ಲಿ ಇವರು ಸ್ಥಾಪಿಸಲೆಳಸುವ ಹಿಂದೂ ರಾಜ್ಯವಾಗಲಿ, ಮುಸ್ಲಿಂರಾಜ್ಯವಾಗಲಿ, ಸಾಧಿಸಬಯಸುವ ವಿಭಜನೆಯಾಗಲಿ ಯಾವುದಿರಬಹುದು? ದಕ್ಷಿಣ ಆಫ್ರಿಕೆಯಲ್ಲಿರುವ ಮುಸ್ಲಿಮರಲ್ಲಿ ಹೆಚ್ಚು ಜನರು ಭಾರತ ಒಕ್ಕೂಟದ ಪ್ರಜೆಗಳಾಗಿದ್ದು ಅಲ್ಲಿ ತಮ್ಮ ರಕ್ಷಣೆಗೆ ಭಾರತ ಸರಕಾರವನ್ನೆ ಅವಲಂಬಿಸಬೇಕಾಗುವದೆಂದು ಕೇಳುತ್ತೇನೆ. ಆದರೂ ಅವರು ಭಾರತದಿಂದ ಭಿನ್ನವಾದ ಪಾಕಿಸ್ತಾನದ ನಾಗರಿಕರು ತಾವೆಂದು ಬಗೆಯುತಿದ್ದಾರಂತೆ. ಇದು ವಿಶೇಷವಾಗಿ ಅಲ್ಲಿರುವ ಹಿಂದೂ ಮುಸಲ್ಮಾನರಿಗೂ ಸಾಮಾನ್ಯವಾಗಿ ಬಿಳಿಯರಲ್ಲದ ಎಲ್ಲ ಜನಾಂಗಗಳ ಹಿತಕ್ಕೂ ಬಾಧಕ ಮಾತ್ರವಲ್ಲ, ಹಾಸ್ಯಾಸ್ಪದವೂ ಆಗಿದೆಯೆಂದು ಅವರಿಗೆ ತಿಳಿಯಬಾರದೆ? ಏಕೆಂದರೆ ಅಲ್ಲಿರುವ ಎಲ್ಲ ಶ್ವೇತೇತರ ಜನರ ಹಿತ ಸಾಧಿಸಬೇಕಾದರೆ ಹಿಂದುಸ್ತಾನ ಪಾಕಿಸ್ತಾನಗಳೆರಡೂ ಒಂದಾಗಿ ಪ್ರಯತ್ನಪಡಬೇಕಾಗುವದು. ದಕ್ಷಿಣ ಆಫ್ರಿಕೆಯಲ್ಲಿರುವ ಎಲ್ಲ ಏಶಿಯನ್ ಜನರೂ ಅಲ್ಲಿ ಒಂದಾಗಿ, ಒಂದೇ ಕೂಟವಾಗಿ ನಿಂತರೆ ಮಾತ್ರ ಆ ದೇಶದಲ್ಲಿ ತಮ್ಮ ನಾಗರಿಕ ಹಕ್ಕುಗಳನ್ನು ಸಂಪಾದಿಸಿಕೊಳ್ಳಬಲ್ಲರೆಂದು ಅವರು ಮನಗಾಣಬೇಕು. ಅವರ ಏಶಿಯನ್ ವಾದವಾದರೂ ತಾತ್ಕಾಲಿಕವಾಗಿಯೆ ಇರಬೇಕು– ಅಂದರೆ ಆಫ್ರಿಕೆಯ ರಾಜ್ಯಗಳಲ್ಲಿ ಪೂರ್ಣ ಸಮಾನ ನಾಗರಿಕ ಹಕ್ಕುಗಳು ದೊರೆಯುವವರೆಗೆ ಮಾತ್ರ. ಆಫ್ರಿಕೆಯ ರಂಗದಲ್ಲಿ, ತಾವು ಭಾರತೀಯರು, ಪಾಕಿಸ್ತಾನಿಗಳು, ಅಫಗಾಣರು, ಬ್ರಹ್ಮೀಯರು, ಚೀನೀಯರು ಅಥವಾ ಜೇರಾರೆಂಬ ಮಾತು ಅಪ್ರಸ್ತುತ, ಕೇವಲ ಹಳೆಗಾಲದ ನೆನಪು ಮಾತ್ರ. ಭಾರತದಲ್ಲಿ ತಾನು ಪಂಜಾಬಿಯೋ ಸಿಂಧಿಯೋ ಬಂಗಾಲಿಯೊ ಗುಜರಾತಿಯೋ ಎಂಬವರಷ್ಟು ಕೂಡ ಆಫ್ರಿಕೆಯಲ್ಲಿ ಈ ರಾಷ್ಟ್ರಭೇದಗಳಿಗೆ ಬೆಲೆಯಿಲ್ಲ. ಈ ಆಕಸ್ಮಿಕ ಭೇದಗಳನ್ನೇ ದೊಡ್ಡದು ಮಾಡಿಟ್ಟುಕೊಂಡರೆ ಅದರ ಫಲವನ್ನು ಅವರೇ ಅಲ್ಲಿ ಭೋಗಿಸಬೇಕಾಗುವದು. ಅವರ ಬೇಡಿಕೆಗಳನ್ನು ತಿರಸ್ಕರಿಸುತ್ತ ಬಂದಿರುವ ಅಲ್ಲಿಯ ಸರಕಾರ ಈ ಬಳದ್ವೇಷಾಸೂಯೆಗಳನ್ನು ಅನುಕೂಲ ಸಾಧನವಾಗಿ ಉಪಯೋಗಿಸಿಕೊಳ್ಳುವದು. ಅವರು ಮೊದಲು ಏಶಿಯನ್ನರಲ್ಲಿ ಐಕ್ಯವನ್ನು ಸಾಧಿಸಬಲ್ಲರಾದರೆ, ಆ ಮೇಲೆ ಆಫ್ರಿಕೆಯ ಕಪ್ಪು ಜನರೊಡನೆ ಏಕಮತ್ಯವನ್ನು ಸಾಧಿಸುವ ಹಾದಿ ಅವರಿಗೆ ಕಂಡೇ ಕಾಣುವದು; ಇವೆರಡು ಕೈಗೂಡಿದವೆಂದರೆ ಬಿಳಿಯರಿಗೂ ಇತರರಿಗೂ ನಡುವೆ ಹೇಗೆ ಸೌಹಾರ್ದವನ್ನುಂಟುಮಾಡಬೇಕೆಂದು ಕಂಡುಹಿಡಿಯಲು ಕಷ್ಟವಾಗದು. ಅದೇ ನಮ್ಮ ಚರಮ ಉದ್ದೇಶವಾಗಿರಬೇಕು. ವರ್ಣ, ಕುಲ, ಧರ್ಮ, ಮೂಲಸ್ಥಾನಗಳ ಭೇದವೇನೆ ಇರಲಿ, ಮಾನವಕುಲವೆಲ್ಲ ಒಂದೆಂಬುದನ್ನು ನಾವು ನೆನೆಸಿಸಬ್ಲಿದೋಣ.

ಮುಂಬಯಿ ಕಿ. ಘ. ಮಶ್ರುವಾಲಾ

೨೧–೧–೪೯

ಪಂಡಿತ ಜವಾಹರಲಾಲರು ಮತ್ತು ಸರದಾರ ವಲ್ಲಭಭಾಯಿಯವರು

ನಮ್ಮ ಮುಖ್ಯ ಮಂತ್ರಿಗಳೂ ಉಪಮುಖ್ಯ ಮಂತ್ರಿಗಳೂ ಈಚೆಗೆ ಬಹಳ ಮಹತ್ವದ, ಬೋಧಪ್ರದವಾದ, ವಿವೇಕಪೂರ್ಣ ಮತ್ತು ಸ್ಫೂರ್ತಿಪ್ರದವಾದ ಭಾಷಣಗಳನ್ನು ಮಾಡುತಿದ್ದಾರೆ. ಮುಖ್ಯಮಂತ್ರಿಗಳು ಅಂತರ್‌ರಾಷ್ಟ್ರೀಯ ರಂಗದಲ್ಲಿಯೂ ಉಪಮುಖ್ಯಮಂತ್ರಿಗಳು ಆಂತರಿಕ ರಂಗದಲ್ಲಿಯೂ ತೀವ್ರವಾದ ಪರಿವರ್ತನೆಗಳನ್ನುಂಟುಮಾಡಿ, ಮಹಾ ತತ್ವಗಳನ್ನೂ ನೈತಿಕ ಘನತೆಯನ್ನೂ ಎತ್ತಿ ಹಿಡಿಯುತಿದ್ದರೆ. ಭಾರತದ ಭೌಗೋಲಿಕ ಸ್ಥಾನ, ವಿಪುಲ ಜನಸಂಖ್ಯೆ, ಉದಾತ್ತಪರಂಪರೆಗಳಿಂದ ಮತ್ತು ಎಲ್ಲಕ್ಕೂ ಹೆಚ್ಚಾಗಿ ಅದು ಗಾಂಧೀಜಿಯ ಮಾತೃಭೂಮಿಯಾಗಿರುವುದರಿಂದ ಅದಕ್ಕೆ ಜಾಗತಿಕ ವಿಚಾರಗಳಲ್ಲಿ ನ್ಯಾಯವಾಗಿ ಸಿಗಬೇಕಾದ ಮತ್ತು ಪ್ರಾಚೀನಕಾಲದಲ್ಲಿ ಅದಕ್ಕಿದ್ದ ಪ್ರಾಮುಖ್ಯದ ಮತ್ತು ಹೊಣೆಗಾರ ಸ್ಥಾನಕ್ಕಾಗಿ ಅವರಿಬ್ಬರೂ ದೇಶವನ್ನು ಅಣಿಗೊಳಿಸುತಿದ್ದಾರೆ.

ಸರದಾರ ವಲ್ಲಭಭಾಯಿಯವರು ತಮ್ಮ ಪರಿಣತ ವಿವೇಕದಿಂದ ಕಾಂಗ್ರೆಸ್ಸಿಗರಲ್ಲೂ ಜನರಲ್ಲೂ ಇರುವ ಕಲ್ಮಷವನ್ನು ತೊಡೆದು ಹಾಕಿ ಅವರನ್ನು ಸನ್ಮಾರ್ಗಕ್ಕೆ ಹಚ್ಚಲು ಪ್ರಯತ್ನಿಸುತಿದ್ದಾರೆ. ಪಂಡಿತ ಜವಾಹರಲಾಲ ನೆಹರೂ ಅವರು ಇಂಡೊನೇಶಿಯದ ಪ್ರಶ್ನೆಯಲ್ಲಿ ತ್ವರಿತವಾಗಿ ಕ್ರಮ ತೆಗೆದುಕೊಂಡು ಅಂತರ್‌ರಾಷ್ಟ್ರೀಯ ವಿಚಾರಗಳಲ್ಲಿ ತಮಗಿರುವ ಆಳವಾದ ತಿಳುವಳಿಕೆಯಿಂದಲೂ ಉದಾತ್ತಧ್ಯೇಯವಾದದಿಂದಲೂ ಏಶಿಯದ ರಾಷ್ಟ್ರಗಳಿಗೆ ತಾ ಮಾರ್ಗದರ್ಶನವು ನಮ್ಮ ಮಹಾ ಮುಖ್ಯ ಮಂತ್ರಿಯ ಬಗ್ಗೆ ಅಭಿಮಾನ ತಾಳಲು ಅವಕಾಶ ಮಾಡಿಕೊಟ್ಟಿದೆಯಷ್ಟೇ ಅಲ್ಲ, ಗಾಂಧೀಜಿ ಅವರಲ್ಲಿಟ್ಟ ವಿಶ್ವಾಸ ಎಷ್ಟು ಯೋಗ್ಯವಾಗಿತ್ತೆಂದೂ ತೋರಿಸಿದೆ.

ಅವರಿಬ್ಬರ ಭಾಷಣಗಳ ಮುಖ್ಯ ಅಂಶಗಳನ್ನು ಆಗಿಂದಾಗ್ಗೆ "ಹರಿಜನ"ದಲ್ಲಿ ಎತ್ತಿಕೊಡಲು ಸಾಧ್ಯವಾಗಿದ್ದರೆ ನನಗೆ ತುಂಬ ಸಂತೋಷವಾಗುತಿತ್ತು. ಆದರೆ ಅವುಗಳ ಮಹತ್ವವೆಷ್ಟಿದ್ದರೂ ಸ್ಥಳಾಭಾವದಿಂದ ಅದು ಅಸಾಧ್ಯವಾಗಿದೆ. "ಹರಿಜನ"ದಲ್ಲಿ ಬರುವ ವಿಷಯಗಳು ಅತ್ಯಂತ ಅವಶ್ಯವಿದ್ದು ಅವು ಬೇರೆ ಪತ್ರಿಕೆಗಳಲ್ಲಿ ಕಾಣಸಿಗುವದಿಲ್ಲವೆಂದು ನನ್ನ ತಿಳುವಳಿಕೆ. ಮುಂದಾಳುಗಳ ಭಾಷಣಗಳಾದರೋ ಎಲ್ಲ ಮುಖ್ಯ ದೈನಿಕ ಪತ್ರಗಳಲ್ಲಿ ಕೂಡಲೆ ಪ್ರಸಿದ್ಧವಾಗುತ್ತವೆ. "ಹರಿಜನ"ವೂ ಅಂಥ ಯಾವುದಾದರೊಂದು ಪತ್ರಿಕೆಯಿಂದ, ಅವು ಹಳೆಯದಾದ ಮೇಲೆ, ಆ ಭಾಷಣಗಳನ್ನು ಪುನರ್ಮುದ್ರಿಸಬೇಕಾಗುವದು. ಆದುದರಿಂದ ಅವುಗಳನ್ನೋದಲು ಆ ದೈನಿಕಗಳೇ ಯೋಗ್ಯ ಸಾಧನಗಳು.

"ಹರಿಜನ"ದ ಓದುಗರು ಆ ಭಾಷಣಗಳನ್ನು ಅನ್ಯತ್ರ ಓದಿಯೆ ಓದುವರೆಂದು ನಂಬುತ್ತೇನೆ.

ಮುಂಬಯಿ —ಕಿ. ಘ. ಮಶ್ರುವಾಲಾ

೨೧.೧.೪೯

ಕೃತಜ್ಞತೆಗಳು

೩೦ನೆ ಜನವರಿಯ "ಹರಿಜನ" ಸಂಚಿಕೆಗಾಗಿ ವಿಶೇಷ ಲೇಖನಗಳನ್ನು ಬರೆದು ಕಳಿಸಿದ ವಿವಿಧ ಲೇಖಕರಿಗೆ ತುಂಬ ಆಭಾರಿಯಾಗಿದ್ದೇನೆ. ನನ್ನ ಕೈಸೇರಿದ ಲೇಖನಗಳಲ್ಲಿ ಮೊದಲನೆಯದು ಭಾರತದ ಪ್ರಥಮ ನಾಗರಿಕನದು. ಅವುಗಳಲ್ಲಿ ಕೆಲವು ತೀರ ತಡವಾಗಿ ಬಂದು ಆ ಸಂಚಿಕೆಯಲ್ಲಿ ಸೇರಲಾರದಂತಾದುದಕ್ಕೆ ನನಗೆ ವಿಷಾದವಾಗಿದೆ. ಅನುಕೂಲನಾದೊಡನೆ ಅವನ್ನು ಪ್ರಕಟಿಸುವೆ. ಈ ವಿಲಂಬಕ್ಕಾಗಿ ಅವರು ನನ್ನನ್ನು ಕ್ಷಮಿಸುವರೆಂದು ನಂಬಿದ್ದೇನೆ.

ವರ್ಧಾ ಕಿ. ಘ. ಮಶ್ರುವಾಲಾ

೨೯–೧–೪೯

ಸಾರ್ವಜನಿಕ ವ್ಯಕ್ತಿ ಮತ್ತು ಸಂಸ್ಥೆಗಳ ಪಾವಿತ್ರ್ಯ

ಈ ಒಂದು ಚಿಕ್ಕ ಸರಳ ಸೂತ್ರದಲ್ಲಿ ಗಾಂಧಿಯವರ ಜೀವನದ ತತ್ವ ಪ್ರಣಾಳಿಕೆಯನ್ನು ಸಂಗ್ರಹಿಸಿ ಹೇಳಬಹುದು: "ಒಳಹೊರಗೆ ಶುಚಿಯಾಗಿರು" ಏಕೆಂದರೆ, "ದೈವಭಕ್ತಿ [illegible]" ಎಂಬ ಗಾದೆಯ ಸತ್ಯವನ್ನು ಅವರು ಪ್ರತ್ಯಕ್ಷವಾಗಿ ಕಂಡಿರಬೇಕು. ಆ ಗಾದೆಯ [illegible] ಸತ್ಯತೆಗೂ ಅವರೇ ಒಂದು ಜೀವಂತ, ಉಜ್ವಲ ವ್ಯಾಖ್ಯಾನವೆನಿಸಿದ್ದರು.

ಆದುದರಿಂದ ಗಾಂಧಿಯವರು, ಪ್ರತಿಯೊಬ್ಬರೂ– ಅದರಲ್ಲೂ ಸಾರ್ವಜನಿಕ [illegible] ನಡತೆಗಳಿಗೆ [illegible] ಕಾರಣದಿಂದ ಸಾರ್ವಜನಿಕ ಕಾರ್ಯಕರ್ತ ಸ್ತ್ರೀಪುರುಷರೂ ಅವರಿಗೆ ಸಂಬಂಧಿಸಿದ ಸಂಸ್ಥೆಗಳೂ ವಿಶೇಷತಃ– "ಸೀಜರನ ಹೆಂಡತಿಯಂತೆ" ಯಾವುದೇ ತರದ ಒಳಹೊರಗಿನ ನೀಚತನ, ಕಲಂಕ, ಕಲ್ಮಷ, ಶಂಕೆಗಳು ಇಲ್ಲದಂತಿರಬೇಕು ಎಂದಿದ್ದಾರೆ ಮತ್ತು ಅವರ ವ್ಯಕ್ತಿತ್ವದ (ಜಿಗುಟಾದರೂ), ಪ್ರಭಾವಿಯಾದ ಸ್ಪರ್ಶ ಪಡೆದ ಅನೇಕ ವ್ಯಕ್ತಿ ಮತ್ತು ಸಂಸ್ಥೆಗಳು ಅವರು ಜೀವಿಸಿದ್ದ ಕಾಲದಲ್ಲಿ [illegible] ತೋರಿರುವ ಶುದ್ಧತೆಯ ಧ್ಯೇಯವನ್ನು ಅನುಸರಿಸಲು ಹೆಣಗಿದವೆಂಬುದನ್ನು ಹೇಳುವುದು ಅನಗತ್ಯ.

ಆದರೆ ದುರ್ದೈವದಿಂದ ಅವರು ತೀರಿಹೋದಂದಿನಿಂದೀಚೆಗೆ ಒಂದು ವರ್ಷದಿಂದ ಶೀಘ್ರವಾಗಿ ನೈತಿಕ ಮರ್ಯಾದೆ ಕೆಡುತ್ತ ಬಂದಿದೆ. ಅದರಫಲವಾಗಿ ಗಾಂಧಿಯವರ ಹೆಸರು ಹಿಡಿದು ಪ್ರತಿಜ್ಞೆ ತೆಗೆದುಕೊಂಡ ಹಲವರು ಕೂಡ, ಒಬ್ಬ ಪ್ರಸಿದ್ಧ ನಿಷ್ಪಕ್ಷಪಾತಿಯಾದ ವಿಮರ್ಶಕ ಒಮ್ಮೆ ಹೇಳಿದಂತೆ, ಅವರ ಪ್ರಭಾಮಯ ಆತ್ಮದ ಹೆಜ್ಜೆಗಳು ನೆಲ್ಲಮೇಲೆ ಬಿದ್ದುದರಿಂದ ಮಾತ್ರ ರಂಗಸ್ಥಳದ ಮೇಲೆ ಹೊಳೆಯುತ್ತಿದ್ದು, ಈಗ ನಿಸ್ತೇಜವಾದ ಬಣ್ಣದ ಬೊಂಬೆಗಳಂತೆ ತೋರುತ್ತಾರೆ.

ಸ್ವತಂತ್ರ ರಾಷ್ಟ್ರವಾಗಿ ಬದುಕಲು ಶುರು ಮಾಡಿದ ನಮ್ಮ ಈ ಬಾಲ್ಯಾವಸ್ಥೆಯಲ್ಲಿ ನಮ್ಮ ಖಾಸಗಿ ಜೀವನದಲ್ಲೂ ಆಡಳಿತದಲ್ಲೂ ಗಾಂಧಿ ಮಾದರಿಯ ಪಾವಿತ್ರ್ಯ, ಪ್ರಾಮಾಣಿಕತೆಗಳನ್ನು ಇಟ್ಟುಕೊಳ್ಳುವುದರಲ್ಲಿ ನೆರವಾಗುವ ಪರಂಪರೆಗಳನ್ನು ಸ್ಥಾಪಿಸುವುದು ಅತ್ಯಂತ ಮುಖ್ಯವಾದುದಲ್ಲವೇ? ಕೇವಲ [illegible] ಸ್ಮಾರಕವೊಂದು ಅವರನ್ನು ಅಮರತ್ವಕ್ಕೇರಿಸದು. ಲಕ್ಷ್ಯಪೂರ್ವಕವಾಗಿ ಒಳಹೊರಗೆ ಚೊಕ್ಕವಾಗಿರುವ ಪ್ರಾಮಾಣಿಕತೆಯೆಂಬ ಗಾಂಧೀ ಧ್ಯೇಯವನ್ನು ಅನುಸರಿಸುವುದರ ಮೂಲಕ ನಾವು ನಮ್ಮ ಪ್ರತಿನಿತ್ಯದ ಕೆಲಸ ಕಾರ್ಯಗಳಲ್ಲಿ ಅಮರತ್ವದ ಮೂರ್ತಿಯಲ್ಲಿ ಅವರನ್ನು ಪುನಃ ಸೃಜಿಸಬೇಕಾಗಿದೆ.

—ಜೆ. ಎಂ.

ಯಂತ್ರಮಯ ಕೃಷಿಪದ್ಧತಿ

"ಹರಿಜನ"ದ ೧೯–೯–೪೮ ರ ಸಂಚಿಕೆಯನ್ನು ನನ್ನ ಆಸ್ಟ್ರೇಲಿಯದ ಗೆಳೆಯರೊಬ್ಬರು ನನಗಿತ್ತರು. ಅದರಲ್ಲಿ ಶ್ರೀ ಡಿ. ಕೆ. ಗುಪ್ತರ "ಟ್ರಾಕ್ಟರುಗಳೇಕೆ ಹಾಗಾದರೆ?" ಎಂಬ ಪ್ರಬಂಧವನ್ನು ಓದಿದೆ. ಟ್ರಾಕ್ಟರಿಲ್ಲದೆಯೇ ಭಾರತೀಯ ಕೃಷಿಪದ್ಧತಿಯನ್ನು ಯಂತ್ರಮಯವನ್ನಾಗಿ ಮಾಡಬಹುದೆಂಬುದು ಬಹುಶಃ ಶ್ರೀ ಗುಪ್ತರಿಗೆ ತಿಳಿದಿರಲಿಕ್ಕಿಲ್ಲ. ಬೇರೆ ಬೇರೆ ದೇಶದ ಒಕ್ಕಲುತನದ ಅಭಿವೃದ್ಧಿಯಲ್ಲಿ ಹಾರೆ, ನೇಗಿಲು, ಕೊಯ್ಲು, ಒಕ್ಕಣೆ ಯಂತ್ರ, ಕೊಯ್ಲಿನ ಯಂತ್ರ ಮತ್ತು [illegible] ಯಂತ್ರ ಇಂಥ ಉಪಕರಣಗಳೇ ಮುಖ್ಯ ಪಾತ್ರ ವಹಿಸುತ್ತವೆ. ಎತ್ತಿನ ಜೋಡುಗಳು, ಮಿಡಿಯುವ ಕುದುರೆಗಳು ಇವನ್ನು ಟ್ರಾಕ್ಟರಿಗೆ ಬದಲಾಗಿ ನಾವು ಸುಖವಾಗಿ ಬಳಸಿಕೊಳ್ಳಬಹುದು. ಪೆಟ್ರೋಲು ನಮ್ಮಲ್ಲಿಲ್ಲವೆಂಬ ಕಾರಣದಿಂದ ಸ್ವಲ್ಪವೇ ಕೀಲೆಣ್ಣೆ ಬೇಕಾಗುವ ಇಂಥ ಉಪಕರಣಗಳ ಕಡೆಗೆ ನಾವು [illegible] [illegible] ಕುಳಿತುಕೊಳ್ಳಕೂಡದು. ಹಳೆಯ ಕಾಲದ ಅನಾಗರಿಕ ಪದ್ಧತಿಗಳನ್ನು ಬಿಟ್ಟು ಇಂದಿನ ಯಂತ್ರಮಯ ಕೃಷಿಪದ್ಧತಿಯನ್ನು ನಾವು ಬಳಕೆಗೆ ತರುವ ಕಾಲ ಬಂದಿದೆ.

[illegible]

ಧರ್ಮಾಂತರ

ಕೆಲ ತಿಂಗಳುಗಳ ಹಿಂದೆ ಗುಜರಾಥದ ಪ್ರಸಿದ್ಧ ಹರಿಜನ ಸೇವಕರಾದ ಶ್ರೀ ಪರೀಕ್ಷಿತಲಾಲ ಮಜುಮದಾರರು ಕ್ರಿಶ್ಚನ್ ಮಿಶನರಿಗಳನ್ನುದ್ದೇಶಿಸಿದ ಒಂದು ಬಿನ್ನಹವನ್ನು ಪ್ರಕಟಿಸಬೇಕಾಗಿ ನನ್ನೆದುರಿಗೆ ಕಳಿಸಿದ್ದರು. ಶಾಸನಮೂಲಕವಾಗಿ ಈಗ ಅಸ್ಪೃಶ್ಯತೆ ನಿವಾರಿಸಲ್ಪಟ್ಟಿರುವದರಿಂದ ಆ ಶಾಸನ ಸಫಲವಾಗುವಂತೆ ಮಾಡುವದಕ್ಕೋಸ್ಕರ ಮತ್ತು ಹರಿಜನರ ಹಿತಾರ್ಥವಾಗಿ ಮಿಶನರಿಗಳು ತಮ್ಮ ವಿಶಿಷ್ಟ ಹರಿಜನ ಶಾಲೆಗಳನ್ನು ಮುಚ್ಚಿಬಿಡಬೇಕೆಂದು ಅವರು ಕೇಳಿಕೊಂಡಿದ್ದರು. ಸಾಧ್ಯವಿದ್ದರೆ ಆ ಶಾಲೆಗಳು ಸಾಮಾನ್ಯ ಶಾಲೆಗಳಾಗಿ ಮಾರ್ಪಟ್ಟು ಎಲ್ಲ ವಿದ್ಯಾರ್ಥಿಗಳಿಗೆ ಅನುಕೂಲವಾದ ಸ್ಥಳದಲ್ಲಿರಬೇಕೆಂದೂ ಎಲ್ಲರಿಗೂ ಅವುಗಳಲ್ಲಿ ಪ್ರವೇಶವಿರಬೇಕೆಂದೂ ಅವರು ವಿಜ್ಞಾಪಿಸಿಕೊಂಡಿದ್ದರು. ಹರಿಜನರು ತಮ್ಮ ಮಕ್ಕಳನ್ನು ಸಾಮಾನ್ಯ ಶಾಲೆಗಳಿಗೆ ಕಳಿಸುವಂತೆ ಪ್ರೇರಿಸುವಲ್ಲಿಯೂ ಮಿಶನರಿಗಳು ಸಹಾಯ ಮಾಡಬೇಕೆಂದು ಅವರ ಕೋರಿಕೆಯಾಗಿತ್ತು.

ಶಾಸನವೂ ಸರಕಾರದ ಧೋರಣೆಯೂ ಸ್ಪಷ್ಟವಾಗಿದ್ದರೂ ಸವರ್ಣರ ಅಂತರ್ಯ ಮಾತ್ರ ಇನ್ನೂ ಸ್ನೇಹಪರವಾಗಿ ರೂಪುಗೊಂಡಿಲ್ಲವಾದುದರಿಂದ ಕ್ರಿಶ್ಚನ್ ಮಿಶನರಿಗಳನ್ನು ಅವರ ಶೈಕ್ಷಣಿಕ ಚಟುವಟಿಕೆಗಳಿಂದ ಪರಾವರ್ತಿಸುವದು ಇಷ್ಟವಲ್ಲವೆಂದು ನನಗೆ ತೋರಿತು. ಸಾಮಾನ್ಯ ಶಾಲೆಗಳ ಸಂಗಡ ಸಂಗಡಲೇ ವಿಶೇಷ ಹರಿಜನ ಶಾಲೆಗಳನ್ನು ನಡೆಸಿಕೊಂಡು ಹೋಗುವಲ್ಲಿ ಹಾನಿಯೇನೂ ಗೋಚರವಾಗಲಿಲ್ಲ. ಶ್ರೀ ಠಕ್ಕರಬಾಪಾ ಅವರನ್ನೂ ಈ ವಿಷಯದಲ್ಲಿ ವಿಚಾರಿಸಿದೆ. ಅವರೂ ಸಮ್ಮತರಾದರು. ಅದರಿಂದ ಶ್ರೀ ಪರೀಕ್ಷಿತಲಾಲ ಮುಜುಮದಾರರಿಗೆ ಈ ಬಿನ್ನಹವನ್ನು ಕೆಲಕಾಲ ತಡೆಹಿಡಿಯಲು ಕೇಳಿಕೊಂಡೆವು.

ತಮ್ಮ ಬಿನ್ನಹದಲ್ಲಿ ಶ್ರೀ ಪರೀಕ್ಷಿತಲಾಲರು, ಶಿಕ್ಷಣದ ಸೋಗಿನಲ್ಲಿ ಮಿಶನರಿಗಳು ನಡೆಸಿದ ಧರ್ಮಾಂತರದ ಚಟುವಟಿಕೆಗಳನ್ನೂ ಉಲ್ಲೇಖಿಸಿದ್ದರು. ವಸ್ತುತಃ, ಅವರ ಮುಖ್ಯ ಲಕ್ಷ್ಯ ಅದೇ ಆಗಿತ್ತು; ಶಿಕ್ಷಣ, ವೈದ್ಯಕೀಯ ಸಹಾಯ ಮತ್ತು ಇತರ ಭೂತದಯಾತ್ಮಕ ಸೇವೆಗಳು ಆ ಲಕ್ಷ್ಯಕ್ಕೆ ಉಪಲಕ್ಷ್ಯ ಮಾತ್ರ. ಈ ಸೇವಾಕಾರ್ಯದ ಹಿಂದಿದ್ದ ಹಿಂದೂ ವಿರೋಧಿ ಮನೋವೃತ್ತಿಯೇ ಶ್ರೀ ಪರೀಕ್ಷಿತಲಾಲರನ್ನು ಆ ಬಿನ್ನಹ ಹೊರಡಿಸಲು ಪ್ರೇರೇಪಿಸಿತ್ತು.

ಕ್ರಿಶ್ಚನ್ ಧರ್ಮಕ್ಕೆ ಪರಿವರ್ತನ ಹೊಂದುವದರಿಂದ ಹರಿಜನರ ಆಧ್ಯಾತ್ಮಿಕ ಹಿತಕ್ಕೆ ಅನುಕೂಲವಾಗುವದೆಂದು ನನಗೆ ಮನವರಿಕೆಯಾಗಿದ್ದರೆ, ಅವರು ಧರ್ಮದ ಹಣೆಪಟ್ಟಿಯನ್ನು ಬದಲಿಸಿದರೂ ಚಿಂತೆಯಿಲ್ಲವೆಂದು ಹೇಳಲು ನಾನಂತೂ ಹಿಂಜರಿಯುತ್ತಿದ್ದಿಲ್ಲ. ಹೃದಯದಲ್ಲಿ ಕಲ್ಯಾಣ ಭಾವನೆಯನ್ನು ಜಾಗರಿಸುವ, ಅಂದರೆ ಸತ್ಯಸಂಧತೆ, ನ್ಯಾಯನಿಷ್ಠೆ, ಆಶೆ, ಪ್ರೇಮ, ಔದಾರ್ಯ, ಸೇವೆ, ವಿನಯವೇ ಮೊದಲಾದ ಸದ್ಭಾವಗಳನ್ನುಂಟುಮಾಡುವ ಕಿಡಿ ಪ್ರತಿಯೊಬ್ಬನಿಗೂ ದೊರೆಯಬೇಕಾದ್ದು ಪರಮ ಅವಶ್ಯಕತೆ. ಯಾವುದಾದರೊಂದು ಕಾರಣದಿಂದ ಬೇರೊಂದು ಧರ್ಮವೇ ಆತ್ಮದಲ್ಲಿ ಅಂಥ ಕಿಡಿಯನ್ನು ಹೊತ್ತಿಸಬಲ್ಲದಾಗಿದ್ದರೆ, ಆಗ ಮನುಷ್ಯ ಬೇರೊಂದು ಧರ್ಮವನ್ನು ಅಂಗೀಕರಿಸಿ ಶುದ್ಧ, ಪ್ರಜ್ಞಾಯುಕ್ತ ಜೀವನವನ್ನು ನಡೆಸುವದು ಒಳಿತಲ್ಲವೆ ತನ್ನ ಪೂರ್ವಜರ ಧರ್ಮದ ಅಶುದ್ಧ, ಅಜ್ಞಾನಿ ಜೀವನದಲ್ಲಿ ಬಾಳುವದು ಧರ್ಮ್ಯವಲ್ಲ.

ಆದರೆ ಜಗತ್ತಿನಲ್ಲಿ ಮತಕಟ್ಟಿಕೊಂಡ ವಿವಿಧ ಧರ್ಮಗಳು ತಮ್ಮ ಅನುಯಾಯಿಗಳಲ್ಲಿ ಆ ತಿಳಿವಿನ ಕಿಡಿಯನ್ನು ಬೆಳಗಿಸುವ ಸಾಮರ್ಥ್ಯವನ್ನು ಎಂದೋ ಕಳೆದುಕೊಂಡುಬಿಟ್ಟಿವೆ. ಮನುಷ್ಯರನ್ನು ಅಖಂಡ ಬಾಂಧವ್ಯದಲ್ಲಿ ಒಂದಾಗಿ ಬಿಗಿಯುವ ಶಕ್ತಿಯಾಗಿರುವ ಬದಲು ಅವೀಗ ಒಡಕಿನ ಶಕ್ತಿಗಳಾಗಿ, ಮನುಷ್ಯಕುಲದ ಐಕಮತ್ಯವನ್ನು ಕೆಡಿಸಿ, ಅದನ್ನು ಭಿನ್ನ ಭಿನ್ನ ಸಮಾಜಗಳಾಗಿ ತುಂಡರಿಸುತಿವೆ. ಅವು ಆ ನಾಮರಹಿತನ ದಾತನಿಗೆ ಅನೇಕ ನಾಮಗಳನ್ನು ಕೊಟ್ಟು ಅವನ ಆರಾಧನೆಗೆ ನಾನಾ ಪ್ರಕ್ರಿಯೆಗಳನ್ನು ಸೃಷ್ಟಿಸಿವೆಯಲ್ಲದೆ, ತಂತಮ್ಮ ಗುರುಗಳಿಂದ ಉಪದಿಷ್ಟವಾದ ನಾಮವೊಂದೇ ಆ ನಾಮರಹಿತನ ಸತ್ಯನಾಮವೆಂದೂ ತಾವು ರೂಢಿಸಿಕೊಂಡ ಆರಾಧನೆಯ ಪ್ರಕ್ರಿಯೆ ಒಂದೇ ಪರಮಸಾರ್ಥಕವೆಂದೂ ಹೇಳಿಕೊಳ್ಳುತ್ತಿವೆ. ಅಂದ ಮೇಲೆ ಅವು ಬೇರೆ ಬೇರೆ ಬಗೆಯ ಹೆಸರು, ವೇಷಭೂಷೆ, ನಡೆವಳಿ, ಜೀವನ ಪದ್ಧತಿ, ವಿವಾಹ, ದಾಯಭಾಗವೇ ಮೊದಲಾದ ಸಾಮಾಜಿಕ ವಿಧಿವಿಧಾನಗಳನ್ನು ರೂಪಿಸಿಕೊಂಡು ಇತರ ಧರ್ಮೀಯರಿಗಿಂತ ಸಾಧ್ಯವಾದಷ್ಟು ಭಿನ್ನರಾಗಿ ಕಾಣಿಸಿಕೊಳ್ಳಲು ಪ್ರಯತ್ನಿಸುವದೇನೂ ಸೋಜಿಗವಲ್ಲ. ವಾಲ್ಜಿಯೆಂಬುವನು ವಿಲಿಯಂ ಅಥವಾ ವಲ್ಲಿ ಮಹಮದನಾಗಿಬಿಡುತ್ತಾನೆ, ದುಲಾಜಿಯೆಂಬುವನು ಜೊನಾಥ್ ಇಲ್ಲವೇ ದೌಲತ್‌ಖಾನನಾಗುತ್ತಾನೆ, ಮುಲಿ ಇದ್ದವಳು ಮೇರಿಯೋ ಮರಿಯಮಳೋ ಆಗಿಬಿಡುತ್ತಾಳೆ. ಹರಿಜನರಿಗಂತೂ ಇಂಥ ಸೊಂಪಾದ ಹಿಂದೂ ಹೆಸರುಗಳು ಕೂಡ ಇರುವದಿಲ್ಲೆಂಬುದು ಸರ್ವಶ್ರುತ. ತಮ್ಮ ಮಕ್ಕಳನ್ನು ವಲಿಯಾ, ಧುಲಿಯಾ, ಕುಕಡಾ, ರಾಮಲಾ ಎಂದು ಮೊದಲಾಗಿ ಕರೆಯುವದರಲ್ಲೆ ಅವರಿಗೆ ತೃಪ್ತಿ. ಈ ಶಾಲೆಗಳಿಗೆ ಹೋಗುವ ಎಳೆಯ ಹುಡುಗರಿಗೆ, ಅವರ ಕ್ರಿಶ್ಚನ್ ಉಪಾಧ್ಯಾಯರು, ಯಾರನ್ನೂ ಕೇಳದೆ, ಕಿವಿಗಿಂಪಾದ ಯುರೋಪಿಯನ್ ಹೆಸರುಗಳನ್ನು ಕೊಟ್ಟು, ವಿಲಿಯಂ, ಜೇಮ್ಸ್, ಜಾರ್ಜ, ವೆಲಂಟಾಯಿನ್, ಮೇರಿ, ಲಿಲಿ ಇತ್ಯಾದಿಯಾಗಿ ಕರೆಯತೊಡಗುವರು. ಮೇಲ್ಜಾತಿಯ ಜನರು ಕೂಡ ಇಂಥ ಹೆಸರುಗಳಿಂದ ಮೋಹಿತರಾಗುವದು ಗೊತ್ತಿದ್ದ ಮಾತು. ಚಿಕ್ಕಮಕ್ಕಳು ಆ ಹೆಸರುಗಳಿಗೆ ಒಲಿಯುವದೇನು ವಿಚಿತ್ರ? ಆ ಮೇಲೆ ಮೆಲ್ಲಮೆಲ್ಲನೆ ಅವರಲ್ಲಿ ತಾವು ಕ್ರಿಶ್ಚನರಾಗಿದ್ದೇವೆಂಬ ಭಾವನೆಯನ್ನು ಉಂಟುಮಾಡಲಾಗುತ್ತದೆ. ಹೀಗೆ ಆ ಶಾಲೆಗಳು ಕ್ರಿಶ್ಚನ್ನರನ್ನು ತಯಾರು ಮಾಡುವ ಕಾರಖಾನೆಗಳಾಗಿ ಹೋಗುತ್ತವೆ.

ಗುಜರಾಥದ ಒಂದು ಹಳ್ಳಿಯ ಸಮಗಾರರು ಕಳಿಸಿದ ದೂರಿನ ಆಧಾರದಿಂದ ನಾನು ಹೀಗೆ ಬರೆಯುತ್ತಿದ್ದೇನೆ.

ಕ್ರಿಶ್ಚನ್ ಮಿಶನರಿ ಸಂಸ್ಥೆಗಳು ತಮ್ಮ ನಿಲುಮೆಯನ್ನು ನಿಜವಾದ ಧರ್ಮದ ಒರೆಗಲ್ಲಿಗೆ ಹಚ್ಚಿನೋಡಬೇಕೆಂದು ನಾನು ಕೇಳಿಕೊಳ್ಳುವೆ. ಯಾವ ಚರ್ಚಿನಲ್ಲಿಯೂ ದೀಕ್ಷೆ ಪಡೆಯದೆಯೆ ತಾವು ಶುದ್ಧ ಕ್ರಿಶ್ಚನ್ನರೆಂದೂ ಕಲಮಾವನ್ನು ಪಠಿಸದೆಯೂ ತಾವು ಶುದ್ಧ ಮುಸ್ಲಿಮರೆಂದೂ ಗಾಂಧೀಜಿ ಹೇಳಿಕೊಳ್ಳುತ್ತಿದ್ದರು. ಅದೇ ಪ್ರಕಾರ ಅವರು ಆಯಾ ಧರ್ಮಗಳ ನಿಷ್ಠಾವಂತ ಅನುಯಾಯಿಗಳಷ್ಟೆ ಶುದ್ಧ ಸಿಖರೂ ಶುದ್ಧ ಬೌದ್ಧರೂ ಶುದ್ಧ ಜೈನರೂ ಆಗಿದ್ದರು. ಮೇಲಾಗಿ ಅವರು ತಮ್ಮ ಜನ್ಮಾಧೀನವಾಗಿ ಶುದ್ಧ ಸನಾತನ ವೈಷ್ಣವ ಹಿಂದುವೂ ಆಗಿದ್ದರು. ವಸ್ತುತಃ ಅವರು ಸತ್ಯದ ಅನುಯಾಯಿಗಳಾಗಿದ್ದರೇ ಹೊರತು ಯಾವುದೊಂದು ಮತದ ಹಣೆಪಟ್ಟಿ ಹಚ್ಚಿಕೊಂಡಿರಲಿಲ್ಲ.

ವಿಶಿಷ್ಟ ಧರ್ಮದ ಹೆಸರು ಹೊತ್ತ ಒಂದು ಸಮಾಜದಲ್ಲಿ ನಾವು ಹುಟ್ಟಿರಬಹುದು. ಆದರೆ ಅದಕ್ಕೆ ಮಿತಿಮೀರಿದ ಮಹತ್ವ ಕೊಡುವ ತಪ್ಪು ಮಾಡುವದು ಬೇಡ. ನಮಗೆ ಪರಂಪರಾಗತವಾಗಿ ಬಂದ ಹಣೆಪಟ್ಟಿಯ ಪ್ರಜ್ಞೆಯನ್ನಾಗಲಿ ಅಭಿಮಾನವನ್ನಾಗಲಿ ತೊರೆಯುವದು ನಮ್ಮಿಂದಾಗದಿದ್ದರೂ ಅದನ್ನು ಆ ಪಟ್ಟಿಯಿಲ್ಲದವರ ಹಣೆಗೆ ಹಚ್ಚುವ ಹವ್ಯಾಸಕ್ಕಾದರೂ ಬೀಳದಿರೋಣ. ಇದ್ದ ಸ್ವಂತ ಹಣೆಪಟ್ಟಿಯನ್ನು ಕಿತ್ತು ನಮ್ಮದನ್ನು ಹಚ್ಚಿಕೊಳ್ಳೆಂದು ಯಾರಿಗೂ ಬೋಧಿಸುವ ವ್ಯಾಪಾರವೂ ನಮಗೆ ಬೇಡ. ಒಂದಕ್ಕೊಂದು ಹೊಂದಿಕೆಯಾಗದ ಗುಂಪುಗಳಾಗಿ ಜನರನ್ನು ವಿಭಜಿಸುವ ಸಂಸ್ಥೆಗಳನ್ನು ಕಟ್ಟಿದರೆ ಭಾರತಕ್ಕೆ ಕೇಡು ಬಗೆದಂತಾಗುವದು.

ಜನಗೂ ಪರಮಾತ್ಮನಿಗೂ ನಡುವಣ ದೂತನನ್ನಾಗಿ ಕ್ರಿಸ್ತನನ್ನಾಗಲಿ ಮಹಮ್ಮದನನ್ನಾಗಲಿ ಅಂಗೀಕರಿಸಿದರೆ ಕೂಡ ಹೆಸರು, ಜೀವನಕ್ರಮ, ವಿವಾಹವಿಧಿ, ವಾರಸಾ ಮೊದಲಾದ ರೂಢಿಗಳಲ್ಲಿ ಬದಲಾವಣೆಯಾಗಕೂಡದು. ಧರ್ಮಾಂತರದಿಂದ ಹಳೆಯ ಸಮಾಜದ ಸಂಪರ್ಕ ಸಂಪೂರ್ಣ ಒಡೆದುಹೋಗದಿದ್ದರೆ, ಅದರಲ್ಲಿ ಕಹಿ ಉಳಿಯದು.

ಇನ್ನು ಹಿಂದುಗಳಾದರೂ ದೇವರನ್ನು ಸಮೀಪಿಸಲು ಯಾರಾದರೊಬ್ಬನು ಉಪಯೋಗಿಸುವ ಪದ್ಧತಿಗೆ ಬಹಳ ಮಹತ್ವ ಕೊಡದಿದ್ದರೆ ಲೇಸು. ಒಬ್ಬ ಹಿಂದು ರಾಮನನ್ನೂ ಇನ್ನೊಬ್ಬನು ಕೃಷ್ಣನನ್ನೂ ಮತ್ತೊಬ್ಬನು ಶಿವನನ್ನೂ ಮುಂತಾಗಿ ಆರಾಧಿಸಿದರೆ ಹೇಗೆ ಅವರು ಭೇದವನ್ನು ಕಲ್ಪಿಸಿಕೊಳ್ಳುವದಿಲ್ಲವೊ ಹಾಗೆಯೆ ತಮ್ಮಲ್ಲೊಬ್ಬನು ಕ್ರಿಸ್ತನಿಗೋ ಮಹಮ್ಮದನಿಗೋ ಅನುಗತನಾದಾಕ್ಷಣ ಅವನನ್ನು ಸಮಾಜದಿಂದ ತಳ್ಳಿ ಬಿಡಬಾರದು. ಹೀಗಾದರೆ ಧರ್ಮಾಂತರಕ್ಕಿರುವ ಉತ್ತೇಜನವೇ ಹೋಗಿಬಿಡುವದು.

ಮುಂಬಯಿ — ಕಿ. ಘ. ಮಶ್ರೂವಾಲಾ

೨-೧-೪೯

ಸೇವಾಗ್ರಾಮದಲ್ಲಿ ನಡೆದ ಶಾಂತಿವಾದಿಗಳ ಪರಿಷತ್ತಿನಲ್ಲಿ ಸ್ವೀಕೃತವಾದ ಗೊತ್ತುವಳಿಗಳು

ಜನವರಿ ೨೩ ರಿಂದ ೨೮ ರ ವರೆಗೆ ಸೇವಾಗ್ರಾಮದಲ್ಲಿ ಡಾ. ರಾಜೇಂದ್ರ ಪ್ರಸಾದರ ಅಧ್ಯಕ್ಷತೆಯಲ್ಲಿ ಶಾಂತಿವಾದಿಗಳದೊಂದು ಪರಿಷತ್ತು ಕೂಡಿತು. ಅದಕ್ಕೆ ಭಾರತದ ನಾನಾಭಾಗಗಳಿಂದಲೂ ಯುರೋಪ್ ಮತ್ತು ಅಮೇರಿಕಗಳಿಂದಲೂ ೪೦ ಜನರು ಬಂದಿದ್ದರು. ಅಹಿಂಸಾತತ್ತ್ವವನ್ನು ಒಪ್ಪುವ ಸ್ತ್ರೀಪುರುಷರದೊಂದು ಜಾಗತಿಕ ಸಭೆಯನ್ನು ಕರೆಯಬೇಕೆಂದು ಗಾಂಧಿಯವರು ಸಾಯುವ ಮೊದಲು ಒಪ್ಪಿಗೆಯಿತ್ತ ಯೋಜನೆಗೆ ಪರಿಷತ್ತು ಬೆಂಬಲಕೊಟ್ಟಿತು. ಮುಖ್ಯ ಸಭೆಯು ಶಾಂತಿನಿಕೇತನದಲ್ಲಿ ನಾಳಿನ ಡಿಸೆಂಬರ್ ೧ ರಿಂದ ೮ ರ ವರೆಗೆ ನಡೆಯತಕ್ಕದ್ದೆಂದು ನಾವು ನಿರ್ಣಯಿಸುತ್ತೇವೆ. ಡಿಸೆಂಬರಿನ ಉತ್ತರಾರ್ಧದಲ್ಲಿ ಭಾರತೀಯೇತರ ಪ್ರತಿನಿಧಿಗಳಿಗೆ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಇತರ ಸಂಸ್ಥೆಗಳನ್ನೂ ದೊಡ್ಡ ಮನುಷ್ಯರನ್ನೂ (ಅದರಲ್ಲೂ ಹೆಚ್ಚಾಗಿ ಗಾಂಧಿಯವರ ಜೀವನ ಮತ್ತು ಕೃತಿಗಳಿಗೆ ಸಂಬಂಧಿಸಿದವರನ್ನು) ಸಂದರ್ಶಿಸಲು ಸಂದರ್ಭವನ್ನು ಕಲ್ಪಿಸಿಕೊಡತಕ್ಕದ್ದು. ೧೯೫೦ ರ ಜನವರಿಯ ಮೊದಲಿನಲ್ಲಿ ಕೆಲ ದಿನಗಳ ಮಟ್ಟಿಗೆ ಸೇವಾಗ್ರಾಮದಲ್ಲಿ ಪ್ರತಿನಿಧಿಗಳು ಪುನಃ ಕೂಡಬೇಕು. ವರ್ಗಗಳ ಮತ್ತು ರಾಷ್ಟ್ರಗಳ ಕಲಹಗಳಲ್ಲಿ ಅಹಿಂಸಾತತ್ತ್ವವನ್ನು ಬಳಸುವುದರ ವಿಷಯವಾಗಿ ಚರ್ಚಿಸಲು ಸ್ಥಳೀಯ ಗುಂಪು ಅಥವಾ ಸಮಿತಿಗಳನ್ನು ರಚಿಸಲು ಮತ್ತು ಈ ಸಭೆಯ ಸಿದ್ಧತೆಗಳಲ್ಲಿ ಭಾಗವಹಿಸಲು ಸಾರ್ವಜನಿಕರನ್ನು ನಾವು ಆಮಂತ್ರಿಸುತ್ತೇವೆ. ಅವರು ಕಲಕತ್ತದ ಒಂದನೆಯ ಅಪ್ಪರ್‌ವುಡ್ ರಸ್ತೆಯಲ್ಲಿರುವ ಜಾಗತಿಕ ಶಾಂತಿವಾದಿಗಳ ಸಭೆಯ ಸಂಘಟಕ ಕಾರ್ಯದರ್ಶಿಗಳಾದ ಶ್ರೀ ಹೀರಾ ಬೋಸರೊಡನೆ ಪತ್ರವ್ಯವಹಾರ ಮಾಡುವರೆಂದು ಆಶಿಸುತ್ತೇವೆ.

೨ ಏಶಿಯ, ಆಫ್ರಿಕ, ಯುರೋಪ್, ಅಮೇರಿಕ ಮತ್ತು ಆಸ್ಟ್ರೇಲಿಯಗಳಿಂದ ಚಟುವಟಿಕೆಯುಳ್ಳ ೫೦ ಜನ ಕಾರ್ಯಕರ್ತರನ್ನು ಮುಂಬರುವ ಚಳಿಗಾಲದ ಹೊತ್ತಿಗೆ ಭಾರತದಲ್ಲಿ ಸೇರುವ ಜಾಗತಿಕ ಶಾಂತಿವಾದಿಗಳ ಸಭೆಗಾಗಿ ನಿಮಂತ್ರಿಸಲಾಗಿದೆ. ನಿಮಂತ್ರಿಸುವ ನಾಡಾದ ಭಾರತವು ನಿಮಂತ್ರಣವನ್ನು ಸ್ವೀಕರಿಸಿದವರ ಎಲ್ಲ ಖರ್ಚನ್ನೂ ವಹಿಸಿಕೊಳ್ಳುವ ಮರ್ಯಾದೆಯನ್ನು ಪಡೆಯಬೇಕೆಂಬುದು ಗಾಂಧಿಯವರ ಅಪೇಕ್ಷೆಯಾಗಿತ್ತು. ಪರದೇಶದ ಅನೇಕ ಪ್ರತಿನಿಧಿಗಳ ಖರ್ಚನ್ನು ಅವರ ನಾಡುಗಳೇ ವಹಿಸಿಕೊಳ್ಳುವುವೆಂದು ನಮಗೆ ತಿಳಿದುಬಂದಿದೆ. ಆದರ ಮೇಲೆ ಭಾರತದಲ್ಲಿಯ ವೆಚ್ಚಕ್ಕೂ ಬೇರೆ ನಾಡುಗಳಿಂದ ಬರುವವರಲ್ಲಿ ಕೆಲವರ ಪ್ರವಾಸದ ಖರ್ಚನ್ನು ವಹಿಸಿಕೊಳ್ಳಲಿಕ್ಕೂ ನಮಗೆ ೨॥ ಲಕ್ಷ ರೂಪಾಯಿಗಳು ಬೇಕಾಗುತ್ತವೆ. ಮತ್ತು ಈ ಬಿನ್ನಹಕ್ಕೆ ಉದಾರವಾಗಿ ಮನ್ನಣೆ ಕೊಡಬೇಕೆಂದು ಜಾಗತಿಕ ಶಾಂತಿಗಾಗಿ ತವಕಪಡುವವರನ್ನು ನಾವು ನಿಮಂತ್ರಿಸುತ್ತೇವೆ.

೩ ಸ್ವಾತಂತ್ರ್ಯವನ್ನು ಪಡೆಯುವುದರಲ್ಲಿ ಬಳಸಿದ ಅಹಿಂಸೆಯ ಯಶಸ್ವಿಪ್ರಯೋಗವನ್ನು ನೆನಪಿಗೆ ತಂದುಕೊಂಡು ಕಠಿನ ಪ್ರಶ್ನೆ ಮತ್ತು ಪರಿಸ್ಥಿತಿಗಳನ್ನು ಬಗೆಹರಿಸಲು ಇಂದು ಬೇಕಾದ ಆ ಬಗೆಯ ಅಹಿಂಸಾ ಸಾಧನಗಳನ್ನು ಹುಡುಕಿ ತೆಗೆಯಬೇಕೆಂದು ನಮ್ಮ ಸರಕಾರಗಳಿಗೂ ಜನಗಳಿಗೂ ಈ ಪರಿಷತ್ತು ಆಗ್ರಹಪೂರ್ವಕವಾಗಿ ವಿನಂತಿ ಮಾಡಿಕೊಳ್ಳುತ್ತದೆ. ಶಿಕ್ಷಣಸಂಸ್ಥೆಗಳಲ್ಲಿ ಸೈನಿಕ ಶಿಕ್ಷಣವನ್ನು ಕೊಡಲಾರಂಭಿಸುವುದರ ಬಗ್ಗೆ ಈ ಪರಿಷತ್ತು ಭೀತಿಯನ್ನು ವ್ಯಕ್ತಮಾಡುತ್ತದೆ. ನಮ್ಮ ಬಾಳಿನಲ್ಲೇ ಸತ್ಯಾಹಿಂಸೆಗಳನ್ನು ಆಚರಿಸಲು ನಮಗೆ ಸಾಧ್ಯವಾಗದುದು ನಮ್ಮ ತಿಳಿವಳಿಕೆಯಲ್ಲಿದೆ. ಆದರೆ ಸಾಮಾನ್ಯವಾಗಿ ಜನರಲ್ಲಿ ಮತ್ತು ವಿಶೇಷತಃ ಮುಂದಿನ ಪೀಳಿಗೆಯಲ್ಲಿ ಶಾಂತಿ ಪ್ರಿಯತೆಯನ್ನು ಬೋಧಿಸಲು ಮಾಡಬೇಕಾದ ವಿಧಿಗಳನ್ನು ಹುಡುಕಿ ತೆಗೆಯುವುದರಲ್ಲಿ ಸದಾಶಯವುಳ್ಳ ಎಲ್ಲ ಮನುಷ್ಯರೊಡನೆ ಕೂಡಿಕೊಳ್ಳಲು ಬಯಸುತ್ತೇವೆ.

೪ ಸತ್ಯಾಹಿಂಸೆಗಳ ಮೇಲೆ ನಿಂತ ಜಾಗತಿಕ ಸುವ್ಯವಸ್ಥೆಯನ್ನು ಅಸ್ತಿತ್ವದಲ್ಲಿ ತರಲು ನೆರವಾಗುವುದೇ ಮುಖ್ಯ ಗುರಿಯಾಗಿ ಉಳ್ಳ ಭಾರತದಲ್ಲಿ ಒಂದು ಸಂಘವಿರಬೇಕಾದುದು ಅಗತ್ಯವೆಂದು ಈ ಪರಿಷತ್ತಿಗೆ ಮನದಟ್ಟಾಗಿದೆ. ಸತ್ಯಾಹಿಂಸೆಗಳನ್ನು ಜೀವನಸೂತ್ರವನ್ನಾಗಿ ಸ್ವೀಕರಿಸುವ ಎಲ್ಲರಿಗೂ ಇದರ ಸದಸ್ಯತ್ವವನ್ನು ತೆರೆದಿಡಲಾಗಿದೆ.

ಅಂಥ ಸಂಘದ ಮುಖ್ಯೋದ್ದೇಶವೇನೆಂದರೆ:

೧ ಸತ್ಯಾಹಿಂಸೆಗಳನ್ನು ಆಧರಿಸಿದ ಸಮಾಜಪದ್ಧತಿಯನ್ನು ಸ್ಥಾಪಿಸಲು ಹೆಣಗುವುದು.

೨ ಗುಂಪು ಮತ್ತು ರಾಷ್ಟ್ರಗಳಲ್ಲಿಯ ತಿಕ್ಕಾಟದ ಕಾರಣಗಳನ್ನು ಕಿತ್ತೊಗೆಯಲು ದುಡಿಯುವುದು.

೩ ಘರ್ಷಣದ ಗಾಯಗಳನ್ನು ಮಾಯಿಸುವುದರಲ್ಲಿ ಸಹಾಯ ಮಾಡುವುದು.

೪ ಅಂತಾರಾಷ್ಟ್ರೀಯ ಸೌಹಾರ್ದವನ್ನು ಮತ್ತು ಜಗದಗಲಕ್ಕೂ ಸತ್ಯಾಹಿಂಸೆಗಳನ್ನು ಅನುಭವಗಳ ವೈಯಕ್ತಿಕ ವಿನಿಮಯದ ಮೂಲಕ ಜೀವನಾಧಾರವೆಂದು ಗ್ರಹಿಸುವುದನ್ನು ಪ್ರೋತ್ಸಾಹಿಸುವುದು. ಪರಿಣಾಮಕರವಾಗಿ ತಿಕ್ಕಾಟವನ್ನು ಕಡಿಮೆ ಮಾಡಲು ಸ್ಥಳೀಯ ಇಲ್ಲವೆ ಸಾರ್ವತ್ರಿಕ ಶಾಂತಿಪಥಕಗಳನ್ನು ಸಂಘಟಿಸುವುದು.

೫ ಜಾಗತಿಕ ಶಾಂತಿಯನ್ನು ಸ್ಥಾಪಿಸುವುದರಸಲುವಾಗಿ ಸತ್ಯಾಹಿಂಸೆಗಳಿಗೆ ಹೊಂದುವ ಇತರ ಕ್ರಮಗಳನ್ನು ತೆಗೆದುಕೊಳ್ಳುವುದು.

೬ ಜಾಗತಿಕ ಶಾಂತಿವಾದಿಗಳ ಸಭೆಯ ಕಾರ್ಯಕಾರಿ ಸಮಿತಿಗೆ ಮೇಲಿನ ಗೊತ್ತುವಳಿಗಳನ್ನು ಅಮಲಿನಲ್ಲಿ ತರಬೇಕೆಂದು ಬಿನ್ನವಿಸಿಕೊಳ್ಳಲಾಗಿದೆ.

“ವಿಯೋಗ ಮತ್ತು ನಾಶಕ್ಕಾಗಿ ದುಃಖಿಸುವದೆಂದರೆ ಅಜ್ಞಾನದ ಪರಮಾವಧಿ, ಎಂಬ ಮಾತು ಹೆಚ್ಚೆಚ್ಚು ವಿಚಾರ ಮಾಡುತ್ತ ನಡೆದಂತೆ ನನಗೆ ಮನವರಿಕೆಯಾಗಹತ್ತಿದೆ. ಅದು ಅಜ್ಞಾನದ ಪರಮಾವಧಿ ಎಂದು ತಿಳಿದುಕೊಳ್ಳುವದೇ ಮೋಕ್ಷವು. ಸಾರ ಭೂತವಸ್ತುವಿಗೆ ನಾಶವಿಲ್ಲ, ವಿಯೋಗವಿಲ್ಲ. ಮಿತ್ರರಲ್ಲಿಯ ಸಾರವಸ್ತುವಿಗಾಗಿ ನಾವವರನ್ನು ಪ್ರೀತಿಸುವೆವಾದರೂ ಕೆಲ ಕಾಲದ ವರೆಗೆ ಆ ಸಾರವಸ್ತುವಿನ ಆವರಣವಾದದು. ನಿಸ್ಸಾರವಸ್ತುವಿನ ನಾಶಕ್ಕಾಗಿ ದುಃಖಪಡುವೆವು. ಇದು ಶೋಕಪರ್ಯವಸಾಯಿಯಾದುದು. ಅಪೂರ್ಣತ್ವದಿಂದ ಪೂರ್ಣತ್ವವನ್ನು ಪಡೆಯುವುದಕ್ಕಾಗಿ ಮಿತ್ರತ್ವದ ಉಪಯೋಗಮಾಡಿಕೊಳ್ಳುವದು ಅವಶ್ಯವಾಗಿದೆ”—

—ಗಾಂಧೀಜಿ

ಮಹಾತ್ಮಾ ಗಾಂಧಿಯವರ ಇಡಿ ಜೀವನವೇ ತ್ಯಾಗದ ಇನ್ನೊಂದು ಹೆಸರು.

—ರವೀಂದ್ರನಾಥ ಠಾಕುರ



ಸ್ವಾವಲಂಬನ

ಮಗೂ,

ಗಾಂಧೀ ಅಜ್ಜನನ್ನು ನೀನು ಬಲ್ಲೆ. ಅವನ ಜೀವನದ ಮುಖ್ಯ ಸಂದೇಶವೆಂದರೆ ಇನ್ನೊಬ್ಬರಿಗೆ ಆದಷ್ಟು ಮಟ್ಟಿಗೆ ನೋವುಮಾಡದೆ ನಮ್ಮ ಕೆಲಸವನ್ನು ನಾವೇ ಮಾಡಿಕೊಳ್ಳುವುದು. ತನ್ನ ಕೆಲಸವನ್ನು ತಾನೇ ಮಾಡಲು ನಾಚುವುದು ಮರ್ಯಾದೆಯ ಲಕ್ಷಣವಲ್ಲ. ತನ್ನಿಂದ ಆಗುವ ಕೆಲಸವನ್ನು ಆಳಿನ ಕೈಯಿಂದ ಮಾಡಿಸುವವನಿ(ಳಿ)ಗೆ ಮರ್ಯಾದೆ ಕೊಡುವುದು ಮೂಢರ ಲಕ್ಷಣ. ಇದು ಬಹಳ ಜನರಿಗೆ ಗೊತ್ತಿಲ್ಲ. ಹತ್ತು ಜನರು ಸೇರಿ ಏನೆನ್ನುವರೋ ಅದೇ ಮರ್ಯಾದೆ, ಅದೇ ಚಂದ ಎಂದು ತಿಳಿದುಕೊಳ್ಳುವುದು ದಡ್ಡತನವೇ ಸೈ. ಬುದ್ಧಿವಂತರು ಹೇಳುವುದಕ್ಕಷ್ಟೇ ಬೆಲೆಯಲ್ಲವೇ? ಈ ಮಾತನ್ನು ನಿನ್ನ ಉಪಾಧ್ಯಾಯರು ನಿನಗೆ ಹೇಳಿರಬಹುದೆಂದು ತಿಳಿಯುತ್ತೇನೆ.

ಗಾಂಧಿ ಅಜ್ಜ ಮಹಾಬುದ್ಧಿವಂತ. ಅವನಿಗಿಂತ ಹೆಚ್ಚು ಕಲಿತ ಮಂದಿ ಬಹಳ ಜನರು ಇರಬಹುದು. ಆದರೆ ಅವನಷ್ಟು ನಿಜವಾದ ಬುದ್ಧಿಸಂಪನ್ನರು ಸಿಕ್ಕುವುದು ಕಡಿಮೆ. ಅವನು ಏನು ಮಾಡುತ್ತಿದ್ದ? ಶಿಸ್ತಿನಂತೆ ಪ್ರತಿನಿತ್ಯ ತನ್ನ ಕೆಲಸವನ್ನು ತಾನೇ ಮಾಡಿಕೊಳ್ಳುತ್ತಿದ್ದ. ಕೈಯಲ್ಲಾಗದಾಗ ಅನುಕೂಲವಿಲ್ಲದಾಗ, ಅಥವಾ ಅವನ ಮೇಲಿನ ಪ್ರೀತಿಯಿಂದ ಇನ್ನೊಬ್ಬರು ಒತ್ತಾಯಮಾಡಿದಾಗ ಮಾತ್ರ ಇನ್ನೊಬ್ಬರಿಂದ ತನ್ನ ಕೆಲಸ ಮಾಡಿಸುತ್ತಿದ್ದ. ನಾವೇ ಮಾಡುವುದರಿಂದ ನಮಗೆ ಇನ್ನೊಬ್ಬರ ಸುಖದುಃಖಗಳು ಚೆನ್ನಾಗಿ ತಿಳಿಯುತ್ತವೆ. ಹಾಗೆ ತಿಳಿದಾಗ ಮಾತ್ರ ಅವರಿಗೆ ಅನುಕೂಲವಾಗಿ ನಡೆನಡೆಕೊಂಡು ಅವರ ನಿಜವಾದ (ತೋರಿಕೆಯದಲ್ಲ) ಪ್ರೀತಿ ವಿಶ್ವಾಸಗಳನ್ನು ಗಳಿಸಬಹುದು. ಒಬ್ಬ ಮನುಷ್ಯನ ಪ್ರತ್ಯಕ್ಷ [illegible] ಪ್ರೀತಿ, ವಿಶ್ವಾಸ, ಗೌರವಗಳನ್ನು ಗಳಿಸುವುದಕ್ಕಿಂತ ಹೆಚ್ಚಿನವೇನಿದೆ? ಹಾಗಿಲ್ಲದೆ ಇನ್ನೊಬ್ಬರನ್ನು ದುಡಿಸಿ ಸುಖಿಸುವ ಸ್ವಾರ್ಥಿಗೆ ಯಾರ ನಿಜವಾದ ಪ್ರೇಮವೂ ಸಿಗದು, ಅವನಿ(ಳಿ)ಗೆ ಬಹಳ ಕಾಲ ಮನಃಶಾಂತಿ ಉಳಿಯದು. ದೊಡ್ಡಸ್ತಿಕೆಯ ಸುಖಕ್ಕೆ ಉದಾಹರಣೆಯಾಗಿ ಒಬ್ಬ ರಾಜನನ್ನು ಬೆಳಿಗ್ಗೆ ಹೊಗಳುಭಟ್ಟರು ಎಬ್ಬಿಸುವ ಪದ್ಯಗಳನ್ನು ಕಾಳಿದಾಸನಿಂದ ಆರಿಸಿ ಕೊಡುತ್ತೇನೆ, ನೋಡು:—

೧

ಏಕ ಕಾಲದಲಿ
ಅಲುಗಿ ತೆರೆದ ಕಣ್-
ತಾರೆ ದೊರೆಯೆ, ನಿನ್ನ
ಒಂದನೊಂದು ಹೋ-
ಲುವುವು; ಎಚ್ಚರಾ-
ದೀಗ ನಿನಗೆ ಚೆನ್ನ !

೨

ಎಷ್ಟು ಕೋಮಲವ-
ದೆಷ್ಟು ಕಪ್ಪು—ಆ
ಕೃಷ್ಣತಾರೆ ಕಣ್ಣ !
ಕಮಲದಲ್ಲಿ ಮರಿ-
ದುಂಬಿ ಯಾಡುವಂ-
ತಾಡುತಿರುವುದಣ್ಣ !

೩

ನಿನ್ನ ಕೆಂಪುಟಗ-
ಳಲ್ಲಿ ದಂತ ಕಾಂ-
ತಿಯನು ಬೀರಿನಿಂತ
ಮಂದ ಹಾಸವೋ
ಚೆಂದ ಚೆಂದ ಲೀ !
ಲಾನಿನೋದವಂತ !

೪

ಅದರ ಹಾಗೆ ಗಿಡ
ಮರದ ಚಿಗುರುಗಳ
ಎಡೆಯ ಮೇಲೆ ಬಿದ್ದ
ಹನಿಗಳೀಗ ದೊರೆ,
ಹಾರ ಕೋದ ಬಿ-
ಳ್ಮಣಿಗಳಂತೆ ಶುದ್ಧ !

೫

ಗಿರಿಯ ನಡುವೆ ಗೈ
ರಿಕೆಯ ಹಾಗೆ ಬೆಂ-
ಬೆಳರು ಬಿದ್ದ ಮೊಗದ
ಗಜಗಳೆದ್ದು ದಂ-
ತಗಳ ನೀಡಿಹವು—
ಏಳು ದೊರೆಯೆ ಸೊಗದ !


ಇಂಥ ಸೇವೆ ಹಿಂದಿನ ಕಾಲದ ದೊರೆಗಳಿಗೆ ಸಿಗುತ್ತಿದ್ದರೆ ಅವರಲ್ಲಿ ಕೆಲವರಾದರೂ ಅಂಥದಕ್ಕೆ ಅರ್ಹತೆಯನ್ನು (ಪ್ರಜೆಗಳ ಪಾಲನೆ ಪೋಷಣೆಗಳ ಮೂಲಕ) ಪಡೆದಿದ್ದರೆನ್ನಬಹುದು. ಆದರೆ ಕೋಗಿಲೆ, ತಗಣಿ, ಬದನಿಕೆ ಮುಂತಾದ ಪರಾನ್ನಭಕ್ಷಕಗಳಂತೆ ಬಾಳುವ ವಿಶ್ರಾಮಜೀವಿಗಳಿಗೆ ಸ್ವಾವಲಂಬನ ಮತ್ತು ಅದರ ಸದ್ಯದ ಮತ್ತು ಅಂತ್ಯದ ಸತ್ಪರಿಣಾಮಗಳು ಹೇಗೆ ತಿಳಿಯಬೇಕು ? ಅವರಿಗೆ ಸಿಗುವ ಸುಖ ಹಿಂಸಾಲಬ್ಧವಾದುದು. ಅದು—

'ಉಣ್ಣ ಕೆಚ್ಚಲೊಳಿರ್ದು
ಉಣ್ಣದದು ನೊರೆಹಾಲ'

ಎಂಬ ಜಾತಿಯದೇ ಎಂಬುದನ್ನು ನೀನು ತಿಳಿದುಕೊಳ್ಳಬೇಕು. ಊಟ, ಉಡಿಗೆ, ಆಟ, ಪಾಠ ಮುಂತಾದ ಎಲ್ಲ ಕೆಲಸಗಳಲ್ಲೂ ಚಿಕ್ಕಂದಿನಿಂದಲೇ ಸ್ವಾವಲಂಬನವನ್ನು ಹಿಡಿದರೆ ಎಂಥ ಸಂದರ್ಭ ಬಂದರೇನು, ಯಾರ ಸಹಾಯವೂ ಇಲ್ಲದೆ ನೀನು ಸುಲಭವಾಗಿ ನಿನ್ನ ಕೆಲಸಗಳನ್ನು ಮಾಡಿಕೊಂಡು ಸುಖವಾಗಿರ ಬಲ್ಲೆ. ಮುದ್ದು ಕಂದಾ, ನೀನು ಹಾಗೇ ಮಾಡುವೆಯಲ್ಲವೆ ?

—ಇತಿ ನಿನ್ನ ಮಾಮನ ಮುತ್ತುಗಳು

ಜೀವನದಲ್ಲಿ ಈ ಪರಿಸೆ ಒಮ್ಮೆಯಾದರೂ ಜನಗಣನೆಯಾಗಲ್ಲ; [illegible] ಜನಿವರಿಯಲ್ಲಿ ಆಗುವದಂತೆ!



ಹುಬ್ಬಳ್ಳಿ ಶಾಖೆ— ಕೊಪ್ಪೀಕರರೋಡ, ಹುಬ್ಬಳ್ಳಿ.

ದಿಲ್ಲಿಯಲ್ಲಿ ಮಹಾತ್ಮರ [illegible]

ನೆಹರೂ, ಪಟೇಲರ [illegible]

[illegible] ಭಾರತದ ಮುಖ್ಯ ಮಂತ್ರಿಗಳಾದ ಪಂಡಿತ ಜವಾಹರಲಾಲ ನೆಹರೂಗಳು ತಾ. ೩೦ ರಂದು ಹೊಸ ದಿಲ್ಲಿಯ ಆಕಾಶವಾಣಿಯಿಂದ ಭಾಷಣ ಮಾಡಿದರು. ಅವರ ಭಾಷಣ ಮುಗಿದ ಕೂಡಲೆ ಉಪಮುಖ್ಯ ಮಂತ್ರಿ ಸರದಾರ ವಲ್ಲಭಭಾಯಿಯವರು ಮಾತಾಡಿದರು. ಪಂಡಿತರ ಭಾಷಣಸಾರ ಕೆಳಗಿನಂತಿದೆ.

ನೆಹರೂಗಳ ನನೆಮಾತು

"ಇಂದಿಗೆ ಒಂದು ವರ್ಷದ ಕೆಳಗೆ ನಮ್ಮ ಬಾಳಿಗೆ ಬೆಳಕುಹರಿಸುತ್ತಿದ್ದ ಜ್ಯೋತಿಯು ನಂದಿ ನಮ್ಮ ಸುತ್ತು ಕತ್ತಲು ಕವಿದಂತಿತ್ತು. ಅದೀಗ ಮೊದಲಿಗಿಂತಲೂ ಪ್ರಕಾಶಮಾನವಾಗಿ ಉರಿಯುತ್ತಿದೆ. ನಮ್ಮ ಮಹಾತ್ಮರ ಸಂದೇಶವು ನಮ್ಮ ಕಿವಿಯಲ್ಲಿ ಇಂದಿಗೂ ದನಿಗೊಡುತ್ತಿದೆ. ಆದರೂ ನಮ್ಮಲ್ಲಿ ಅನೇಕರು ಭಾವೋದ್ರೇಕವಶರಾಗಿ ಮತ್ಸರಗ್ರಸ್ತತೆಯಿಂದ ಆ ಜ್ಯೋತಿಪ್ರಕಾಶದ ಲಾಭ ಪಡೆಯದೆ ಕಣ್ಣುಮುಚ್ಚಿಕೊಂಡು ಸಾಗುತ್ತಿದ್ದಾರೆ. ಇಂದು ನಾವು ನಮ್ಮ ಕಣ್ಣು, ಕಿವಿ, ಹೃದಯಗಳನ್ನು ತೆರೆದು ನೋಡಬೇಕಾಗಿದೆ.

"ಇಡೀ ಜಗತ್ತು ಅಧೋಗತಿಗಿಳಿದು ರಾಷ್ಟ್ರಗಳಲ್ಲಿ ಪರಸ್ಪರ ವೈರ ಹಬ್ಬಿರುವುದರಿಂದ ಎಂದಿಗಿಂತ ಇಂದು ಜಗತ್ತಿಗೆ ಮಹಾತ್ಮರ ಸಂದೇಶದ ಆವಶ್ಯಕತೆಯಿದೆ. ಹಿಂಸೆ, ದ್ವೇಷಗಳ ಮಾರ್ಗಹಿಡಿದು ಜಗತ್ತು ಪ್ರತಿಯೊಂದು ಸಲವೂ ಗುರಿಯನ್ನು ಸಾಧಿಸುವಲ್ಲಿ ಅಸಮರ್ಥವಾಗುತ್ತಿದೆ. ಆದುದರಿಂದ ಜಗತ್ತು ನಮ್ಮ ಅನುಭವದಿಂದ ಪಾಠ ಕಲಿಯಬೇಕು. ಹಿಂಸೆ, ದ್ವೇಷ, ಜಾತೀಯತೆಗಳನ್ನು ಬಿಟ್ಟು ಸಹಕರಿಸಿದರೆ ಮಾತ್ರ ದುಷ್ಟ ಶಕ್ತಿಗಳನ್ನು ನಿವಾರಿಸಬಹುದೆಂದು ನಮಗೆ ಮಹಾತ್ಮರು ಕಲಿಸಿದ್ದಾರೆ.

"ಜಗತ್ತಿನಲ್ಲಿಯ ಇತರ ರಾಷ್ಟ್ರಗಳಿಗೆ ನಾವಿಂದು ಹೇಳುವುದಿಷ್ಟೆ: ನಿಮ್ಮಲ್ಲಿಯ ಒಬ್ಬರೊಡನೆಯೂ ನಮಗೆ ಜಗಳವಿಲ್ಲ. ಜಾಗತಿಕ ಕಲ್ಯಾಣ ಸಾಧಿಸಲು ನಿಮ್ಮ ನೆರವು ನಮಗೆ ಬೇಕು. ನಮಗೆ ಯಾವ ರಾಷ್ಟ್ರದಮೇಲೂ ಪ್ರಭುತ್ವ ನಡೆಸಬೇಕೆಂದಿಲ್ಲ. ಆದರೆ ನಮ್ಮ [illegible]

[illegible] ಹಕ್ಕು ತಾನಾಗಿಯೇ ಲಭಿಸುತ್ತದೆ. ಸವಭಾರತವನ್ನು ನಾವು ನಿರ್ಮಿಸಬೇಕು [illegible] ಎಲ್ಲರೂ ಕೂಡಿ ಕೆಲಸಮಾಡಿದರೆ [illegible] ನಾವು ಬೇಗನೆ ಸಾಧಿಸಬಲ್ಲೆವು."

ಸರದಾರರ ನುಡಿ

"ಸರಿಯಾಗಿ ಒಂದು ವರ್ಷದ [illegible] ಸಮಯದಲ್ಲಿ ನಾನೂ ನೆಹರೂ [illegible] ಸ್ವಾತಂತ್ರ್ಯದ ಘೋರ ದುಃಖದ [illegible] ನಿಮಗೆ ತಿಳಿಸಿದೆವು. ಇಂದು [illegible] ಹೃದಯ ದುಃಖದಿಂದ ತುಂಬಿ [illegible] ಕ್ರಮಿಸುವನು. ಆದರೆ ಜನರು [illegible] ಕರ್ತವ್ಯವನ್ನು ಮಾಡಲೇಬೇಕು. [illegible]

[illegible] ಗಳನ್ನು ತೋರಿಸಿಕೊಟ್ಟು [illegible] ದಲ್ಲಿ ನಮ್ಮನ್ನು ಕರೆದೊಯ್ಯುತ್ತಿ [illegible] ಅವರಿಲ್ಲ. ಆದರೆ ಅವರ ಆತ್ಮ [illegible] ಯನ್ನು ತಪ್ಪದೆ ನಿರೀಕ್ಷಿಸುತ್ತಿದೆ. [illegible] ನಾವು ಯಾವ ನಿರ್ಣಯಕ್ಕೆ ಬಂದ [illegible] ಅದು ಮಹಾತ್ಮರಿದ್ದಿದ್ದರೆ [illegible] ಯಾಗುತ್ತಿತ್ತೋ ಹೇಗೆ ಎಂಬುದನ್ನು [illegible] ಸಿಯೇ ನಿರ್ಣಯ ತೆಗೆದುಕೊಳ್ಳಬೇಕು.

"ಮಹಾತ್ಮರು ಈ ಯುಗದ ಒಬ್ಬ ಅ[illegible] ಪುರುಷರು. ಬಡ ಜನರ ದುಃಖದಲ್ಲಿ ಅವ[illegible] ದಿವ್ಯ ಕರುಣೆಯುಕ್ಕುತ್ತಿತ್ತು. [illegible] ಸೇವೆಯೇ ಅವರಿಗೆ ದೇವಸೇವೆ [illegible] ಅದನ್ನೇ ನಮಗೂ ಅವರು ಉಪದೇ[illegible]

"ಮಹಾತ್ಮರು ಬದುಕಿದ್ದಾಗ [illegible] ಅವರು ಯುರೋಪ ಅಮೇರಿಕೆಗಳಿಗೆ [illegible] ತತ್ತ್ವೋಪದೇಶ ಮಾಡಿ ಯುದ್ಧದ [illegible] ವನ್ನು ತಪ್ಪಿಸಬೇಕೆಂದರು. ಅವಕ್ಕೆ [illegible] ಹಿಂದುಸ್ಥಾನದಲ್ಲಿ ತನ್ನ ತತ್ತ್ವ ಯಶ[illegible] ಲ್ಲದೆ ಬೇರೆ ದೇಶಕ್ಕೆ ಹೋದರೆ ಫಲವಿಲ್ಲ [illegible] ಉತ್ತರವಿತ್ತರು. [illegible] ಗಳ ಅನುಸರಣದಿಂದಲೇ ನಾವು ಜಗತ್ತಿ[illegible] ಮಾರ್ಗದರ್ಶಕರಾಗಬಲ್ಲೆವು. ಈ ಒಂ[illegible] ವರ್ಷದ ಅವಧಿಯಲ್ಲಿ ನಾವು ಅದರಲ್ಲಿ [illegible] ಕೊಳ್ಳುವಂಥ ಪ್ರಗತಿಯನ್ನು ಸಾಧಿಸಿ[illegible] ಆದರೆ ಈ ಅಲ್ಪಾವಧಿಯಲ್ಲಿ ಹಿಂದೆಂದೂ [illegible] ಭವಿಸದಷ್ಟು ಕಷ್ಟಗಳನ್ನು ನಾವು ಅನುಭ[illegible] ದೆವು. ನಾವು ತಪ್ಪುಗಳನ್ನು [illegible] ಸರಿಯಾದ [illegible] ಕೊಂಡದ್ದಾದರೆ ಜಗತ್ತು ಗಾಂಧೀ [illegible] ಬಗ್ಗೆ ಗೌರವ ತಾಳುವುದು. [illegible] ಹಾಕಿಕೊಟ್ಟ ಮೇಲ್ಪಂಕ್ತಿಯಲ್ಲೇ [illegible] ಶಕ್ತಿಯನ್ನು ದಯಪಾಲಿಸೆಂದು [illegible] ನನ್ನು ಪ್ರಾರ್ಥಿಸೋಣ. ನಮ್ಮ [illegible] ವನ್ನು ಶೋಧಿಸಿ ನಾವಿಂದು ಪ್ರ[illegible] ಬೇಕು. ಆ ಪ್ರಕಾರ ಪ್ರತಿಜ್ಞೆಯನ್ನ[illegible] ಸುವಶಕ್ತಿ ನಮಗುಂಟಾಗಲಿ."

[illegible]

ರೂಪರಂಗ

ಹಿಂದೀ ಕಲಾಪ್ರದರ್ಶನ

ದಿಲ್ಲಿಯಲ್ಲೀಗ ಹಿಂದೀ ಕಲಾಪ್ರದರ್ಶನವ ನ್ನವಕ್ಕೆ ನಡೆಯುತ್ತಿದೆ. ಹಿಂದು ಸಾವಿರ ಪ್ರದರ್ಶನೀಯ ವಸ್ತುಗಳನ್ನು ಸಂಗ್ರಹಿಸಲಾಗಿದೆ. ಅವುಗಳನ್ನು ವಿಗ್ರಹಗಳು, ವರ್ಣಚಿತ್ರಗಳು; ನಾಣೆ ಕಂಚು, ವಸ್ತ್ರ ಇವುಗಳ ಮೇಲು ಹೊದಿಕೆಯ ಚಿತ್ರಗಳು ಎಂಬುದಾಗಿ ವರ್ಗೀಕರಿಸಲಾಗುವುದು. ಈ ಸಂಗ್ರಹದಲ್ಲಿ ಕ್ರಿಸ್ತ ಪೂರ್ವ ೩೦೦೦ ವರ್ಷಗಳಿಂದ ಕ್ರಿಸ್ತಶಕ ೧೯೦೦ ರ ವರೆಗಿನ ಕಲಾಕೃತಿಗಳಿವೆ.

ಪ್ರಾಚೀನ ಶಿಲ್ಪಪದ್ಧತಿ

ಆರಮನೆಯಂತಿರುವ ಸರಕಾರೀ ಭವನದೆ ದುರಿನ ಬಯಲಿನಲ್ಲಿ ಬೃಹದಾಕೃತಿಯ ೨೪ ವಿಗ್ರಹಗಳನ್ನು ಇರಿಸಲಾಗಿದೆ. ಅವುಗಳಲ್ಲಿ ಮೌರ್ಯಶಿಲ್ಪದ ಅತ್ಯುತ್ತಮ ಮಾದರಿಯೆನಿಸುವ ಹೊಳೆಯುವ ಮರಳುಗಲ್ಲಿನ ಸುಂದರ ವಿಗ್ರಹವಿದೆ. ಇದು ಕ್ರಿ. ಪೂ. ೩ ನೆಯ ಶತಕಕ್ಕೆ ಸೇರಿದ್ದು. ಶೈಲಿಯಲ್ಲಿ ಇದು ಸಾರನಾಥದ ಸಿಂಹ ವಿಗ್ರಹವನ್ನು ಹೋಲುತ್ತದೆ. ಮೌರ್ಯ ಮತ್ತು ಶುಂಗರ ಕಾಲದ ಯಕ್ಷ ಯಕ್ಷಿಯರ ಮೂರ್ತಿಗಳನ್ನೂ ಅಲ್ಲಿ ಕಾಣಬಹುದು. ಮೈಸೂರಿನಿಂದ ತರಿಸಿದ ಒಂದು ಕೃಷ್ಣ ಮೂರ್ತಿಯಿದೆ, ಅದರ ಕುಸುರುಗೆಲಸ ಓಡಿಸ್ಸದ ವಜ್ರಪಾಣಿ ಬೋಧಿಸತ್ವವಿಗ್ರಹದಷ್ಟು ಕುಶಲತೆಯಿಂದ ಕೂಡಿದೆ. ಬಾಗಿಲಹತ್ತಿರ ಡ್ವಾರಿ ಹಿಡಿದ ಯಕ್ಷಿಯೊಂದು ಮೂರ್ತಿ ಅತ್ಯುತ್ತಮವಿದೆ.

ಮೇಲಿನ ವಿಗ್ರಹಗಳ ಸುತ್ತಲೂ ಸಿಂಧು ನದಿಯ ಕಣಿವೆಯ ನಾಗರಿಕತೆಯ ಅವಶೇಷಗಳನ್ನು ಪ್ರದರ್ಶನಕ್ಕಿಡಲಾಗಿದೆ. ಅವು ಮೊಹೆಂಜೊದಾರೊ ಮತ್ತು ಹರಪ್ಪಗಳಿಂದ ತಂದವು. ಅವು ನಾಗರಿಕತೆಯ ಶುದ್ಧ ಸುಂದರ ಕಲೆಗಾರಿಕೆಯ ಪ್ರತೀಕಗಳೆನಿಸಿವೆ. ಅಂದು ಇಂದಿನಂತೆ ಜನರು ಮಾನಸಿಕ ಅವರೋಧಗಳಲ್ಲಿ ವಾಸಿಸುತ್ತಿರಲಿಲ್ಲ; ಕೃತಕ ಬುದ್ಧಿ ಅವರಿಗಿರಲಿಲ್ಲ. ಆದುದರಿಂದ ಅವರ ಕಲೆ ಶುದ್ಧ ಸೌಂದರ್ಯದ ನಿದರ್ಶನವೆನಿಸಿದೆ.

ಭಾವಸೌಂದರ್ಯ

ದರ್ಬಾರ್ ಹಾಲ್ ಅಥವಾ ಓಲಗ ಸಾಲೆಯಲ್ಲಿ ಮಥುರೆಯ ಅನೇಕ ವಿಗ್ರಹಗಳಿವೆ. ಈ ಪ್ರತಿಮೆಗಳು ಕ್ರಿ. ಶ. ೧೦೦—೩೦೦ ರ ನಡುವಣ ಕುಶಾನರ ಕಾಲಕ್ಕೆ ಸೇರಿದವು. ಮಥುರೆಯ ಕಲೆ ಆಂಗಿಕ ಸೌಂದರ್ಯದತ್ತ ಹೆಚ್ಚು ಲಕ್ಷ್ಯವಿತ್ತರೆ ಗುಪ್ತರ ಕಾಲದ ಕಲೆ ಆಧ್ಯಾತ್ಮಿಕ ಭಾವಸೌಂದರ್ಯದತ್ತ ಗಮನ ಕೊಟ್ಟಿತು. ಇಂಥ ಅದ್ಭುತ ಸುಂದರಮೂರ್ತಿ ಭಗವಾನ್ ಬುದ್ಧನದು. ಅಲ್ಲಿ ಉಭಯ ಸೌಂದರ್ಯ ಸಂಗಮವುಂಟಾಗಿದೆ. ಈ ಮಧುರಾಕೃತಿಗೆ ನ್ಯಾಯವಾದ ಅಗ್ರಸ್ಥಾನವನ್ನು ಕೊಡಲಾಗಿದೆ. ಗಾಂಧಾರ ಶೈಲಿಯಲ್ಲಿ ಬುದ್ಧನ ಶವಪೇಟಿಕ ಜೊಡನೆ ವಜ್ರಪಾಣಿ, ಮೂವರು ಮುನಿಗಳು ಮತ್ತು ಒಬ್ಬ ಶ್ರೀಮಂತ ಸಭ್ಯ ಇರುವ ಕಲಾಪುಂಜವೇ ಓಲಗ ಸಾಲೆಯ ಎಡ ಬಲಬದಿಗಳಲ್ಲಿಯ ಮೂರ್ತಿಗಳಲ್ಲಿ ಹೆಚ್ಚು ಸುಂದರವೆನಿಸಿದೆ.

ಕಾಂಸ್ಯಪ್ರತಿಮೆಗಳು

ದಕ್ಷಿಣದ ಒಂದು ಒಳದಲ್ಲಿ ಕಾಂಸ್ಯಪ್ರತಿಮೆಗಳನ್ನು ಇಡಲಾಗಿವೆ. ಎಲ್ಲದಕ್ಕೂ ನಡುವೆ ನಟರಾಜನ ೩ ವಿಗ್ರಹಗಳಿವೆ. ಅವುಗಳಲ್ಲಿ ಒಂದು ಜಗದ್ವಿಖ್ಯಾತವಾದುದು; ಮದ್ರಾಸ್ ವಸ್ತು ಸಂಗ್ರಹಾಲಯದಿಂದ ಅದನ್ನು ಇಲ್ಲಿಗೆ ತರಲಾಗಿದೆ. ಅದು ಮೂರಕ್ಕೂ ನಡುವಿದೆ; ಅದರ ಆಕಾರಪರಿಪೂರ್ಣತೆ ಮತ್ತು ನೃತ್ಯ ಸಮತೋಲಗಳು ಆಸ್ವಾದ್ಯವಾಗಿವೆ. ಇದು ಚೋಳರ ಕಾಲ ಅಂದರೆ ೧೨ ನೆಯ ಶತಕಕ್ಕೆ ಸೇರಿದ್ದು. ಅಲ್ಲಿಯ ವಿಗ್ರಹಗಳಲ್ಲಿ ರಾಮ, ಅರ್ಧನಾರೀಶ್ವರ, ಶಿವಪಾರ್ವತಿಯರವು ಅತ್ಯುನ್ನತ ಸೃಷ್ಟಿಯವು.

ವರ್ಣಚಿತ್ರ—ವಸ್ತ್ರಚಿತ್ರ

ವರ್ಣಚಿತ್ರಶಾಲೆ ಪ್ರತ್ಯೇಕವಾಗಿದೆ. ಅದರಲ್ಲಿ ಸುಮಾರು ೩೦೦ ಚಿತ್ರಗಳಿವೆ. ಅಜಂತದಿಂದ ಪಹಾರಿಯ ವರೆಗಿನ ಎಲ್ಲ ಚಿತ್ರಗಳ ಮಾದರಿಗಳನ್ನೂ ಅಲ್ಲಿ ಪ್ರದರ್ಶಿಸಲಾಗಿದೆ. ಅವುಗಳಲ್ಲಿ ಸುಪ್ರಸಿದ್ಧವಾದ ಪದ್ಮಪುರದ ಅವಲೋಕಿತೇಶ್ವರನ ಪ್ರತಿಮೆ ಅದ್ಭುತ ರಮ್ಯ ಬೌದ್ಧ ಕುಡ್ಯಚಿತ್ರವೆನಿಸಿದೆ. ಇದಲ್ಲದೆ ಮೊಗಲರ ಕಾಲದ ಉತ್ತಮ ದರ್ಜೆಯ ರಾಜಸ್ಥಾನಿ ವರ್ಣಚಿತ್ರಗಳನ್ನೂ ಅಲ್ಲಿ ನೋಡಬಹುದು.

ವಸ್ತ್ರಾಲಂಕಾರ ಪ್ರದರ್ಶನಕ್ಕೂ ಅಲ್ಲಿ ಕೊರತೆಯಿಲ್ಲ. ಕಾಶ್ಮೀರದ ಶಾಲುಗಳು, ಬನಾರಸ ಸೀರೆಗಳು, ಗುಜರಾತಿ ಮತ್ತು ಪಂಜಾಬಿ ಕಸೂತಿ ವಸ್ತ್ರಗಳು; ಡಾಕಾ ಮಸ್ಲಿನ್, ಗುಜರಾತಿ ಪತ್ತಲು ಮುಂತಾದವನ್ನು ಸಂಗ್ರಹಿಸಿ ಇಡಲಾಗಿದೆ. ಅವುಗಳಲ್ಲೆಲ್ಲ ೧೦ ಮೊಳದ ಡಾಕಾ ಸೀರೆ ಬಹಳ ಚಮತ್ಕಾರಕವಿದೆ; ಅದರ ತೂಕ ಕೇವಲ ೮ ತೊಲೆಗಳು.

ಹಿಂದುಸ್ತಾನದ ವಿವಿಧ ಲಲಿತ ಕಲೆಗಳಲ್ಲಿ ಭಾರತೀಯ ವೈಶಿಷ್ಟ್ಯವಿರುವುದು ಸುವಿದಿತವಿದೆ. ಸೌಂದರ್ಯದ ಸಾತ್ವಿಕ ತೇಜಸ್ಸಿಗೆ ಇಲ್ಲಿ ಬೆಲೆಯಿದೆಯಲ್ಲದೆ ತಾಮಸೀ ಲಕ್ಷಣ ಕ್ಕಲ್ಲ. ಆದರೆ ಆಧುನಿಕ ನೃತ್ಯ, ಗೀತ, ನಾಟಕ, ಸಿನೆಮಗಳ ಮೂಲಕ ಈ ವೈಶಿಷ್ಟ್ಯ ಮ್ಲಾನವಾಗುತ್ತಿದೆ. ಇಂಥ ದುಷ್ಪ್ರವೃತ್ತಿಯನ್ನು ತಡೆದು ಭಾರತೀಯ ಸಾಂಸ್ಕೃತಿಕ ದಿವ್ಯತೆ ಭವ್ಯತೆಗಳನ್ನು ಉಳಿಸಿಕೊಳ್ಳುವ ಕಾರ್ಯದಲ್ಲಿ ಈ ಪ್ರದರ್ಶನ ಕೆಲಮಟ್ಟಿಗಾದರೂ ನೆರವಾಗಬಲ್ಲುದೆಂದು ನಂಬಿಗೆ.

—ಚಿತ್ಕಲ

ಸೀತಾಸ್ವಯಂವರ

ವಿಜಯ ಪಿಕ್ಚರ್ಸಿನವರು ಶ್ರೀ ಎ. ಆರ್. ಶೇಖರ ದಿಗ್ದರ್ಶನದಲ್ಲಿ ಸೀತಾಸ್ವಯಂವರವೆಂಬ ಚಿತ್ರವನ್ನು ತಯಾರಿಸಿದ್ದಾರೆ ಪೌರಾಣಿಕ ಚಿತ್ರಗಳಲ್ಲಿ ನಮ್ಮ ದೇವ ದೇವತೆಗಳ ಪಾತ್ರವನ್ನು ಅಭಿನಯಿಸುವುದರ ಬಗ್ಗೆ ಮದ್ರಾಸು ಸರಕಾರ ವಹಿಸಿದ ಧೋರಣೆ ನ್ಯಾಯವೆಂದು ಈ ಚಿತ್ರವನ್ನು ಕಂಡ ರಸಜ್ಞರು ಅಭಿಪ್ರಾಯ ಪಡದಿರರು.

ಕತೆ ಪದ್ಮಾಕ್ಷ ಋಷಿಯ ಮಗಳಾದ ವೇದವತಿ ವಿಷ್ಣುವನ್ನು ಗಂಡನನ್ನಾಗಿ ಮಾಡಿಕೊಳ್ಳಲು ತಪಸ್ಸು ಮಾಡುವಲ್ಲಿಂದ ಪ್ರಾರಂಭವಾಗುತ್ತದೆ. ಶಂಕರನ ವರದಿಂದ ಉನ್ಮತ್ತನಾದ ರಾವಣ ವಿಷ್ಣುಶಬ್ದವನ್ನು ಉಚ್ಚರಿಸಬಾರದೆಂದು ದಾರಿಯಲ್ಲಿ ಸಿಕ್ಕಿದ ವೇದವತಿಗೆ



ಸೀತಾದೇವಿ

ಹೇಳಿ ತನ್ನನ್ನೇಕೆ ಮದುವೆಯಾಗಬಾರದೆಂದು ಕೇಳುತ್ತಾನೆ. ಹೆಣ್ಣು ಗಂಡಿನ ಸೌಂದರ್ಯವನ್ನು ಕಾಣದಾರದೆ ತನ್ನ ಸೌಂದರ್ಯಕ್ಕೆ ತಾನೇ ಮರುಳಾಗಿ ಅದೇ ತನ್ನ ಆಸ್ತಿಯೆಂದು ತಿಳಿಯುತ್ತ ಬಂದುದೇ ಅವಳದಾಸ್ಯಕ್ಕೆ ಮತ್ತು ಅತೃಪ್ತಿಗೆ ಕಾರಣವಾಯಿತೆಂಬುದಕ್ಕೆ ರಾವಣನ ಮಾತು ಅಲ್ಲಿ ದೃಷ್ಟಾಂತ ಕೊಡುತ್ತದೆ. "ನಿನ್ನ ಆಸ್ತಿ ಅದಾಗಿರುವಾಗ ಅದಕ್ಕೊಬ್ಬ ಒಡೆಯ ಬೇಕು; ಆದುದರಿಂದ ನಾನೇ ಅದಕ್ಕೆ ಒಡೆಯನಾಗುತ್ತೇನೆ" ಎನ್ನುತ್ತಾನೆ. ಅದರಾಕೆ ನಿಷ್ಕಾರಣವಾಗಿ ಅವನನ್ನು ಪ್ರತಿಭಟಿಸಿ, ಮಾನವ ಜನ್ಮದಲ್ಲಿ ಹುಟ್ಟಿ ಅವಳ ಅಪ್ಪ ಹೇಳುವಂತೆ ದುಃಸ್ವಾಧ್ಯನಾದ ದಿವ್ಯನಾಯಕನನ್ನು ಬಯಸಿ ಭೂಮಿಯ ಒಡಕಿನಲ್ಲಿ ಬಿದ್ದು ಸತ್ತುಹೋಗುತ್ತಾಳೆ. ಜನಕ ಮಹಾರಾಜ ಭೂಮಿಯನ್ನು ಉಳುವಾಗ ಭೂಮಿದೇವಿ ಪ್ರತ್ಯಕ್ಷಳಾಗಿ ಬಂದು ಒಂದು ಪೆಟ್ಟಿಗೆಯಲ್ಲಿ ಶಿಶುರೂಪದ ವೇದವತಿಗೆ ಸೀತೆಯೆಂದು ಕರೆದು ಅವನಿಗೆ ಒಪ್ಪಿಸಿದಳು. ಶ್ರೀರಾಮಚಂದ್ರನು ಅತ್ಯಂತ ಸುಂದರನೆಂದು ಕೇಳಿದ ಅವಳು ಅವನನ್ನೇ ಮದುವೆಯಾಗಬೇಕೆಂದು ನಿತ್ಯವೂ ಲಕ್ಷ್ಮೀನಾರಾಯಣರನ್ನು ಪ್ರಾರ್ಥಿಸುತ್ತಾಳೆ. ಇದೊಂದು ಅವಳಲ್ಲಿಯ ಪ್ರೇಯಸಿತ್ವದ ಸ್ವಾಭಾವಿಕ ಪ್ರವೃತ್ತಿ. ಅದನ್ನು ಚಿತ್ರದಲ್ಲಿ ಸೊಗಸಾಗಿ ತೋರಿಸಿದ್ದಾರೆ. ಈ ಪ್ರವೃತ್ತಿಯನ್ನು ಬೆಳೆಸಿಕೊಂಡಾಗ ಮನಃಶಾಸ್ತ್ರರೀತ್ಯಾ ಹೆಣ್ಣಿನ ದಾಸ್ಯ ತೊಲಗುತ್ತದೆ. ಅವಳಲ್ಲಿ ಶಕ್ತಿ ಬೆಳೆಯುತ್ತದೆ. ಸ್ವಯಂವರದಲ್ಲಿ ಹರಧನುಸ್ಸನ್ನು ಹೆದೆಯೇರಿಸಲಾರದೆ ರಾವಣ ಗರ್ವಭಂಗ ಹೊಂದುತ್ತಾನೆ. ಶಿವಭಕ್ತನಿಗೆ ಶಿವಧನುಸ್ಸಿನ ಹೆದೆಯೇರಿಸಲಾಗದುದು ಒಂದು ಪೌರಾಣಿಕ ವಿಸಂಗತಿ. ಅನಂತರ ಸರ್ವಾಂಗ ಸುಂದರನೂ ಸರ್ವಶಕ್ತನೂ ಎನಿಸಿದ ರಾಮಚಂದ್ರನು ಬಂದು ಧನುಸ್ಸನ್ನು ಭಂಗಿಸಿ ಸೀತೆಯನ್ನು ಮದುವೆಯಾಗುತ್ತಾನೆ. ಸೀತೆಯ ಯಾವ ಗುಣ ಅಥವಾ ಯೋಗ್ಯತೆಯನ್ನು ನೋಡಿ ರಾಮಚಂದ್ರನು ಅವಳನ್ನು ಮದುವೆಯಾಗುತ್ತಾನೆಂಬುದು ಸ್ಪಷ್ಟವಿಲ್ಲ. ಬಹುಶಃ ಅವಳು ಅನುರೂಪಳೂ ಚೆಲುವಳೂ ಸಂಸ್ಕೃತ ಮನೆತನದವಳೂ ಆಗಿರಬೇಕೆಂದಿಷ್ಟೇ ಊಹಿಸಬಹುದು.

ಇಲ್ಲಿ ಅವತಾರಪುರುಷರ ದಿವ್ಯತೆ ಸೀತಾರಾಮರ ಮೊಗದಲ್ಲಿ ಮೂಡಿಲ್ಲ. ಕೌಸಲ್ಯೆಯ ಪಾತ್ರವನ್ನು ಮಾತ್ರ ಚೆನ್ನಾಗಿ ಅಭಿನಯಿಸಲಾಗಿದೆ. ಋಷ್ಯಶೃಂಗನನ್ನು ಕಪಿಯ ಹಾಗೆ ಕಾಣುವಂತೆ ಒಂದರೆಗಳಿಗೆ ರಂಗಕ್ಕೆ ತಂದದ್ದು, ಶ್ರವಣವಧವನ್ನು ಸಂಕ್ಷೇಪತಃ ಚಿತ್ರಿಸಿದ್ದು,



ಇವೆಲ್ಲ ಅನವಶ್ಯಕ ... ಸ್ತ್ರೀಮುಖ ದರ್ಶನವಿಲ್ಲದ ... ಪುತ್ರಕಾಮೇಷ್ಟಿಗೆ ಪುರೋಹಿತನಾಗ ... ಸ್ತ್ರೀಮುಖ ದರ್ಶನ ಮಾಡಿಸಿ ಸ್ತ್ರೀಯರಿಂದಲೇ ಋಷ್ಯಶೃಂಗನನ್ನು ಕರೆತರಿಸಿದ್ದು ಒಂದು ವಿಸಂಗತ ಪ್ರಸಂಗ. ಆಗ ಆ ಸ್ತ್ರೀಯರು ನಡೆಸಿದ ನೃತ್ಯ ಅಸಭ್ಯವೆನಿಸುವುದಲ್ಲದೆ, ಋಷ್ಯಾಶ್ರಮಕೂ ಋಷಿಗಳಲ್ಲಿ ಗೌರವವುಳ್ಳ ರಾಜಪುತ್ರಿಯರಿಗೂ ಗೌರವ ತರುವಂಥದಾಗಿಲ್ಲ. ಅದೊಂದು ಸಿನಿಮ ಸಹಜವಾದ ಮಾಂಸಖಂಡತಾಂಡವ. ಇಷ್ಟೆಲ್ಲ ದೋಷಗಳಿರುವುದು ವಿಚಾರಶೀಲರಿಗಲ್ಲದೆ ಸಾಮಾನ್ಯರಿಗೆ ತೋರದಾದುದರಿಂದ ಹುಬ್ಬಳ್ಳಿಯ ಸುದರ್ಶನ ಟಾಕೀಸಿನಲ್ಲೀಗ ಅದನ್ನು ನೋಡಲು ಸಾಮಾನ್ಯ ಪ್ರೇಕ್ಷಕರು ಒಳ್ಳೆಯ ಉತ್ಸಾಹದಿಂದ ಹೋಗುತ್ತಿದ್ದಾರೆ; ಪವಾಡದ ಸಂಗತಿಗಳನ್ನು ಕಂಡಾಗ ಮನ ಮೆಚ್ಚಿ ಚಪ್ಪಾಳೆ ಸಿಳ್ಳುಗಳ ಮೂಲಕ ತಮ್ಮ ಆನಂದವನ್ನು ವ್ಯಕ್ತಪಡಿಸುತ್ತಾರೆ. ಏನಾದರೂ ಹಿಂದುಸ್ತಾನದ ಸಂಸ್ಕೃತಿಯ ಅಡಿಗಲ್ಲಾದ ರಾಮಾಯಣದ ಕತೆಯಿರುವದರಿಂದ ಮಿಕ್ಕ ಅನೇಕ ಸಾಮಾಜಿಕ ಚಿತ್ರಗಳಿಂದಾಗುವಷ್ಟು ಹಾರ್ದಿಕ ಹಾನಿ ಇದರಿಂದ ಭಾರತೀಯರಿಗಾಗದೆಂಬುದೊಂದೇ ಸಂತೋಷದ ಸಂಗತಿ.

—ರಾಮಸುಂದರ

(೫ನೆಯ ಪುಟದಿಂದ ಬಂದುದು)

ಕೊಳ್ಳಬಹುದು. ವಿಶ್ವಸ್ತ ಪ್ರದೇಶಗಳ ಆಳಿಕೆಯಲ್ಲಿ ಆ ಹೊಣೆ ವಹಿಸಿದ ರಾಷ್ಟ್ರಗಳು ವಿಶ್ವಸ್ತ ತಾಮ್ರಪಟವನ್ನು ಅರ್ಥಶಃ ಮತ್ತು ಶಬ್ದಶಃ ಅನುಸರಿಸಬೇಕೆಂದು ಒತ್ತಾಯ ಪಡಿಸಿದ್ದು, ಆರ್ಥಿಕ ಸಾಮಾಜಿಕ ಸಮಿತಿಯಲ್ಲಿ ಉತ್ತಮ ಕಾರ್ಯಮಾಡಿ ತೋರಿಸಿದ್ದು, ಮತ್ತು ಅಣುಶಕ್ತಿ ನಿಯಂತ್ರಣದ ವಿಷಯದಲ್ಲಿ ಪೂರ್ವ ಪಶ್ಚಿಮ ರಾಷ್ಟ್ರಗಳ ನಡುವೆ ಉದ್ಭೂತವಾದ ಅಂತರಾಳವನ್ನು ಕಡಿಮೆ ಮಾಡಲು ಯತ್ನಿಸಿದ್ದು ಇವೇ ಮೊದಲಾದ ನಿರ್ದಿಷ್ಟ ಕಾರ್ಯಗಳನ್ನು ನಾವು ಮಾಡಿದ್ದೇವೆ ನಿಜ. ಆದರೂ ಈಚೆಗೆ ನಮ್ಮ ಧೋರಣೆ ತತ್ಕಾಲದ ಅನುಕೂಲದ ದೃಷ್ಟಿಯಿಂದ ಮೂಲಭೂತ ತತ್ವಗಳ ಕಡೆ ಕಣ್ಣು ಮುಚ್ಚಿ ಬಿಡುವ ಒಲವನ್ನು ತೋರತೊಡಗಿದೆ. ಈ ಅನುಕೂಲ ಸಿಂಧು ತತ್ವಜ್ಞಾನವು ವ್ಯವಹಾರಿಕ ರಾಜಕಾರಣದ ದೃಷ್ಟಿಯಿಂದ ಸದ್ಯಕ್ಕಷ್ಟೇ ಲಾಭದಾಯಕವೆಂದು ಕಂಡರೂ ದೀರ್ಘಾವಧಿಯಲ್ಲಿ ಅದು ನಮ್ಮ ಗೌರವನಾಶ ಮಾಡದೆ ಇರದು. ಗೌರವನಾಶವಾದ ಮೇಲೆ, ವಿಶ್ವಾಸನಾಶವಾದ ಮೇಲೆ ಕೂಡ ಜಗತ್ತಿನ ರಾಜಕಾರಣದಲ್ಲಿ ಪ್ರಭಾವ ಬೀರುವಷ್ಟು ಶಕ್ತಿ ನಮ್ಮಲ್ಲಿಲ್ಲ ಏಕೆಂದರೆ ತೇಜಸ್ಸಿನ ನಮ್ಮ ಉಗಮ ಎಲ್ಲಾದರೂ ಇರುವದೇ ... ಕಾಲದಲ್ಲಿ ನಮ್ಮಲ್ಲಿ ... ಸಾತ್ವಿಕ ತೇಜಸ್ಸು ... ವಿಮೋಚನೆಗಾಗಿ ಇನ್ನೊಮ್ಮೆ ನಮ್ಮಲ್ಲಿ ಪ್ರಜ್ವಲಿಸಬೇಕಾಗಿದೆ.

ಒಟ್ಟಿನ ಮೇಲೆ ಏಶಿಯನ್ ಐಕ್ಯದ ಸಮಗ್ರ ಚಿತ್ರ ಇಂದು ಅಷ್ಟು ಸುಂದರವೂ ಪ್ರಕಾಶಮಾನವೂ ಆಗಿಲ್ಲ. ಏಶಿಯದ ಐಕ್ಯ ಬಲಗೊಳ್ಳುತ್ತಿರುವ ಬದಲು ತದ್ವಿಪರೀತವಾದ ಕ್ರಿಯೆ ಪ್ರಾರಂಭವಾದಂತಿದೆ. ಏಶಿಯದ ಮುತ್ಸದ್ದಿಗಳು ಎಚ್ಚರಗೊಂಡು ಸರಿದಾರಿಯಲ್ಲಿ ತಮ್ಮ ಧೋರಣೆಗಳನ್ನು ಒಮ್ಮುಖವಾಗಿ ಪ್ರೇರಿಸಲು ತ್ವರೆಮಾಡದಿದ್ದರೆ ಯುರೋಪಿನ ಇತಿಹಾಸವೇ ಇನ್ನಷ್ಟು ವಿಕೃತ ರೂಪದಲ್ಲಿ ಇಲ್ಲಿಯೂ ಪುನರಾವೃತ್ತಿಗೊಳ್ಳಬಹುದು.

ಕರ್ನಾಟಕ

ಧಾರವಾಡ

ಲೋಂಡಾ-ಹುಬ್ಬಳ್ಳಿ ರೇಲ್ವೆ ಮಾರ್ಗದಲ್ಲಿರುವ ದೇವರಾಯ ನಿಲ್ದಾಣದ ಹತ್ತಿರ ಇದೇ ತಾ. ೨೮ರಂದು ರಾತ್ರಿ ೧೧ ಗಂಟೆಗೆ ಗೂಡ್ಸ ಗಾಡಿಯೊಂದು ಮುಂದೆ ಹೋಗುತ್ತಿರುವ ಗೂಡ್ಸ್ ಗಾಡಿಗೆ ಡಿಕ್ಕಿ ಹೊಡೆದು ಅಪಘಾತವಾದ ಸುದ್ದಿ ಬಂದಿದೆ. ಹಾನಿಯ ವಿವರ ತಿಳಿದಿಲ್ಲ.

ಕಳೆದ ತಾ. ೨೬ ರಲ್ಲಿ ಹುಬ್ಬಳ್ಳಿ ತಾಲೂಕು ವತನದಾರ ಪಾಟೀಲರ ಮತ್ತು ಅವರ ಬಗ್ಗೆ ಸಹಾನುಭೂತಿಯುಳ್ಳವರ ಸಭೆ ಹುಬ್ಬಳ್ಳಿಯಲ್ಲಿ ಜರುಗಿ, ಧಾರಣೆಯ ಏರಿಕೆಯ ಪ್ರಕಾರ ತುಟ್ಟಿಭತ್ತೆ, ಸಾದಿಲವಾರ ಮತ್ತು ಪೋಟಗಿ ಹೆಚ್ಚಿಸಬೇಕು, ಪ್ರತಿಯೊಂದು ತಾಲೂಕಿನಲ್ಲೂ ಒಂದು ಪಾಟೀಲ ಸಂಘ ಏರ್ಪಡಬೇಕು, ಕುಲಕರ್ಣಿಗಳ ರಾಜೀನಾಮೆಗೆ ಸಹಾನುಭೂತಿ ಇದೆ ಮುಂತಾದ ಅಂಶಗಳ ಬಗ್ಗೆ ಗೊತ್ತುವಳಿಗಳು ಸ್ವೀಕೃತವಾದವು.

ಹುಬ್ಬಳ್ಳಿಯಲ್ಲಿ ಜಿಲ್ಹಾ ಮ್ಯಾಜಿಸ್ಟ್ರೇಟರು ಫೆಬ್ರುವರಿಯ ಮೊದಲ ೧೫ ದಿನಗಳ ಬಗ್ಗೆ ಯೋಗ್ಯ ದರದ ಅಂಗಡಿಯ ಕಾರ್ಡುಗಳಿಗೆ ಸಲ್ಲತಕ್ಕ ಒಟ್ಟು ಆಹಾರಧಾನ್ಯದಲ್ಲಿ ಮೂರನೆಯ ಒಂದಂಶದಷ್ಟನ್ನು ಹುಬ್ಬಳ್ಳಿ ನಗರದಲ್ಲಿ ಕೊಡತಕ್ಕದ್ದೆಂದು ಅಪ್ಪಣೆ ಕೊಟ್ಟಿದ್ದಾರೆಂದು ಸೀದಾಧಿಕಾರಿಗಳು ಪ್ರಕಟಿಸುತ್ತಾರೆ.

ಗಾಂಧೀ ಪುಣ್ಯದಿನಾಚರಣೆ ಬೆಟಗೇರಿಯ ಕೈಮಗ್ಗದ ಕಚೇರಿಯಲ್ಲಿ ರಾಷ್ಟ್ರಧ್ವಜಾರೋಹಣ, ಭಾವಚಿತ್ರದ ಅನಾವರಣ, ಭಜನೆ, ಸ್ತೋತ್ರ, ಶ್ರೀ ಅನಂತರಾಯ ಜಾಲೀಹಾಳರ ಭಾಷಣ, ಸಂದೇಶವಾಚನ ಮುಂತಾದವುಗಳಿಂದ ಸಾಂಗವಾಗಿ ಜರುಗಿತು.

ಗಾಂಧೀ ಸ್ಮಾರಕನಿಧಿಗೆ ಧಾರವಾಡದ ಸೆಂಟ್ರಲ್ ಕೋಆಪರೇಟಿವ್ ಬ್ಯಾಂಕಿನವರು ೧೫ ಸಾವಿರ, ಸದರ್ನ್ ಮರಾಠಾ ಬ್ಯಾಂಕಿನವರು ೨ ಸಾವಿರ, ಪರ್ಚೇಜ್ ಮತ್ತು ಸೇಲ್ಸ್ ಯೂನಿಯನ್ನಿನವರು ೨ ಸಾವಿರ ಹೀಗೆ ಕಾಣಿಕೆ ಕೊಟ್ಟರೆಂದು ನಿಧಿ ಸಮಿತಿಯ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಧಾರವಾಡದ ಕೆ. ಇ. ಬೋರ್ಡ ಕಾಲೇಜಿನ ಕರ್ನಾಟಕ ಸಂಘದ ವಾರ್ಷಿಕೋತ್ಸವವು ಕಳೆದ ತಾ. ೨೮ ರಂದು ವಿಜೃಂಭಣೆಯಿಂದ ನೆರವೇರಿತು. ಶ್ರೀ ಆದ್ಯ ರಂಗಾಚಾರ್ಯರು ಮುಖ್ಯ ಅತಿಥಿಗಳಾಗಿದ್ದರು. ಛಾಯಾಚಿತ್ರಗ್ರಹಣ, ರಾಷ್ಟ್ರಗೀತೆ, ಅತಿಥಿಪರಿಚಯ, ಗೌರವಾಧ್ಯಕ್ಷ ಜಠಾರರಿಂದ ಸಮಾರಂಭೋದ್ಘಾಟನ, ಅಧ್ಯಕ್ಷ ಪ್ರೊ. ಜಿ. ಡಿ. ನಾಡಕರ್ಣಿಯವರಿಂದ ಅತಿಥಿ ಸ್ವಾಗತ, ಅತಿಥಿಗಳ ಮಾತು ಮುಂತಾದವುಗಳು ಸಾಂಗವಾಗಿ ಸಾಗಿದವು. ಎರಡನೆಯದಾಗಿ ಶ್ರೀ ದತ್ತೋಪಂತ ಬೆಳವಿ, ನ್ಯಾಯಮೂರ್ತಿ ಲೋಕೂರ ನಾರಾಯಣರಾಯರು, ಡಾ. ವಾಗಳೆ, ಶ್ರೀ ಬಾಬುರಾವ ಮುಸಾಳಕರರು ಪ್ರತಿಯೊಬ್ಬರೂ ಐನೂರು ರೂಪಾಯಿಗಳಂತೆ ಸಂಸ್ಥೆಗೆ ದಾನ ಮಾಡಿದರೆಂದು ಆಡಳಿತದ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಮಹಾತ್ಮರ ಪುಣ್ಯತಿಥಿಯನ್ನು ಕಳೆದ ತಾ. ೩೦ ರಲ್ಲಿ ಹುಬ್ಬಳ್ಳಿ ತಾಲೂಕು ಕಾಂಗ್ರೆಸ್ ಸಮಿತಿ ಮತ್ತು ಇತರ ಸಂಘ ಸಂಸ್ಥೆಗಳವರು ಪ್ರಾರ್ಥನೆ ಸೂತ್ರಯಜ್ಞಾದಿಗಳಿಂದ ಆಚರಿಸಿದರು. ಸರಕಾರೀ ಮತ್ತು ರೇಲ್ವೆ ಕಟ್ಟಡಗಳ ಮೇಲಿನ ಧ್ವಜಗಳನ್ನು ಅರ್ಧಕ್ಕಿಳಿಸಲಾಗಿತ್ತು. ನಗರದಲ್ಲಿ ಇಡೀ ದಿನ ಹರತಾಳವನ್ನು ಆಚರಿಸಲಾಯಿತು. ರಾಷ್ಟ್ರೀಯ ಮಜೂರ ಸಂಘದವರು ಕೂಲಿಕಾರರ ಚಾಳಿನ ನಿರ್ಮಲೀಕರಣ ನಡೆಸಿದ್ದು ಮತ್ತು ಘಂಟಿಕೇರಿ ಕ್ರಿಶ್ಚನ ಕಾಲನಿಯ ಪರವಾಗಿ ರೂಬೆನ್ಸ್ ಸೋಶಿಯಲ್ ಕ್ಲಬ್ಬಿನ ಪುಣ್ಯದಿನಾಚರಣೆಯಲ್ಲಿ ಶ್ರೀ ವಿ. ಬಿ. ನಾಯಕರು ಮಹಾತ್ಮರ ಭಾವಚಿತ್ರವನ್ನು ಅನಾವರಣಮಾಡಿ ಕಾಂಗ್ರೆಸ್ ಕಾರ್ಯ ಸಮಿತಿಯ ಸಂದೇಶ ಓದಿ ಹೇಳಿದ್ದು ಇತರ ಕಾರ್ಯಕ್ರಮಗಳಲ್ಲಿ ಮುಖ್ಯವಾದವು.

ಧಾರವಾಡ ತಾಲೂಕು ರೈತಪರಿಷತ್ತು ಕಳೆದ ೩ ರಲ್ಲಿ ಶ್ರೀ ಜಿ. ಆರ್. ನಲವಡಿ ವಕೀಲರ ಅಧ್ಯಕ್ಷತೆಯಲ್ಲಿ ಸೇರಿತ್ತು. ಹಳ್ಳಿಗಳಿಂದ ಸುಮಾರು ಸಾವಿರ ಜನರು ಬಂದಿದ್ದರು. ಪ್ರಾರಂಭದಲ್ಲಿ ಶ್ರೀ ಬಸವಪ್ಪ ಬೆಟಗೇರಿಯವರು ಭಾಷಣಮಾಡಿ ಎಲ್ಲರಿಗೂ ಸ್ವಾಗತ ಬಯಸಿ ರೈತ ಪರಿಷತ್ತಿನ ಉದ್ದೇಶಗಳನ್ನೂ ರೈತರ ಮುಂದಿರುವ ಸಮಸ್ಯೆಗಳನ್ನೂ ವಿವರಿಸಿದರು. ಸರದಾರ ವೀರನಗೌಡರು ಭಾಷಣಮಾಡಿ ಪರಿಷತ್ತನ್ನು ಉದ್ಘಾಟಿಸಿದರು. ಅಧ್ಯಕ್ಷರು ನೀರಾವರಿಯ ಅವಶ್ಯಕತೆ, ಅಧಿಕ ಆಹಾರ ಬೆಳೆಯುವ ಬಗೆ, ದನಕರುಗಳ ಸಾಕಣೆ, ರೈತನ ಆರ್ಥಿಕ ಸ್ಥಿತಿ, ಟೆನೆನ್ಸೀ ಕಾನೂನು ಮುಂತಾದ ವಿಷಯಗಳ ಮೇಲೆ ಸುದೀರ್ಘ ಭಾಷಣ ಮಾಡಿದರು. ಅಂತ್ಯದಲ್ಲಿ ಬಂದ ಗೊತ್ತುವಳಿಗಳ ವಿಷಯದಲ್ಲಿ ಸರದಾರ ವೀರನಗೌಡರು ಗೊಂದಲ ವೆಬ್ಬಿಸಿದ್ದರಿಂದ ಪರಿಷತ್ತು ಅರಾಜಕತೆಯಲ್ಲಿ ಕೊನೆಗಂಡಿತು.

ವಿಜಾಪುರ

ಮನಗೂಳಿಯ ಕುಲಕರ್ಣಿ ಮನೆತನದಲ್ಲಿ ಹಿರಿಯರೂ ಮುಖಂಡರೂ ಆದ ಶ್ರೀ ಬಾಬುರಾವ ಗಣೇಶ ಕುಲಕರಣಿಯವರು ತಾ ೨೭ ರಲ್ಲಿ ನಿಧನಹೊಂದಿದರೆಂದು ತಿಳಿಸಲು ವಿಷಾದವಾಗುತ್ತದೆ. ಅವರ ಉತ್ತರಾಧಿಕಾರಿಗಳಿಗೆ ಶವಸಂಸ್ಕಾರ ಮಾಡುವ ಮೊದಲು ಚಾರ್ಜು ಕೊಟ್ಟು ಹೋಗಬೇಕೆಂದು ಅಧಿಕಾರಿಗಳು ಒತ್ತಾಯಪಡಿಸಿದರೆಂದ ನಿರೀಕ್ಷಕನೊಬ್ಬನು ತಿಳಿಸುತ್ತಾನೆ.

ನಿಖಿಲಕರ್ನಾಟಕ ಆಯುರ್ವೇದಮಂಡಲದ ಕಚೇರಿ ಈ ವರೆಗೆ ಮೈಸೂರಲ್ಲಿದ್ದು ಈಗ ಅದನ್ನು ಬೆಳಗಾವಿಗೆ ಸ್ಥಳಾಂತರಿಸಲಾಗಿದೆಯೆಂದೂ ಅದನ್ನು ಮೆಣಸಿಗಲ್ಲಿಯಲ್ಲಿ ತೆರೆಯಲಾಗಿದೆಯೆಂದೂ ಶ್ರೀ ಆ. ವಿ. ಗದಗರು ತಿಳಿಸುತ್ತಾರೆ.

ಹುನಗುಂದ ತಾಲೂಕು ೫ ನೆಯ ರೈತ ಪರಿಷತ್ತು ಮುಂಬಯಿ ಶಾಸನ ಸಭೆಯ ಉಪಾಧ್ಯಕ್ಷರಾದ ಶ್ರೀ ಷಣ್ಮುಖಪ್ಪ ಅಂಗಡಿಯವರ ಅಧ್ಯಕ್ಷತೆಯಲ್ಲಿ ಕಳೆದ ೩೧ ರಲ್ಲಿ ಸಂಗಮದಲ್ಲಿ ಸಭೆಸೇರಿತು. ಶ್ರೀಮತಿ ಪದ್ಮಾವತಿಬಾಯಿ ಅಂಗಡಿಯವರು ಪರಿಷತ್ತಿನ ಉದ್ಘಾಟನೆಮಾಡಿದರು. ಕರ್ನಾಟಕದ ಏಕೀಕರಣವು ಹೊಸ ರಾಜ್ಯಘಟನೆ ಜಾರಿಗೆ ಬರುವಷ್ಟರಲ್ಲಿ ನಡೆಯಬೇಕು, ಇದನ್ನು ಸಾಧಿಸಲು ಪ್ರಸಂಗಬಂದರೆ ಶಾಸನ ಸಭೆಯ ಕನ್ನಡ ಸದಸ್ಯರು ಮತ್ತು ಕನ್ನಡ ಮಂತ್ರಿಗಳು ರಾಜೀನಾಮೆ ಕೊಡಲಿಕ್ಕೂ ಸಿದ್ಧರಿರಬೇಕು, ರೈತರಿಗೆ ಬೇಕಾಗುವಷ್ಟು ಕಾಳನ್ನು ಅವರಿಗಿಟ್ಟು ಸರಕಾರ ಲೆವಿ ಎತ್ತಬೇಕು, ರೈತರಿಗೆ ಹೆಚ್ಚಿಗೆ ಸೀದಾ ಕೊಡಬೇಕು ಮುಂತಾದ ೧೧ ಗೊತ್ತುವಳಿಗಳು ಸ್ವೀಕೃತವಾದವು.

ವ್ಯಾಪಾರ ವಿಷಯಕ್ಕೆ ಮೀಸಲಾದ ಒಂದು ಮಾಸಪತ್ರಿಕೆಯು ವ್ಯಾಪಾರಸ್ಥರಿಗೆ ಅವಶ್ಯಕವೆಂದು "ವ್ಯಾಪಾರ" ಎಂಬ ಮಾಸಪತ್ರಿಕೆಯನ್ನು ಚೈತ್ರ ಶುದ್ಧ ೧ ರಲ್ಲಿ ಬಾಗಿಲುಕೋಟೆಯಲ್ಲಿ ಹೊರಡಿಸಲಾಗುವದು; ಅದರ ವಾರ್ಷಿಕ ವರ್ಗಣಿ ೫ ರೂಪಾಯಿ ಎಂದು ಸಂಪಾದಕ ಶ್ರೀ ಗುರುದಾಸಪ್ಪ ಸಜ್ಜನರು ತಿಳಿಸುತ್ತಾರೆ.

ಬೆಳಗಾವಿ

ಭೋಜದಲ್ಲಿ ತಾ. ೧೭ರ ದಿನ ವಿದ್ಯಾಶಾಲೆಯಿಂದ ನಿವೃತ್ತರಾದ ಪ್ರೋ. ಬಿ. ಕೆ. ನೇರ್ಲೇಕರ ಮತ್ತು ಕುಂಬಾರ ಅ. ಡಿ. ಎ. ಇ. ಬೆಳಗಾವ ಇವರಿಬ್ಬರಿಗೆ ಪ್ರಾಥಮಿಕ ಶಾಲೆಗಳ ಶಿಕ್ಷಕ ಶಿಕ್ಷಿಕೆಯರು ಡಿ. ಬಿ. ಪಾಟೀಲ, ಬಿ. ಎ ಎಲ್. ಎಲ್. ಬಿ. ವಕೀಲ ಇವರ ಹಿರಿಯತನದಲ್ಲಿ ಬೀಳ್ಕೊಡುವ ಸಮಾರಂಭವನ್ನು ನೆರವೇರಿಸಿದರು.

ಕಳೆದ ತಾ. ೧೯ರಲ್ಲಿ ಶ್ರೀ ಚಿಂತಾಮಣಿ ನವಲಗುಂದರ ಅಧ್ಯಕ್ಷತೆಯಲ್ಲಿ ರೈತರ ಸಭೆ ಕೂಡಿದಾಗ ಬೆಳಗಾವಿ ಜಿಲ್ಲಾ ಒಕ್ಕಲುತನದ ಅಧಿಕಾರಿ ಶ್ರೀ ಎಸ್ ಎಫ್ ಕೋಟೂರರು ಒಕ್ಕಲುತನದ ಸುಧಾರಣೆ, ದನಗಳ ಪೀಳಿಗೆಯ ಅಭಿವೃದ್ಧಿ ಮುಂತಾದವುಗಳನ್ನು ವಿವರಿಸಿ ಹೇಳಿದರು. ಬೆಳವಡಿಯ ಶ್ರೀ ರಣಗಟ್ಟಿ ಮಠರು ಒಕ್ಕಲುತನದ ಪ್ರಾತ್ಯಕ್ಷಿಕೆಯ ಚಟುವಟಿಕೆಗಳ ಬಗ್ಗೆ ಹೇಳಿದರು.

ಬೆಳಗಾವಿ ಹೆಡ್ ಪೋಸ್ಟಾಫೀಸಿನ ಮತ್ತು ಅದರ ಕೆಳಗಿನ ಎಲ್ಲ ಸಬ್ ಮತ್ತು ಬ್ರಾಂಚ್ ಪೋಸ್ಟಾಫೀಸುಗಳ ನೌಕರರು ಗಾಂಧೀ ಸ್ಮಾರಕ ನಿಧಿಗೆ ೨೫೫೮ ರೂಪಾಯಿಗಳನ್ನು ಕೂಡಿಸಿ ಇಂಪೀರಿಯಲ್ ಬ್ಯಾಂಕಿನಲ್ಲಿ ಜಮಾ ಮಾಡಿದ್ದಾರೆ.

ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನವರು ಕನ್ನಡ 'ಕಾವ', 'ಜಾಣ' ಪರೀಕ್ಷೆಗಳನ್ನು ನಾಳಿನ ಮಾರ್ಚ ೨೭, ೨೭, ೨೮, ೨೯ ರಲ್ಲಿ ನಡೆಸುವರೆಂದು ತಿಳಿಯುತ್ತದೆ. ಅಪೇಕ್ಷಾಪತ್ರ ಕಳಿಸುವ ದಿನವನ್ನು ಫೆಬ್ರುವರಿ ೧೫ ರ ವರೆಗೆ ಮುಂದೆ ಹಾಕಲಾಗಿದೆ.

ಉತ್ತರ ಕನ್ನಡ

ಮಾಸ್ಕೇರಿಯ ಅಡುಕಟ್ಟೆಯ ಹತ್ತಿರ ಗಾಂಧೀ ಮೈದಾನದಲ್ಲಿ ಧ್ವಜಾರೋಹಣ ಪ್ರತಿಜ್ಞಾ ಪಠನ, ಬೆಲ್ಲದ ಹಂಚುವಿಕೆ, ಪ್ರಭಾತಫೇರಿ ಮುಂತಾದ ಕಾರ್ಯಕ್ರಮಗಳಿಂದ ಮಹಾತ್ಮರ ಪುಣ್ಯದಿನವನ್ನು ಆಚರಿಸಲಾಯಿತೆಂದು ತಿಳಿಯುತ್ತದೆ.

ಮಹಾತ್ಮರ ಪುಣ್ಯತಿಥಿಯ ದಿನ ಕಾರವಾರದಲ್ಲಿ ಪ್ರಭಾತಫೇರಿ, ನಗರ ನಿರ್ಮಲೀಕರಣ, ಗಾಂಧೀಸ್ಮಾರಕ ನಿಧಿಸಂಗ್ರಹ, ನೂಲುವ ಸ್ಪರ್ಧೆ, ಪ್ರಾರ್ಥನೆ, ಭಜನೆ, ಸಭೆ, ಸಂದೇಶವಾಚನ ಮುಂತಾದವು ನಡೆದವು.

ಕಳೆದ ತಾ ೩೦ ರಲ್ಲಿ ಕಾರವಾರದ ಪೋಲೀಸರು ಒಬ್ಬ ಪತ್ತಾರನ ಮನೆಯಲ್ಲಿ ೪೮೦ ತೊಲೆ ತೂಕದ ೮೫ ಸಾವಿರ ರೂಪಾಯಿ ಬೆಲೆಬಾಳುವ ೪ ಬಂಗಾರದ ಗಟ್ಟಿಗಳು ಮತ್ತು ಒಂದು ಬಂಗಾರದ ಲಾಕೆಟ್ಟು ಇವನ್ನು ಜಪ್ತ ಮಾಡಿದರು. ಇವಲ್ಲದೆ ಅವನಲ್ಲಿ ೩ ಸಾವಿರ ರೂಪಾಯಿಯ ನೋಟುಗಳೂ ಸಿಕ್ಕಿದವು. ಬಂಗಾರವನ್ನು ಗೋವೆಯಿಂದ ತಂದಿರಬಹುದೆಂದು ಪೋಲೀಸರ ತರ್ಕ.

ಗೋಕರ್ಣ ವಿಭಾಗದ ಪ್ರಾಥಮಿಕ ಶಿಕ್ಷಕರ ಸಮ್ಮೇಲನವು ಕಳೆದ ೧೫ ರಲ್ಲಿ ಶ್ರೀ ಎಂ. ಜಿ. ಗೋಪಿಯವರ ಅಧ್ಯಕ್ಷತೆಯಲ್ಲಿ ಗೋಕರ್ಣದಲ್ಲಿ ನೆರವೇರಿತು.

ಕನ್ನಡ ಸಂಸ್ಥಾನ

"ಅಂಚೆ ತಂತಿ ಶಾಖೆಯ ನೌಕರರು ತಮ್ಮ ತೊಂದರೆಗಳ ಪರಿಹಾರಕ್ಕಾಗಿ ಸಂಪು ಹೂಡಬಾರದು" ಎಂದು ಹಿಂದುಸ್ತಾನದ ಸಂಪರ್ಕ ಶಾಖೆಯ ಮಂತ್ರಿಗಳಾದ ಶ್ರೀ ರಫಿ ಅಹಮ್ಮದ ಕಿಡ್ವಾಯಿಯವರು ಕಳೆದ ೨೬ ಸಾಯಂಕಾಲ ಬೆಂಗಳೂರಿನ ಹೆಡ್ ಪೋಸ್ಟಾಫೀಸಿನ ಅಂಚೆ ತಂತಿ ನೌಕರರ ಸಭೆಯಲ್ಲಿ ಭಾಷಣ ಮಾಡುವಾಗ ಹೇಳಿದರು.

ಚಿಕ್ಕಮಗಳೂರು ಜಿಲ್ಲೆಯ ಪಬ್ಲಿಕ್ ವರ್ಕ್ಸ್ ಕಂಟ್ರಾಕ್ಟರುಗಳ ಸಮ್ಮೇಳನವು ಕಳೆದ ೨೭ ರಲ್ಲಿ ಶ್ರೀ ಗುರುನಾಥ ಟಾಕೀಸಿನಲ್ಲಿ ರಾಜ್ಯಾಂಗ ಸಭಾಸದರಾದ ಶ್ರೀ ಎಂ. ಹುಚ್ಚೇಗೌಡರ ಅಧ್ಯಕ್ಷತೆಯಲ್ಲಿ ಜರುಗಿತು. ಬೆಂಗಳೂರಿನ ಕೇಂದ್ರ ಸಂಘದವರೂ ಸಂಸ್ಥಾನದ ನಾನಾ ಭಾಗದ ಹಿರಿಯ ಕಂಟ್ರಾಕ್ಟರರೂ ಬಂದಿದ್ದರು.

ರಾಷ್ಟ್ರಪಿತ ಮಹಾತ್ಮರ ಪುಣ್ಯತಿಥಿಯ ಕಾರ್ಯಕ್ರಮಗಳು ರಾಯಚೂರಿನ ಶ್ರೀ. ಪಾಂಡುರಂಗರಾವ ಕಸಬೆ ಮತ್ತು ಕಲಬುರ್ಗಿಯ ಶ್ರೀ. ಅಣ್ಣಾರಾವ ಇವರು ಅತಿಥಿಗಳಾಗಿ ಬಂದ ಕೂಡಲೆ ಕೊಪ್ಪಳ ಜಾಗೀರ ಕಾಂಗ್ರೆಸ ಕಮೀಟಿಯ ವತಿಯಿಂದ ಪ್ರಾರಂಭವಾಗಿ ಶ್ರೀ. ರಾಘವೇಂದ್ರರಾವ ಜಾಕಲಬ್ಬಿಯವರ ಅಧ್ಯಕ್ಷತೆಯಲ್ಲಿ ಭಾಷಣಗಳಾದವು.

ದಕ್ಷಿಣ ಕನ್ನಡ

ಲೇಖಕರ ಒಂದು ಸಂಘಟಿತ ಸಂಸ್ಥೆಯನ್ನು ಕಟ್ಟಿ ತನ್ಮೂಲಕ ಲೇಖಕರ ಮತ್ತು ಸಾಹಿತ್ಯದ ವಿವಿಧ ಸಮಸ್ಯೆಗಳನ್ನು ಬಗೆಹರಿಸುವುದಕ್ಕಾಗಿ ಕನ್ನಡದ ಲೇಖಕರು ಒಟ್ಟು ಕೂಡಿ ದುಡಿಯಬೇಕಾಗಿದೆಯೆಂದೂ ಇದಕ್ಕಾಗಿ ಮಂಗಳೂರಿನ ಪ್ರಗತಿಶೀಲ ಲೇಖಕ ಸಂಘದವರು ಒಂದು ಸಮ್ಮೇಲನವನ್ನು ಕರೆಯಬೇಕೆಂದಿರುವುದರಿಂದ ಅದರ ಬಗ್ಗೆ ಕನ್ನಡ ನಾಡಿನ ಎಲ್ಲ ಪ್ರಗತಿಶೀಲ ಲೇಖಕರೂ ನೆರವಾಗಬೇಕೆಂದೂ ಮಂಗಳೂರಿನ ಪ್ರಗತಿಶೀಲ ಲೇಖಕ ಸಂಘದ ಕಾರ್ಯದರ್ಶಿ ಶ್ರೀ ಬಿ. ಕಂಕಣಭಟ್ಟರು ಒಂದು ಪ್ರಕಟನೆಯಲ್ಲಿ ಹೇಳಿದ್ದಾರೆ.

ಉಡುಪಿ ಕಾಂಗ್ರೆಸ್ ಕಮಿಟಿಯ ಪರವಾಗಿ ತಾ ೩೦ ರಲ್ಲಿ ಧ್ವಜವಂದನೆ, ಸೂತ್ರಯಜ್ಞ, ಮೌನಪ್ರಾರ್ಥನೆ, ಸಂದೇಶವಾಚನ ಮೊದಲಾದ ಕಾರ್ಯಕ್ರಮಗಳಿಂದ ಮಹಾತ್ಮರ ಪುಣ್ಯದಿನಾಚರಣೆ ಉಡುಪಿಯಲ್ಲಿ ಸಾಂಗವಾಗಿ ನೆರವೇರಿತು.

ಮಂಗಳೂರಿನ ಸೆಸೆಂಟ್ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯಲ್ಲಿ ಪುರಂದರದಾಸರ ದಿನಾಚರಣೆಯು ದಿನಾಂಕ ೨೯ ರಂದು ಜರುಗಿತು. ಇಲ್ಲಿನ ಸರಕಾರಿ ಕಲಾ ಶಾಲೆಯ ಕನ್ನಡ ಲೆಕ್ಚರರಾದ ಶ್ರೀ. ಪಿ. ಕೆ. ನಾರಾಯಣ ಅವರು ಸ್ವಾಗತ ಭಾಷಣ ಮಾಡಿದ ಬಳಿಕ ಕೆಲ ಕುಮಾರಿಯರೂ ಶ್ರೀ ಶ್ರೀನಿವಾಸ ಉಡುಪರೂ ಕೀರ್ತನೆಗಳನ್ನು ಹಾಡಿದರು. ಅಧ್ಯಕ್ಷರ ಭಾಷಣವಾಗಿ ಸಮಾರಂಭವು ಕೊನೆಗೊಂಡಿತು.

ಮಹಾತ್ಮರ ಸ್ಮಾರಕ ದಿನವು ಮಂಗಳೂರಲ್ಲಿ ದಿನಾಂಕ ೨೭ ರಂದು ಸಂಜೆ ಶ್ರೀ ಬಿ. ದಾಮೋದರ ಬಾಳಿಗರ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀ. ಪಿ. ಲಕ್ಷ್ಮಿನಾರಾಯಣ ನಾಯ್ಕ (ಜಿಲ್ಹಾ ಕಾಂಗ್ರೆಸ್ ಅಧ್ಯಕ್ಷ.) ಬಿ. ಜಗನ್ನಾಥ ಶೈ. ಎಚ್. ನಾರಾಯಣರಾವ್. ಹಿ. ದಾ. ಮಲ್ಯ ಮುಂತಾದವರು ಭಾರತಕ್ಕೆ ಸ್ವಾತಂತ್ರ್ಯ ತಂದ ಮಹಾತ್ಮರ ವಿಚಾರವಾಗಿ ಮಾತನಾಡಿದರು. ಅಧ್ಯಕ್ಷರ ಭಾಷಣವಾದ ಮೇಲೆ ರಾಷ್ಟ್ರಗೀತೆಯೊಂದಿಗೆ ಸಭೆಯು ಕೊನೆಗೊಂಡಿತು.

ಅಖಿಲ ಭಾರತ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯ ಸದಸ್ಯರೂ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ಸಿನ ಅಧ್ಯಕ್ಷರೂ ಆದ ಶ್ರೀ ಎಸ್. ನಿಜಲಿಂಗಪ್ಪನವರು ದಿನಾಂಕ ೪, ೫, ಮತ್ತು ೬ ನೆಯ ದಿನಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಪ್ರವಾಸ ಮಾಡಿದರು.

ರಾಷ್ಟ್ರಪಿತ ಗಾಂಧೀಜಿಯ ಮೊದಲ ಪುಣ್ಯತಿಥಿಯು ಮಂಗಳೂರಿನಲ್ಲಿ ಅತಿ ಗಂಭೀರ ರೀತಿಯಲ್ಲಿ ಆಚರಿಸಲ್ಪಟ್ಟಿತು. ಸಮಾರಂಭದಲ್ಲಿ ವಂದೇ ಮಾತರಂ ಪ್ರಾರ್ಥನೆಯಾದ ಮೇಲೆ ಶ್ರೀ. ಎಸ್. ಎಸ್. ಶಿಲ್ಲೆಯವರು ಗೀತೆಯಿಂದಲೂ, ಮೌಲ್ವಿ ಮಹಮ್ಮದ ಯೂಸೂಫ್ ರವರು ಕುರಾನಿನಿಂದಲೂ ಮಿ. ಹೆರ್ರಿಯವರು ಬೈಬಲ್ ನಿಂದಲೂ ಪ್ರಾರ್ಥನೆ ಮಾಡಿದರು. ಶ್ರೀ. ಕೆ. ಕೆ. ಶೆಟ್ಟಿಯವರು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಗೊತ್ತುವಳಿಯನ್ನು ಓದಿ ಹೇಳಿದರು. ಆಮೇಲೆ ಭಜನೆ, ಹಾಡು. ರಾಷ್ಟ್ರಗೀತೆಯೊಂದಿಗೆ ಸಮಾರಂಭ ಮುಗಿಯಿತು.

ಹಿಂದುಸ್ತಾನ

ಮುಂಬಯಿ

ಮುಂಬಯಿಯಲ್ಲಿ ಗಾಂಧೀ ರಾಷ್ಟ್ರೀಯ ಸ್ಮಾರಕ ನಿಧಿಗೆ ರೂ. ೨೯,೫೪,೦೬೯-೩-೦ ಈ ವರೆಗೆ ಕೂಡಿದೆ.

ಮುಂಬಯಿ ಶಾಸನ ಸಭೆಯ ಮುಂಗಡ ಪತ್ರ ಅಧಿವೇಶನ ಫೆ. ೧೮ ಕ್ಕೆ ಪ್ರಾರಂಭ ವಾಗುವದು. ಬೊಗಸೆರ ಕಾಲದಲ್ಲಿ ಅಸ್ತಿತ್ವದಲ್ಲಿ ಬಂದ ಪತನದಾರ ಕುಲಕರ್ಣಿ ಪದ್ಧತಿಯನ್ನು ರದ್ದುಗೊಳಿಸುವ ಮಸೂದೆಯನ್ನೊಳಗೊಂಡು ಹಲವು ಮಸೂದೆಗಳನ್ನು ಈ ಅಧಿವೇಶನದಲ್ಲಿ ಸರಕಾರ ತರಲಿರುವದೆಂದು ತಿಳಿಯುತ್ತದೆ.

ಧಾರವಾಡ ಜಿಲ್ಲೆಯ ನವಲಗುಂದ ತಾಲೂಕಿನ ೩೦ ಮತ್ತು ರಾಮದುರ್ಗ ೧ ಹಳ್ಳಿಗಳು ದುರ್ಭಿಕ್ಷ ಪ್ರದೇಶಗಳೆಂದು ಮುಂಬಯಿ ಸರಕಾರ ಸಾರಿದ್ದು ಪರಿಹಾರ ಕಾರ್ಯಕ್ಕಾಗಿ ಧಾರವಾಡದ ಕಲೆಕ್ಟರರ ವಶಕ್ಕೆ ೯೦ ಸಾವಿರ ರೂಪಾಯಿ ಕೊಡಲಾಗಿದೆ.

ಹಣದ ಅತಿಪ್ರಸರಣವನ್ನು ತಗ್ಗಿಸುವ ಯೋಜನೆಯ ಅಂಗವಾಗಿ ಮುಂಬಯಿ ಸರಕಾರದವರು ವೆಚ್ಚ ಪರಿಶೀಲನೆಗೆ ನೇಮಿಸಿದ ವೆಚ್ಚಗಳ ಪೂರ್ವಪ್ರಾಶಸ್ತ್ಯ ಸಮಿತಿಯವರು ಅನೇಕ ಬಾಬುಗಳನ್ನು ತೆಗೆದು ಹಾಕಿ ಅಥವಾ ಮುಂದೆಹಾಕಿ ಪ್ರಾಂತದಲ್ಲಿ ಸುಮಾರು ೩ಕೋಟಿ ರೂ. ಉಳಿತಾಯಕ್ಕೆ ದಮಾಡಿಕೊಟ್ಟಿದ್ದಾರೆ.

ವಿಶಾಖಪಟ್ಟಣದಲ್ಲಿ ಸಿಂಧ್ಯ ಕಂಪನಿಯವರು ಕಟ್ಟಿಸಿದ ಧಕ್ಕೆಯನ್ನೂ ನೌಕಾ ನಿರ್ಮಾಣವನ್ನೂ ಕೇಂದ್ರ ಸರಕಾರ ಕೊಳ್ಳಲಿರುವದು.

ಇದೇ ಫೆಬ್ರುವರಿ ತಿಂಗಳಲ್ಲಿ ಮುಂಬಯಿ ಶಾಸನ ಸಭೆಗೆ ನಡೆಯುವ ಉಪಚುನಾವಣೆಯ ಬಗ್ಗೆ ಕಾಂಗ್ರೆಸ್ಸಿನವರು ದೇವದಾನವಾಲಾರನ್ನೂ ಸಾಮ್ಯವಾದಿಗಳು ಶ್ರೀ ಯುಸುಫ ಮೆಹರಲ್ಲಿಯವರನ್ನೂ ನಿಲ್ಲಿಸಿದ್ದರೂ ಮೆಹರಲ್ಲಿಯವರಿಗೇ ಕಾಂಗ್ರೆಸ್ ಮತದಾರರು ಮತ ಕೊಡಬೇಕೆಂದು ಪ್ರಾಂ. ಕಾಂ. ಅಧ್ಯಕ್ಷ ಶ್ರೀ ಎಸ್. ಕೆ. ಪಾಟೀಲರು ಪ್ರಕಟಿಸಿದ್ದಾರೆ. ಕಾಂಗ್ರೆಸ್ ಹುರಿಯಾಳು ಈಗ ಹುರಿಯಾಳ್ತನವನ್ನು ಹಿಂತೆಗೆದುಕೊಂಡಂತೆಯೆ ಆಗಿದೆ.

ಮುಂಬಯಿಯ ಪ್ರಗತಿಶೀಲರ ಗುಂಪಿನಲ್ಲಿ ಭಾಷಣ ಮಾಡುತ್ತ ಕಾಶ್ಮೀರ ಮುಖ್ಯಮಂತ್ರಿ ಶೇಖ ಅಬ್ದುಲ್ಲಾ ಅವರು, ಕಳೆದ ೧೫ ತಿಂಗಳಿಂದ ಕಾಶ್ಮೀರಕ್ಕೆ ಹಿಂದುಸ್ತಾನ ಮಾಡಿದ ಸಹಾಯಗಳನ್ನೂ ಪಾಕಿಸ್ತಾನಿಗಳು ಗಡಿನಾಡಿನಲ್ಲಿ ಕೆಂಪಂಗಿಗಳ ಮೇಲೆ ನಡೆಸಿದ ದಬ್ಬಾಳಿಕೆಯನ್ನೂ ನೆನೆದುಕೊಂಡು ಕಾಶ್ಮೀರಿಗಳು ಜನಮತಗಣನೆಯಲ್ಲಿ ಭಾರತದಲ್ಲೆ ಉಳಿಯಲು ನಿರ್ಧರಿಸುವಲ್ಲಿ ಸಂಶಯವಿಲ್ಲೆಂದು ಹೇಳಿದರು.

ಭಾರತದಲ್ಲಿ ಸರ್ವರ ಸರ್ವಾಂಗೀನ ಉನ್ನತಿಯಾಗಬೇಕಾದರೆ ಘಟನಾ ಸಮಿತಿಯು ಭಾಷಾನ್ವಯ ಪ್ರಾಂತರಚನೆಯ ತತ್ವವನ್ನೊಪ್ಪಿಕೊಳ್ಳಬೇಕೆಂದು ಪುಣೆಯಲ್ಲಿ ಅ. ಭಾ. ಕಾಂಗ್ರೆಸ್ ಕಾರ್ಯದರ್ಶಿಯಾದ ಶ್ರೀ ಶಂಕರರಾವ ದೇವರು ಹೇಳಿದರು. ಸೌರಾಷ್ಟ್ರ ಸಂಸ್ಥಾನಗಳನ್ನು ಮುಂಬಯಿ ಪ್ರಾಂತದಲ್ಲಿ ಲೀನಗೊಳಿಸಿದರೆ ಪ್ರಾಂತದ ವಿವಿಧ ಭಾಷಾಭಾಷಿಗಳ ಸಂಖ್ಯೆಯ ಸಮತೂಕ ತಪ್ಪುವದರಿಂದ ಶ್ರೀ ಕೆ. ಎಂ. ಮುನಶಿಯವರ ಆ ಸೂಚನೆಯನ್ನು ಅವರು ಖಂಡಿಸಿದರು. ಶ್ರೀ ಮುನಶಿಯವರು ಸೌರಾಷ್ಟ್ರ ಒಕ್ಕೂಟವು ಮುಂಬಯಿ ಪ್ರಾಂತದಲ್ಲಿ ಲೀನವಾಗಬೇಕೆಂದು ಮದ್ರಾಸದಲ್ಲಿ ಒಂದು ಕಡೆ ಹೇಳಿದ್ದರು.

ದೇವನಾಗರಿ ಲಿಪಿಯಲ್ಲಿ ಬರೆಯಲ್ಪಡುವ ಹಿಂದಿಯೇ ರಾಷ್ಟ್ರಭಾಷೆಯಾಗವೇಕೆಂಗೂ ಪರ್ಶಿಯನ್ ಶಬ್ದಗಳ ಕಲಸುಮೇಲೋಗರವಿದ್ದ ಹಿಂದುಸ್ತಾನಿ ಸಲ್ಲದೆಂದೂ ಹಿಂದೀ ಸಾಹಿತ್ಯ ಸಮ್ಮೇಲನದ ಅಧ್ಯಕ್ಷ ಸೇಠ ಗೋವಿಂದದಾಸರು ಮುಂಬಯಿಯಲ್ಲಿ ಹಿಂದೀ ವಿದ್ಯಾರ್ಥಿಗಳ ಘಟಿಕೋತ್ಸವ ಸಭೆಯಲ್ಲಿ ಹೇಳಿದರು.

ಮುಂಬಯಿಯ ಮೆಮನ್ ವ್ಯಾಪಾರಸ್ಥರ ಸಂಘಗಳು ಗಾಂಧೀ ಸ್ಮಾರಕ ನಿಧಿಗೆ ೪೧೦೦೦ ರೂಪಾಯಿಗಳ ಕಾಣಿಕೆಯಿತ್ತಿವೆ.

ಭಾರತದ ಮುಖ್ಯ ಸೇನಾಪತಿ ಜನರಲ್ ಕಾರ್ಯಪ್ಪನವರು ತಾ. ೩೦ ಕ್ಕೆ ಪುಣೆಯಲ್ಲಿ ಆಕ್ಟಿಂಗ್ ಕಮಾಂಡ ಕಂಟ್ರೋಲರ ಕಚೇರಿಯಲ್ಲಿ ಮಹಾತ್ಮರ ಕಂಚಿನ ಪ್ರತಿಮೆಯ ಅನಾವರಣ ಮಾಡುತ್ತ ಗಾಂಧೀಜಿಯವರ ಆದರ್ಶಗಳನ್ನು ಅನುಸರಿಸುವದೇ ಅವರ ನಿಜವಾದ ಸ್ಮಾರಕವೆಂದರು. ಸೇನಾಪತಿಗಳು ಕಾಶ್ಮೀರ, ಹೈದರಾಬಾದಗಳಲ್ಲಿ ಗಾಯಗೊಂಡ ಸೈನಿಕರನ್ನು ಸೈನಿಕ ಆಸ್ಪತ್ರೆಯಲ್ಲಿ ಸಂದರ್ಶಿಸಿದರು.

ಹೊಸದಿಲ್ಲಿ

ಮಹಾತ್ಮಾ ಗಾಂಧಿಯವರ ಮೊದಲನೆ ಪುಣ್ಯತಿಥಿಯನ್ನು ದಿಲ್ಲಿಯಲ್ಲಿ ಸರಕಾರಿ ಭವನದಲ್ಲಿಯೂ ಆಚರಿಸಲಾಯಿತು. ಗವರ್ನರ ಜನರಲ್ಲರೂ ಮಂತ್ರಿಗಳೂ ಸರಕಾರಿ ಭವನದ ಇತರ ಅಧಿಕಾರಿಗಳೂ ಕೀರ್ತನೆ ಭಜನೆಗಳಲ್ಲಿ ಕೆಲಕಾಲ ಕಳೆದರು. ಇಜಿಪ್ತ, ಅಫಘಾನ ರಾಯಭಾರಿಗಳೂ ಉಪಸ್ಥಿತರಾಗಿದ್ದರು. ರಾಜಘಾಟದಲ್ಲಿ ಮಹಾತ್ಮರ ಸಮಾಧಿಯ ಬಳಿಯ ಗುಡಿಸಲಿನಲ್ಲಿ ನಡೆದ ಸೂತ್ರಯಜ್ಞದಲ್ಲಿ ಪಂ. ನೆಹರೂ ಮತ್ತು ಇತರ ಮಂತ್ರಿಗಳು ಭಾಗವಹಿಸಿದ್ದರು. ಅವರು ಬಿರ್ಲಾಭವನದ ಮುಂದೆ ಮಹಾತ್ಮರು ಗುಂಡಿಗಾಹುತಿಯಾದ ಸ್ಥಳವನ್ನೂ ಸಂದರ್ಶಿಸಿದರು.

ರಾಜಘಾಟದಲ್ಲಿ ತಾ. ೩೦ಕ್ಕೆ ಸರ್ವೋದಯ ದಿನಾಚರಣೆ ಸುವ್ಯವಸ್ಥಿತವಾಗಿ ಜರಗಿತು. ಪ್ರಚಂಡ ಜನ ಸಮ್ಮರ್ದ ನೆರೆದಿತ್ತು. ಮಂತ್ರಿಗಳೂ ರಾಯಭಾರಿಗಳೂ ಕಾಶ್ಮೀರ ಮಹಾರಾಜ ಮಹಾರಾಣಿಯವರೂ ಮಹಾತ್ಮರ ಸಮಾಧಿಗೆ ಪೂಮಾಲೆಗಳನ್ನು ಅರ್ಪಿಸಿದರು.

ದಿಲ್ಲಿ ಕರ್ನಾಟಕ ಸಂಘದವರು ಏರ್ಪಡಿಸಿದ್ದ ಗಾಂಧೀ ಪುಣ್ಯತಿಥಿಯ ಕಾರ್ಯಕ್ರಮದಲ್ಲಿ ಅಧ್ಯಕ್ಷಸ್ಥಾನದಿಂದ ಮಾತಾಡುತ್ತ ಸುದ್ದಿ-ಆಕಾಶವಾಣಿ ಮಂತ್ರಿ ಮಾನ್ಯ ರಂ. ರಾ. ದಿವಾಕರರು ಗಾಂಧೀಜಿಯನ್ನು ಕ್ರಿಸ್ತ ಮತ್ತು ಸಾಕ್ರೇಟೀಸರಿಗೆ ಹೋಲಿಸಿ ಅವರ ಸತ್ಯಸ್ಫೂರ್ತಿಗಳ ಸಂದೇಶ ನಮಗೆ ಚೈತನ್ಯದಾಯಕವಾಗುವದೆಂದರು.

ಭಾರತ ಸರಕಾರದವರು ಒಕ್ಕಲತನ ಅಭಿವೃದ್ಧಿಗಾಗಿ ಅಂತರರಾಷ್ಟ್ರೀಯ ಬ್ಯಾಂಕಿನಿಂದ ಪಡೆಯಲಿರುವ ೧೫ ಕೋಟಿ ರೂಪಾಯಿ ಸಾಲದ ಒಂದಂಶವನ್ನು ವಿನಿಯೋಗಿಸಿ ೧೦೦೦ ಭಾರವಾದ ಹಾಗು ೧೪೦೦೦ ಹಗುರಾದ ಟ್ರ್ಯಾಕ್ಟರುಗಳನ್ನು ಕೊಳ್ಳಲಿರುವರು. ಇದರಿಂದ ೬೨ ಲಕ್ಷ ಎಕರೆ ಪಡಭೂಮಿ ಸಾಗುವಳಿಯಾಗಿ ೨೦ ಲಕ್ಷ ಟನ್ ಧಾನ್ಯ ಬೆಳೆ ಹೆಚ್ಚಬಹುದೆಂದು ಅಂದಾಜಿದೆ.

ಹಿಂದೀ ಸೈನ್ಯದಲ್ಲಿರುವ ಜಾತೀಯ ಹಾಗು ವರ್ಗೀಯ ಭೇದಗಳನ್ನು ತೆಗೆದುಹಾಕಿ ಅದರಲ್ಲಿ ಭಾರತದ ಸಕಲ ರಾಷ್ಟ್ರೀಯರಿಗೂ ಪ್ರಾತಿನಿಧ್ಯ ದೊರೆಯುವಂತೆ ಮಾಡುವ ಉದ್ದೇಶದಿಂದ ಸೈನ್ಯಭರ್ತಿಯಲ್ಲಿನ ಜಾತೀಯ ಪ್ರಮಾಣವನ್ನು ಕಿತ್ತೊಗೆಯಲು ಭಾರತ ಸರಕಾರ ನಿರ್ಧರಿಸಿದೆ.

ಸಂಬಳ ಸಮಿತಿಯ ಸೂಚನೆಗಳನ್ವಯ ತುಟ್ಟಿಭತ್ತೆ, ಸಂಬಳ ಪ್ರಮಾಣದ ಪುನರ್ವಿಮರ್ಶೆ ಮೊದಲಾದ ಬೇಡಿಕೆಗಳನ್ನು ನೆರವೇರಿಸದಿದ್ದರೆ ಮಾರ್ಚ ೯ ರಿಂದ ಸಂಪು ಹೂಡುವದಾಗಿ ೪೦ ಸಾವಿರ ಸದಸ್ಯರುಳ್ಳ ಅಂಚೆ ತಂತಿ ಕೆಲಸಗಾರ ಸಂಘದವರು ಸರಕಾರಕ್ಕೆ ನೋಟೀಸು ಕೊಟ್ಟಿದ್ದಾರೆ.

ಯು. ರಾ. ಸಂಘದ ಕಾಶ್ಮೀರ ಸಮಿತಿ ಇದೇ ತಿಂಗಳಲ್ಲಿ ದಿಲ್ಲಿಗೆ ಬರಲಿದೆ.

ಭಾರತದಲ್ಲಿ ಬ್ರಿಟಿಶ ರಾಯಭಾರಿಗಳಾದ ಯು ನಿನ್ ಅವರು ಗಾಂಧೀ ಪುಣ್ಯತಿಥಿಯ ನಿಮಿತ್ತ ರಂಗೂನ ಆಕಾಶವಾಣಿಯಲ್ಲಿ ಮಾಡಿದ ಭಾಷಣದಲ್ಲಿ ಗಾಂಧೀಜಿ ಅವತಾರ ಪುರುಷರೆಂದೂ ಅವರ ಸತ್ಯ ಅಹಿಂಸಾ ತತ್ವಗಳು ಬೌದ್ಧ ಧರ್ಮಕ್ಕೆ ಅನುಗುಣವಾಗಿರುವದರಿಂದ ಅವರ ಬಗ್ಗೆ ಬ್ರಹ್ಮೀಯರ ಆದರವೂ ಹೆಚ್ಚಿದೆಯೆಂದೂ ಹೇಳಿದರು.

ರಾಷ್ಟ್ರೀಯ ಸ್ವಯಂಸೇವಕ ಸಂಘದ "ಗುರೂಜಿ" ಶ್ರೀ ಗೋಳವಲಕರರು ತಮ್ಮ ಚಳವಳಿಯನ್ನು ಹಿಂತೆಗೆದುಕೊಂಡಿರುವದರಿಂದ ಮುಂದಿನ ವಿಚಾರವಿನಿಮಯಕ್ಕಾಗಿ ಅವರನ್ನು ಇಲ್ಲಿಗೆ ಕರೆತರಲಾಗಿದೆಯೆಂದು ಹಬ್ಬಿದ ಸುದ್ದಿಯನ್ನು ನಿರಾಕರಿಸಲಾಗಿದೆ. ಸಂಘವು ಇನ್ನು ಗುಪ್ತ ಚಟುವಟಿಕೆಗಳನ್ನು ನಡೆಸದೆ ತನ್ನ ಕಾರ್ಯಕ್ರಮವನ್ನು ಬಹಿರಂಗಪಡಿಸಿದರೆ ಮಾತ್ರ ಸೆರೆಯಲ್ಲಿರುವ ಶಾಸನಭಂಜಕರನ್ನು ಬಿಡುಗಡೆ ಮಾಡುವದಾಗಿ ಸರಕಾರ ಸ್ಪಷ್ಟಗೊಳಿಸಿದೆ. ಆದರೆ ವಿದ್ಯಾರ್ಥಿಗಳು ಭಾವನಾ ಪ್ರಧಾನರಾಗಿ ಚಳವಳಿಯಲ್ಲಿ ಸೇರಿದ್ದರಿಂದ ಅವರ ಜೀವನವನ್ನು ಕೆಡಿಸಬಾರದೆಂದು ಅವರಿಗೆ ಪರೀಕ್ಷೆಗಳಿಗೆ ಕೂಡಲು ಅನುಕೂಲವಾಗುವಂತೆ ಅನೇಕ ಪ್ರಾಂತಗಳಲ್ಲಿ ಅವರ ಬಿಡುಗಡೆಯಾಗಿದೆ.

ಮಧ್ಯಪ್ರಾಂತ

ಹಿಂದೀ ಸಾಗರೋತ್ತರ ವಿಮಾನ ಕಂಪನಿಯವರು ಭಾರತ ಸರಕಾರದ ಒಪ್ಪಿಗೆಯಿಂದ ಪ್ರಾರಂಭಿಸಿದ ರಾತ್ರಿಯಲ್ಲಿ ಟಪಾಲನ್ನು ವಿಮಾನ ಮೂಲಕ ಸಾಗಿಸುವ ಯೋಜನೆಯನ್ನು ನಾಗಪುರದಲ್ಲಿ ಗವರ್ನರ ಮಂಗಲದಾಸ ಪಕ್ವಾಸಾ ಅವರು ತಾ. ೩೦ ಕ್ಕೆ ಉದ್ಘಾಟಿಸಿದರು. ಮುಂಬಯಿ, ಮದ್ರಾಸ, ಕಲಕತ್ತಾ ಮತ್ತು ದಿಲ್ಲಿಗಳಿಂದ ನಾಗಪುರಕ್ಕೆ ಮತ್ತು ತಿರುಗಿ ಆಯಾ ಸ್ಥಳಗಳಿಗೆ ರಾತ್ರಿಕಾಲದಲ್ಲಿ ಟಪಾಲನ್ನು ವಿಮಾನದಲ್ಲಿ ಒಯ್ಯಲಾಗುವದು.

ವರ್ಧಾದಲ್ಲಿ ಡಾ. ರಾಜೇಂದ್ರ ಪ್ರಸಾದರ ಅಧ್ಯಕ್ಷತೆಯಲ್ಲಿ ಸೇರಿದ ಜಗತ್ತಿನ ಶಾಂತಿವಾದಿಗಳ ಪೀಠಿಕಾ ಸಭೆಯಲ್ಲಿ ಇದೇ ಡಿಸೆಂಬರದಲ್ಲಿ ಶಾಂತಿ ನಿಕೇತನ (ಬಂಗಾಲ)ದಲ್ಲಿ ಜಾಗತಿಕ ಶಾಂತಿ ವಾದಿಗಳ ಮಹಾ ಸಭೆಯನ್ನು ಸೇರಿಸಬೇಕೆಂದು ನಿರ್ಣಯಿಸಲ್ಪಟ್ಟಿತು. ಪ್ರಸಿದ್ಧ ಭೌತ ಶಾಸ್ತ್ರಜ್ಞರಾದ ಪ್ರೊ. ಅಲ್ಬರ್ಟ ಐನಸ್ಟೀನರು ಈ ಸಭೆಗೆ ಕಳಿಸಿದ ಸಂದೇಶದಲ್ಲಿ ಪಾಶವೀ ಶಕ್ತಿಯನ್ನೆದುರಿಸಲು ಗಾಂಧೀಜಿಯ ಅಹಿಂಸಾ ಮಾರ್ಗವೊಂದೇ ಮಾರ್ಗವಾಗಿರುವದರಿಂದ ಅದನ್ನು ಸ್ವೀಕರಿಸುವಂತೆ ಕಾಲ ಮಿಂಚಿಹೋಗುವ ಮೊದಲೇ ಜನರ ಮನವೊಲಿಸೋಣವೆಂದು ಹೇಳಿದ್ದಾರೆ.

ಮದ್ರಾಸ

ರೇಲ್ವೆ ನೌಕರರ ಸಂಪು ಅನ್ಯಾಯದ್ದಾಗಿದೆಯೆಂದೂ ಸರಕಾರದವರು ಅವರ ಬೇಡಿಕೆಗಳನ್ನು ಪೂರೈಸಲು ಶಕ್ತಿ ಮೀರಿ ಪ್ರಯತ್ನಿಸಿದ್ದಾರೆಂದೂ ರೇಲ್ವೆ ಮಂತ್ರಿ ಶ್ರೀ ಸಂತಾನಂ ಅವರು ಮದುರೆಯಲ್ಲಿ ರಾಜಕೀಯ ಪರಿಷತ್ತಿನಲ್ಲಿ ಸಾರಿದರು.

ಮದ್ರಾಸಲ್ಲಿ ಪ್ರಾಂತದ ಹಿಂದೂ ದೇವಾಲಯಗಳಲ್ಲಿ ಪ್ರಾಣಿಬಲಿಗೆ ಪ್ರತಿಬಂಧ ಹಾಕುವ ಅಧಿಕಾರೇತರ ಮಸೂದೆ ಮೇಲ್ಮನೆಯಲ್ಲಿ ಪಾಸಾಗಿದೆ.

ಮದ್ರಾಸ್ ಸಂಸ್ಥಾನದ ಜನಸಂಖ್ಯೆ ೧೯೪೧ ರಿಂದೀಚೆಗೆ ೩೮ ಲಕ್ಷ ಹೆಚ್ಚಿದ್ದು ಈಗ ೫,೦೫,೪೫,೭೬೪ ಕ್ಕೆ ಮುಟ್ಟಿದೆಯೆಂದು ಮೇಲ್ಮನೆಯಲ್ಲಿ ಆಹಾರ ಮಂತ್ರಿ ಡಾ. ರಾಜನ್ನರು ತಿಳಿಸಿದರು. ಆಹಾರ ಉತ್ಪಾದನೆ ಮತ್ತು ಪೂರೈಕೆಯ ವ್ಯವಸ್ಥೆಯಲ್ಲಿ ಈ ಹೆಚ್ಚಳವನ್ನು ಗಮನದಲ್ಲಿರಿಸಿಕೊಳ್ಳಲಾಗಿದೆಯಂತೆ.

ಮದ್ರಾಸ್ ಪ್ರಾಂತದಲ್ಲಿ ಅಂಕುಡೊಂಕ ಒಡ್ಡುಗಳೇ ಮೊದಲಾದ ಉಪಕ್ರಮಗಳಿಂದ ಆಹಾರ ಧಾನ್ಯದ ಉತ್ಪಾದನೆಯನ್ನು ಹೆಚ್ಚಿಸುವ ವಿಚಾರವನ್ನೊಳಗೊಂಡ ಮಸೂದೆಯನ್ನು ಶಾಸನ ಸಭೆಯು ಪರಿಶೀಲನ ಸಮಿತಿಗೆ ಒಪ್ಪಿಸಿದೆ. ಕುದುರೆ ಜೂಜಾಟವನ್ನು ಪ್ರತಿಬಂಧಿಸುವ ಮಸೂದೆಗೆ ಶಾಸನ ಸಭೆಯಂತೆ ಮೇಲ್ಮನೆಯೂ ಒಪ್ಪಿಗೆ ಕೊಟ್ಟಿದೆ.

ಯುಕ್ತ ಪ್ರಾಂತ

ಈ ವರೆಗೆ ಲಖನೌ ಆಕಾಶವಾಣಿ ಕೇಂದ್ರದ ಅಂಗವಾಗಿ ನಡೆಯುತಿದ್ದ ಅಲಹಾಬಾದ ಕೇಂದ್ರವನ್ನು ಚಿಕ್ಕಮಟ್ಟಿನ ಸ್ವತಂತ್ರ ಕೇಂದ್ರವಾಗಿ ಮಾರ್ಪಡಿಸಲಾಗಿದೆ.

ಲಖನೌ ವಿಶ್ವವಿದ್ಯಾಲಯದ ರಜತಮಹೋತ್ಸವ ನಿಮಿತ್ತ ವಿಶೇಷ ಪದವೀದಾನ ಸಮಾರಂಭದಲ್ಲಿ ಮುಖ್ಯ ಮಂತ್ರಿ ಪಂ. ಜವಾಹರಲಾಲ, ಕಾಶ್ಮೀರ ಮುಖ್ಯ ಮಂತ್ರಿ ಶೇಖ ಅಬ್ದುಲ್ಲಾ, ಮೌ. ಆಜಾದ, ಯು. ಪ್ರಾಂ. ಮುಖ್ಯ ಮಂತ್ರಿ ಗೋವಿಂದ ವಲ್ಲಭಪಂತ ಮೊದಲಾದ ೧೫ ಪ್ರಮುಖರಿಗೆ ಗೌರವ ಡಾಕ್ಟರ ಪದವಿ ಕೊಡಲಾಯಿತು.

ಅಮೇರಿಕೆಯ ಪ್ರಖ್ಯಾತ ಪ್ರಾಗತಿಕ ಪತ್ರಿಕೆಯಾದ "ನೇಶನ್"ನವರು ಎಪ್ರಿಲ ೧೭ಕ್ಕೆ ಏರ್ಪಡಿಸಿರುವ ಸತ್ಕಾರ ಕೂಟದಲ್ಲಿ ಏಶಿಯದ ಶಾಂತಿ ರಕ್ಷಣೆಯನ್ನು ಕುರಿತು ಭಾಷಣ ಮಾಡಲು ಪಂ. ನೆಹರೂ ಅವರಿಗೆ ಆಮಂತ್ರಣ ಕೊಟ್ಟಿದ್ದಾರೆ.

ದಿಲ್ಲಿಯಲ್ಲಿ ಮಹಾತ್ಮರ ಅಂತ್ಯಕ್ರಿಯೆಯಾದ ರಾಜಘಾಟನಲ್ಲಿ ಸರ್ವೋದಯ ಪ್ರದರ್ಶನವನ್ನು ತಾ. ೩೧ಕ್ಕೆ ಮುಖ್ಯ ಮಂತ್ರಿ ನೆಹರೂ ಅವರು ಪ್ರಾರಂಭಿಸಿದರು. ಪ್ರದರ್ಶನದಲ್ಲಿ ಮಹಾತ್ಮರ ಭಾವಚಿತ್ರ, ತೈಲ ಚಿತ್ರ, ಅವರ ಮತ್ತು ಅವರ ಬಗ್ಗೆ ಇತರರ ಗ್ರಂಥಗಳು ಪ್ರದರ್ಶಿಸಲ್ಪಟ್ಟಿವೆ.

ಬಂಗಾಲ ಅಸಾಮ

ಪೂರ್ವ ಪಾಕಿಸ್ತಾನದಿಂದ ಪಶ್ಚಿಮ ಬಂಗಾಲಕ್ಕೆ ೧,೦೨,೫೦,೦೦೦ ನಿರಾಶ್ರಿತರು ಕಳೆದ ಕೆಲ ತಿಂಗಳುಗಳಲ್ಲಿ ಬಂದಿರುವರೆಂದು ಮುಖ್ಯ ಮಂತ್ರಿ ಡಾ. ಬಿಧನಚಂದ್ರರಾಯರು ಹೇಳಿದ್ದಾರೆ.

ಕಲಕತ್ತೆಯ ವಿದ್ಯುತ್ ಕೆಲಸಗಾರರ ಸಂಘವನ್ನು ಉದ್ಘಾಟಿಸುತ್ತ ಆಚಾರ್ಯ ಕೃಪಲಾನಿಯವರು, ಕೆಲಸಗಾರರು ಆರ್ಥಿಕ ಕಾರಣಗಳಿಗಲ್ಲದೆ ರಾಜಕೀಯ ಕಾರಣಗಳಿಗೆ ಸಂಪು ಹೂಡತಕ್ಕದ್ದಲ್ಲವೆಂದೂ ಅವರು ಹೋರಾಟದಲ್ಲಿ ಗಾಂಧೀಜಿಯ ಸತ್ಯ ಅಹಿಂಸೆಯ ಮಾರ್ಗವನ್ನನುಸರಿಸಬೇಕೆಂದೂ ಉಪದೇಶಿಸಿದರು.

ಅಸಾಮ ಪ್ರಾಂತದ ತೆರವಾದ ಗವರ್ನರ ಪದಕ್ಕೆ ಪಾಕಿಸ್ತಾನದಲ್ಲಿ ನಮ್ಮ ಹೈಕಮಿಶನರರಾಗಿದ್ದ ಶ್ರೀ ಪ್ರಕಾಶರು ನೇಮಿಸಲ್ಪಟ್ಟಿದ್ದು ತಾ. ೧೫ ಕ್ಕೆ ಅವರು ಅಧಿಕಾರ ವಹಿಸುವರು.

"ಇಡಿ ರಾಷ್ಟ್ರಕ್ಕೆ ಮತ್ತು ಅದರ ಸಮಸ್ತ ಜನತೆಗೆ ಒಬ್ಬನೇ ಮನುಷ್ಯನು ಚೇತನ ಸ್ವರೂಪನಾಗಿರುವದು ಇತಿಹಾಸದಲ್ಲಿ ಅಪೂರ್ವ. ಆ ಶ್ರೇಯಸ್ಸು ಗಾಂಧಿಯವರೊಬ್ಬರದ" ಎಂದು ಭಾರತದ ಶಿಕ್ಷಣ ಮಂತ್ರಿ ಮೌ. ಅಜಾದರು ಸರ್ವೋದಯ ದಿನದಂದು ಕಲಕತ್ತೆಯಲ್ಲಿ ಹೇಳಿದರು. ಅವರ ಹಸ್ತದಿಂದ ಅಂದು ಸರಕಾರಿ ಭವನದಲ್ಲಿ ಮಹಾತ್ಮರ ಭಾವಚಿತ್ರದ ಅನಾವರಣವಾಯಿತು. ಮುಸ್ಲಿಮರು ಜಾತೀಯ ಭಾವನೆಗೆ ಸ್ವಲ್ಪವೂ ಎಡೆಗೊಡಬಾರದೆಂದೂ ಅವರು ಉಪದೇಶಿಸಿದರು.

ಸುಭಾಷಚಂದ್ರ ಬೋಸರು ಇನ್ನೂ ಜೀವಂತರಾಗಿರುವರೆಂದು ತಿಳಿಯಲು ತಮ್ಮ ಯುರೋಪ ಪ್ರವಾಸದಲ್ಲಿ ಆಧಾರಗಳು ಸಿಕ್ಕಿದವೆಂದೂ ಯೋಗ್ಯ ಕಾಲದಲ್ಲಿ ಅವರು ಪ್ರತ್ಯಕ್ಷರಾಗಬಹುದೆಂದೂ ಅವರ ಹಿರಿಯಣ್ಣ ಶರಚ್ಚಂದ್ರರು ಕಲಕತ್ತೆಯಲ್ಲಿ ಹೇಳಿದರು.

ಬಿಹಾರ

ಅನೇಕ ಪ್ರಾಂತಿಕ ಕಾಂಗ್ರೆಸ್ ಸಮಿತಿಗಳ ಬಿನ್ನಹದ ಮೇರೆಗೆ ಗಾಂಧೀ ಸ್ಮಾರಕ ನಿಧಿ ಸಮಿತಿಯ ಅಧ್ಯಕ್ಷರಾದ ಡಾ. ರಾಜೇಂದ್ರ ಪ್ರಸಾದರು ನಿಧಿ ಸಂಗ್ರಹದ ಅವಧಿಯನ್ನು ಇದೇ ಎಪ್ರಿಲ ೩೦ ರ ವರೆಗೆ ಬೆಳೆಸಿದ್ದಾರೆ.

ದಾಲಮಿಯಾ ನಗರದಲ್ಲಿ ಕಾಗದದ ಕಾರಖಾನೆಯ ವಿಭಾಗದಲ್ಲಿ ತಾ. ೨೮ ಕ್ಕೆ ನಡು ಹಗಲ್ಲಿ ಬೆಂಕಿ ಹತ್ತಿ ಬಹಳ ಹಾನಿಯಾಯಿತು. ತಾ. ೨೬ ಕ್ಕೆ ರದ್ದಿ ಕಾಗದದ ವಖಾರದಲ್ಲಿಯೂ ಬೆಂಕಿಯ ಅನರ್ಥವಾಗಿತ್ತು. ಈಚೆಗೆ ಕಾರಖಾನೆಯ ಕೆಲಸಗಾರರು ಹೂಡಿದ್ದ ಸಂಪು ಅಯಶಸ್ವಿಯಾದದ್ದಕ್ಕೂ ಇದಕ್ಕೂ ಸಂಬಂಧವಿದೆಯೆಂದು ತರ್ಕಿಸಲಾಗಿದೆ.

ಹಿಂದೀ ಸಂಸ್ಥಾನಗಳು

ರಾಜಕೋಟಿಯ ಪ್ರಸಿದ್ಧ ದ್ವಾರಕಾ ದೇವಾಲಯದಲ್ಲಿ ತಾ. ೩೧ ಕ್ಕೆ ಆಗಬೇಕಾಗಿದ್ದ ಹರಿಜನ ಪ್ರವೇಶವು ಕೆಲವರು ಆತಂಕವೊಡ್ಡಿದ್ದರಿಂದ ಸಾಧ್ಯವಾಗಲಿಲ್ಲ. ವಿರೋಧಕರ ಮನವೊಲಿಸುವ ಪ್ರಯತ್ನಗಳು ನಡೆದಿವೆ.

ಬಂಧನದಲ್ಲಿರುವ ಹೈದರಾಬಾದ ರಜಾಕಾರ ಸೇನಾಪತಿ ಕಾಸಿಮ ರಜವಿಯವರು ಮಿಲಿಟರಿ ಗವರ್ನರ ಚೌಧರಿಯವರಿಗೊಂದು ಪತ್ರಬರೆದು ಪಶ್ಚಾತ್ತಾಪ ವ್ಯಕ್ತಗೊಳಿಸಿದ್ದು, ಪಾಕಿಸ್ತಾನಕ್ಕೆ ಹೋಗಿ ಹಿಂದೂ ಮುಸ್ಲಿಂ ಐಕ್ಯ ಪ್ರಚಾರ ಮಾಡಲು ತಮಗೆ ಅವಕಾಶಕೊಡಬೇಕೆಂದು ಕೇಳಿಕೊಂಡಿದ್ದಾರೆಂದು ತಿಳಿಯುತ್ತದೆ. ಅವರಿಗೆ ತೀವ್ರವಾದ ಕರುಳಿನ ಬೇನೆ ಬಂದಿದ್ದು ಶಸ್ತ್ರಕ್ರಿಯೆಯನ್ನು ನಿರಾಕರಿಸಿರುವರೆಂದೂ ಹೇಳಲಾಗಿದೆ.

ಜೋಧಪುರದಲ್ಲಿ (ತಾ. ೨೫) ಭಾರತದ ಉಪಪ್ರಧಾನ ಸರದಾರ ವಲ್ಲಭಭಾಯಿಯವರು ಒಂದು ಭಾಷಣದಲ್ಲಿ, ರಾಜಮಹಾರಾಜರು ಕಾಲಧರ್ಮವನ್ನರಿತುಕೊಂಡು ಸಂಸ್ಥಾನಗಳ ಸಮೀಕರಣಕ್ಕೆ ಮುಂದಾದುದನ್ನು ಪ್ರಶಂಸಿಸಿದರಲ್ಲದೆ ರಜಪೂತ ಜಾಗಿರದಾರರೇ ಮೊದಲಾದ ಭೂಮಿಯೊಡೆಯರೂ ಕಾಲಮಾನವನ್ನರಿತುಕೊಂಡು ರೈತರೊಡನೆ ಯೋಗ್ಯವಾಗಿ ನಡೆದುಕೊಳ್ಳದಿದ್ದರೆ ಅವರು ಪಶ್ಚಾತ್ತಾಪಪಡಬೇಕಾದೀತೆಂದು ಎಚ್ಚರಿಕೆ ಕೊಟ್ಟರು.

ಹೈದರಾಬಾದದ ಗೌಳಿಗುಡ್ಡದ ಮುಸ್ಲಿಮ ನಿರಾಶ್ರಿತ ಶಿಬಿರದ ಮುಂದೆ ತಾ. ೩೦ ಕ್ಕೆ ೧೦೦ ಹುಡುಗರು ಮೆರವಣಿಗೆಯಲ್ಲಿ ಹೋಗುತಿದ್ದಾಗ ನಿರಾಶ್ರಿತರು ಅವರ ಮೇಲೇರಿ ಹೋದುದರ ಪರಿಣಾಮವಾಗಿ ನೆರೆದ ಜನರಿಗೂ ನಿರಾಶ್ರಿತರಿಗೂ ಜಗಳವುಂಟಾಗಿ ಗಲಭೆಯೆದ್ದುದರಿಂದ ತಾ. ೩೦ ಮತ್ತು ೩೧ ಕ್ಕೆ ಮಿಲಿಟರಿಯವರ ಗೋಳಿಬಾರಿನಿಂದ ಒಬ್ಬನು ಸತ್ತಿದ್ದು ಕೆಲವರಿಗೆ ಗಾಯವಾಗಿದೆ. ಕರ್ಫ್ಯೂ ಜಾರಿ ಮಾಡಲಾಗಿದೆ.

ವಾರದ ಭವಿಷ್ಯ

ಜ್ಯೋತಿಷಿ-- ಕೃಷ್ಣಶಾಸ್ತ್ರಿ ಭಿಡೆ ಭವಿಷ್ಯ ಕಥನ ಅಫೀಸ ಖಡೇಬಝಾರ, ಬೆಳಗಾವಿ

ಫೆಬ್ರುವರಿ ತಾ. ೭ ರಿಂದ ಫೆಬ್ರುವರಿ ೧೩ ರ ವರೆಗೆ

ಮೇಷ

ದೇಹಸೌಖ್ಯವೂ ಇದೆ, ತೋರಿಕೆಗೆ ಪ್ರಾಪಂಚಿಕ ಸುಖಕ್ಕೂ ಕೊರತೆಯಿಲ್ಲ. ಇವನಿಗೇನು ಧಾಡಿಯೆಂದು ಯಾರಾದರೂ ಕೇಳಬಹುದು. ಆದರೆ ಒಳಗಿನ ಗುಟ್ಟು ಶಿವನೇ ಬಲ್ಲ. ಒಳಗೊಳಗೆ ದಾಂಪತ್ಯದ ತಪ್ಪು ತಿಳಿವಳಿಕೆಯಿಂದ ತುಂಬ ಎದೆಗುದಿಯಲ್ಲಿ ಸಿಕ್ಕುವಿರಿ. ಉದ್ಯೋಗದಲ್ಲಿ ಧಾರಾಳ ಲಾಭ. ಆದರೆ ನಿಮ್ಮ ಪ್ರತಿಷ್ಠೆಗೆ ಧಕ್ಕೆ ತರುವಂಥ ತಂಟೆಯೇಳಬಹುದು. ಮೇಲಾಗಿ ಸ್ತ್ರೀಜನದ ವಿಷಯದಲ್ಲಿ ಹೊಲಸು ಮಾತುಗಳನ್ನಾಡಿದ ಅಪವಾದಕ್ಕೂ ಗುರಿಯಾಗುವಿರಿ. ವಾದಸ್ಪರ್ಧೆಗಳಲ್ಲಿ ಹಾವೂ ಸಾಯುವದಿಲ್ಲ ಕೋಲೂ ಮುರಿಯುವದಿಲ್ಲ. "ಆದರೆ ಒಂದು ದೊಡ್ಡ ಪ್ರಶ್ನೆಯಲ್ಲಿ ಯಶಕ್ಕಾಗಿ ನಿಮ್ಮ ಮಿತ್ರಶತ್ರುಗಳಲ್ಲಿ ತುರುಸಿನ ಎಳೆದಾಟವಾಗುವದು. ನಿಮ್ಮ ಸಸ್ಯ ಸಂಪತ್ತಿಗೂ ಮನೆಮಾರಿಗೂ ಹುಳು ಹುಪ್ಪಡಿಗಳ ಮತ್ತು ಕುಸಿದುಬೀಳುವ ಗಂಡಾಂತರ ಬರಬಹುದು, ಎಚ್ಚರಿಕೆ! ಪತ್ರವ್ಯವಹಾರ ಅನುಕೂಲ. ಅಶ್ವಿನಿಯ ಕೊನೆಯ ಮತ್ತು ಭರಣಿಯ ಮೊದಲಿನ ೩ ಚರಣಗಳು ತುಂಬ ಪ್ರಯತ್ನಶೀಲರಾಗಬೇಕು. ಸುದಿನಗಳು: ತಾ.೧೪, ೧೫, ೧೮, ೧೯.

ವೃಷಭ

ತಂದೆತಾಯಿಗಳಿಗೆ ಕ್ಲೇಶ ಆದರೆ ಉಳಿದವರೆಲ್ಲರಿಗೂ ಕ್ಷೇಮವೆ. ಪ್ರಾಪಂಚಿಕ ಸುಖವೂ ಸಮಾಧಾನಕರ. ಬಳಗದವರೊಡನೆ ಇಲ್ಲವೆ ನೆರೆಹೊರೆಯವರೊಡನೆ ನಿಷ್ಠುರ ಮಾಡಿಕೊಳ್ಳುವ ಪ್ರಸಂಗ ಬರಬಹುದಾದರೂ ತರ್ಕ, ಬುದ್ಧಿ ಶಕ್ತಿಗಳನ್ನು ಉಪಯೋಗಿಸಬೇಕಾದ ಕೆಲಸಗಳಲ್ಲಿ ಸೈ ಸೈ ಎನಿಸಿಕೊಳ್ಳುವಿರಿ. ಉದ್ಯೋಗದಲ್ಲಿ ಬೇರೆಲ್ಲ ಸರಿಯಾಗಿದ್ದರೂ ಪ್ರತಿಷ್ಠೆಗೆ ಕುಂದು ತರುವ ಸಮಾಚಾರ ಘಟಿಸಬಹುದು. ಮಕ್ಕಳು ಉನ್ನತಿಹೊಂದುವರು. ನಿಮ್ಮ ಮನಸು ಪಾರಮಾರ್ಥಿಕ ಜಿಜ್ಞಾಸೆಯ ಕಡೆಗೆ ಒಲಿಯಬಹುದು. ವಾದಸ್ಪರ್ಧೆಗಳಲ್ಲಿ ಗೆಲವು. ಪ್ರವಾಸಾದಿ ಕಾರ್ಯಗಳೂ ಹಿತ. ಕೃತ್ತಿಕೆಯ ೪ ನೆ ಮತ್ತು ರೋಹಿಣಿಯ ಮೊದಲ ೩ ಚರಣಗಳಿಗೆ ತೊಂದರೆ ಹೆಚ್ಚು ತಾ. ೧೬,೧೭,೨೦ ಅನುಕೂಲ.

ಮಿಥುನ

ಮಡದಿ ಮುನಿದ ಮೇಲೆ ಮನೆಯ ಸುಖ ಮಧ್ಯಮವೇ ಎಂದು ಬೇರೆ ಹೇಳಬೇಕಾಗಿಲ್ಲ. ನಿಮ್ಮ ಪುಣ್ಯಕ್ಕೆ ಅವಳ ಪ್ರಕೃತಿಯೊಂದು ಉಳಿದೆಲ್ಲರಿಗಿಂತ ನೆಟ್ಟಗಿರುತ್ತದೆ. ಉದ್ಯೋಗದಲ್ಲಿ ಬಯಸಿದಷ್ಟು ಸಿದ್ಧಿ. ಮೇಲಾಗಿ ಮುಂದೆ ನಿಮಗೆ ಅಸ್ತಿಪಾಸ್ತಿಯ ವಾರಸಾ ಹಕ್ಕು ದೊರಕಿಸಿಕೊಡಬಹುದಾದ ಮಾತುಕತೆಗಳ ಶ್ರೀಗಣ ಪ್ರಾರಂಭವಾಗುವ ಯೋಗವುಂಟು. ಮಿತ್ರಸುಖ ಉತ್ತಮ. ಅಸಾಧ್ಯ ಸಾಹಸದಲ್ಲಿ ಪ್ರವೃತ್ತರಾಗುವ ಹುಮ್ಮಸು. ವಾದ ಸ್ಪರ್ಧೆಗಳು ಮನಸಿನಂತೆ. ಪ್ರವಾಸ, ಭೆಟ್ಟಿ ಅನುಕೂಲ. ಮೃಗಶೀರ್ಷದ ೪ ನೆ ಮತ್ತು ಆರ್ದ್ರೆಯ ಮೊದಲಿನ ೩ ಚರಣಗಳಿಗೆ ಅಷ್ಟು ಹಿತಕಾಲವಲ್ಲ. ತಾ. ೧೪, ೧೫, ೧೮, ೧೯ ಅನುಕೂಲ ದಿನಗಳು.

ಕರ್ಕ

ನೀವೊಂದು ಹೇಳಿದರೆ ಹೆಂಡತಿ ಮಕ್ಕಳು ಬೇರೊಂದು ಹೇಳುವರು. ಆದರಿಂದ ಮನಸ್ಸು ಯಾವಾಗಲೂ ಅಸಂತುಷ್ಟ. ಸಂಬಳ ಹೆಚ್ಚುಬೇಡಿ ನೌಕರರು ಕೆಲಸದಲ್ಲಿ ಹರಕತ್ತು ಮಾಡುವರು. ಉದ್ಯೋಗದಲ್ಲಿ ಪ್ರಗತಿ ಅಷ್ಟಕ್ಕಷ್ಟೆ. ಆದರೆ ಲಾಭಕ್ಕೆ ತೊಂದರೆಯಿಲ್ಲ. ಆದರೆ ಕೆಲಸಕ್ಕೆ ಬಾರದ ವಿಷಯಗಳಲ್ಲಿ ಸಿಕ್ಕಾಬಟ್ಟೆ ಖರ್ಚುಮಾಡಿ ಹೆಂಡತಿ ನಷ್ಟಮಾಡುವಳು. ಮಿತ್ರಸುಖ ಅನುಕೂಲವಾದರೂ ಶತ್ರುವಿನ ಕೈಯಲ್ಲಿ ಸೋಲುವಿರಿ. ಪತ್ರವ್ಯವಹಾರದಿಂದ ಕೆಲಸ ಬಗೆಹರಿಯುವದು. ಪುಷ್ಯದ ೪ ನೆ ಮತ್ತು ಅಶ್ಲೇಷದ ಮೊದಲ ೩ ಚರಣಗಳಿಗೆ ಇದ್ದದ್ದರಲ್ಲಿ ಒಳಿತು. ತಾ. ೧೬, ೧೭,೨೦ ಅನುಕೂಲ ದಿನಗಳು.

ಸಿಂಹ

ಪ್ರಕೃತಿ ನೆಟ್ಟಗಿದ್ದರೂ ಮನಸಿಗೆ ಮಾತ್ರ ಸುಖವಿಲ್ಲ. ಹೆಂಡತಿ ಮಾತುಮಾತಿನಲ್ಲಿ ನಿಮ್ಮ ಹೀನೈಸಿ ನೋಯಿಸುವಳು. ಉದ್ಯೋಗದಲ್ಲಿ ಲಾಭಕ್ಕೆ ಸೊನ್ನೆ. ಆದರೂ ನಾಳಿನ ಲಾಭದ ಆಸೆಯಿಂದ ಇಂದು ಕೈಬಿಟ್ಟು ವೆಚ್ಚಮಾಡಿ ಪೆಚ್ಚರಾಗುವಿರಿ. ನಿಮ್ಮ ಮಿತ್ರರೇ ಹೊಟ್ಟೆಕಿಚ್ಚಿನಿಂದ ನಿಮ್ಮ ಮೇಲೆ ಚಾಡಿಹೇಳುವರು. ವಾದಸ್ಪರ್ಧೆಗಳಲ್ಲಿ ಮಧ್ಯಮ. ಪ್ರವಾಸ ಸುಖಕರ. ಭೆಟ್ಟಿ ಮತ್ತು ಪತ್ರವ್ಯವಹಾರ ತೊಂದರೆಯದು. ಮಘೆಯ ೪ ನೆ ಮತ್ತು ಪೂರ್ವದ ಮೊದಲನೆ ೩ ಚರಣಗಳಿಗೆ ತೊಂದರೆ ಮತ್ತಷ್ಟು ಹೆಚ್ಚು. ತಾ. ೧೬,೧೭,೧೮,೧೯ ಅನುಕೂಲ.

ಕನ್ಯಾ

ಮಕ್ಕಳೊಡನೆ ಮತಭೇದವಾಗುವ ಮಾತು ಬಿಟ್ಟರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖಕ್ಕೆ ತೊಂದರೆಯಿಲ್ಲ. ದಾಯಾದ್ಯರು ತಮ್ಮ ಹಕ್ಕುಗಳ ವಿಷಯದಲ್ಲಿ ನಿಮ್ಮನ್ನು ಪೀಡಿಸಬಹುದು. ಉದ್ಯೋಗದಲ್ಲಿ ಲಾಭಕ್ಕೆ ಶನಿವಾರವೇ ಆದರೂ ಪ್ರತಿಷ್ಠೆ ಚನ್ನಾಗಿರುವದು. ವಾದ ಸ್ಪರ್ಧೆಗಳಲ್ಲಿ ವಿರೋಧಿಗೆ ಎರಡು ಕಣ್ಣು ಹೋದರೆ ನಿಮ್ಮ ಕಣ್ಣುಗಳಲ್ಲಿ ಒಂದಾದರೂ ಹೋಗುವದು. ಮಿತ್ರರಲ್ಲಿ ವಿರೋಧ. ಮನೋರಂಜನೆಯ ಯೋಗವಿದೆ. ಪತ್ರವ್ಯವಹಾರದಿಂದ ಕೆಲಸ ಸಾಧಿಸುವದು. ಉತ್ತರೆಯ ೪ ನೆ ಮತ್ತು ಹಸ್ತದ ಮೊದಲ ೩ ಚರಣಗಳಿಗೆ ತೊಂದರೆ ಅಧಿಕ. ತಾ.೧೬, ೧೭, ೧೮, ೧೯ ಅನುಕೂಲ.

ತುಲಾ

ಇಬ್ಬರ ಪ್ರಕೃತಿಯೂ ಚನ್ನಾಗಿದ್ದರೂ ದಂಪತಿಗಳ ಮುಖ ಒಬ್ಬರದು ಇತ್ತ, ಇನ್ನೊಬ್ಬರದು ಅತ್ತ. ಮಕ್ಕಳೂ ದುರ್ವರ್ತನೆಗೆ ಬೀಳಬಹುದು. ಅಂತೂ ಪ್ರಾಪಂಚಿಕ ಸುಖದಲ್ಲಿ ತುಂಬ ಕೊರತೆ. ವಾಹನ ಸುಖ ಆಗಾಗ್ಗೆ ಲಭಿಸಬಹುದು. ಉದ್ಯೋಗದಲ್ಲಿ ವಿಶೇಷ ಹಿಗ್ಗೂ ಇಲ್ಲ ಕುಗ್ಗೂ ಇಲ್ಲ. ಆದರೆ ಎಲ್ಲ ಕಾರ್ಯದಲ್ಲಿಯೂ ಧಾಂದಲೋಧಾಂದಲೆ. ವಾದ ಸ್ಪರ್ಧೆಗಳಲ್ಲಿ ಅನುಕೂಲ. ಮಿತ್ರರಲ್ಲಿ ವಿರೋಧ. ಅವರಲ್ಲಿ ಒಬ್ಬನ ವಿಯೋಗವಾಗುವ ಸಂಭವವುಂಟು. ಪ್ರವಾಸ, ಭೆಟ್ಟಿಗಳಿಗಿಂತ ಪತ್ರವ್ಯವಹಾರ ಲೇಸು. ಚಿತ್ರೆಯ ೪ ನೆ ಮತ್ತು ಸ್ವಾತಿಯ ಮೊದಲನೆ ೩ ಚರಣಗಳಿಗೆ ಪ್ರಯತ್ನಪಟ್ಟರೆ ಮಾತ್ರ ಸಿದ್ಧಿ ದೊರಕೀತು. ತಾ. ೧೪, ೧೮, ೧೯ ಒಳಿತು.

ವೃಶ್ಚಿಕ

ಸ್ವಂತ ಪ್ರಕೃತಿಗಿಂತ ಹೆಂಡತಿ ಮಕ್ಕಳದು ಸೌಖ್ಯ. ಮನೆಯಲ್ಲಿ ನೆಮ್ಮದಿ ಧಾರಾಳ. ಆದರೆ ಬಂಧುಬಳಗದವರೂ ನೆರೆಹೊರೆಯವರೂ ಸುಳ್ಳುಸುಳ್ಳೇ ಅಪವಾದ ಹುಟ್ಟಿಸಿ ಕಾಡಲು ಯತ್ನಿಸುವರು. ಎಲ್ಲಕ್ಕಿಂತ ಹೆಚ್ಚಾಗಿ ನೀವು ಎಚ್ಚರ ವಹಿಸಬೇಕಾದ ವಿಷಯವೆಂದರೆ, ನಿಮಗೆ ವಾಹನಗಳಿಂದ ಅಪಾಯ ಸಂಭವಿಸುವ ಭಯವಿದೆ. ಉದ್ಯೋಗದಲ್ಲಿ ಲಾಭ ಚನ್ನಾಗಿದ್ದರೂ ಪ್ರತಿಷ್ಠೆಗೆ ಮಸಿ ಬಳಿಯುವ ಸಂಗತಿಗಳು ಸಂಘಟಿಸಬಹುದಲ್ಲದೆ, ವರಿಷ್ಠರು ಅಥವಾ ಆಶ್ರಯದಾತರು ನಿಮ್ಮ ಮೇಲೆ ಕಾರಣಾಂತರಗಳಿಂದ ಮುನಿಯಬಹುದು. ಮಿತ್ರಸುಖ ಉತ್ತಮ. ವಾದ ಸ್ಪರ್ಧೆಗಳಲ್ಲಿ ಯಶ. ಪ್ರವಾಸಾದಿ ಕಾರ್ಯಗಳು ಯಥಾಭಿಮತ. ಅನುರಾಧೆಯ ೪ ನೆ ಮತ್ತು ಜ್ಯೇಷ್ಠದ ಮೊದಲ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೧೪, ೧೫, ೧೬, ೧೭ ಉತ್ತಮ.

ಧನು

ಮನೆಯಲ್ಲಿ ಎಲ್ಲರ ಪ್ರಕೃತಿಯೂ ಚನ್ನಾಗಿರುತ್ತದೆ. ಆದರೆ ಆಗಾಗ್ಗೆ ರಾಣಿ ಸ್ವಲ್ಪ ನಿಮ್ಮ ಮೇಲೆ ಕೋಪಿಸಿಕೊಳ್ಳುವಳು. ಉಳಿದ ಅಂಶದಲ್ಲಿ ಪ್ರಾಪಂಚಿಕ ಸುಖ ಬಯಸಿದಂತೆ. ಉದ್ಯೋಗದಲ್ಲಿ ಪ್ರಗತಿ ಪರಿಮಿತಗಳಿಂದ ಕೂಡಿರುವದು. ಸಹೋದ್ಯೋಗಿಗಳು ಅಡ್ಡಗಾಲು ಹಾಕಲು ನೋಡುವರು. ಲಾಭ ಚೆನ್ನಾಗಿರುವದು. ವಾದಸ್ಪರ್ಧೆಗಳಲ್ಲಿ ಎರಡೂ ಪಕ್ಷಗಳು ಸೋತು ಸುಣ್ಣಾಗುವವು. ಸ್ಥಾವರದಲ್ಲಿ ಅನುಕೂಲವಾದ ಮಾತುಕತೆಗಳು. ಭೆಟ್ಟಿ ಪತ್ರವ್ಯವಹಾರ ಎರಡೂ ಹಿತಾವಹ, ಪ್ರವಾಸ ಒಳಿತಲ್ಲ. ಮೂಲದ ೪ ನೆ ಮತ್ತು ಪೂರ್ವಾಷಾಢದ ಮೊದಲ ೩ ಚರಣಗಳಿಗೆ ತೊಂದರೆಯಿಲ್ಲದೆ ಗೆಲವಿಲ್ಲ. ತಾ. ೧೬, ೧೭, ೧೮, ೧೯ ಉತ್ತಮ.

ಮಕರ

ಎಲ್ಲ ಇದ್ದೂ ಒಂದಿಲ್ಲವೆಂಬಂತೆ, ನಿಮ್ಮೆಲ್ಲರ ಪ್ರಕೃತಿ ಚನ್ನಾಗಿದ್ದು ಮಕ್ಕಳಿಂದ ಸಮಾಧಾನಕರ ಕಾರ್ಯಗಳು ಜರಗಿದರೂ ಬೇರೆ ಕಾರಣಗಳಿಂದ ನಿಮ್ಮ ಮನಸ್ಸು ವಿಕ್ಷಿಪ್ತವಾಗಿಯೆ ಇರುವದು. ಉದ್ಯೋಗದಲ್ಲಿ ಉಳಿದುದು ಸರಿ, ಲಾಭ ಮಾತ್ರ ಕಡಿಮೆ. ನಿರರ್ಥಕ ವೆಚ್ಚಗಳು. ಮಿತ್ರರಲ್ಲಿ ವಿರೋಧ, ಬಳಗದವರಲ್ಲಿ ಇಲ್ಲವೆ ನೌಕರರಲ್ಲಿ ಒಬ್ಬರ ಅಗಲಿಕೆ ಒದಗಬಹುದು. ವಾದ ಸ್ಪರ್ಧೆಗಳಲ್ಲಿ ಅಷ್ಟಕ್ಕಷ್ಟೆ. ಪ್ರವಾಸಾದಿ ಕಾರ್ಯಗಳು ನಿರ್ವಿಘ್ನ. ಉತ್ತರಾಷಾಢದ ೪ ನೆ ಮತ್ತು ಶ್ರವಣದ ಮೊದಲ ೩ ಚರಣಗಳಿಗೆ ತುಂಬ ಉಪದ್ರವ. ತಾ. ೧೬, ೧೭, ೧೮, ೧೯ ಅನುಕೂಲ.

ಕುಂಭ

ಸ್ವಂತದ ಮತ್ತು ಹೆಂಡತಿಯ ಪ್ರಕೃತಿಯಲ್ಲಿ ಆಗಾಗ್ಗೆ ಕಸರು, ಪರಸ್ಪರ ಅನ್ಯೋನ್ಯದಲ್ಲಿಯೂ ಕಸರು. ಆದರೆ ಉಳಿದ ಪ್ರಾಪಂಚಿಕ ಸುಖಗಳಿಗೆ ಕೊರತೆಯಿಲ್ಲ. ಉದ್ಯೋಗದಲ್ಲಿ ಪ್ರಗತಿ ಕಡಿಮೆ, ಪ್ರತಿಷ್ಠೆಗೆ ಅನೇಕ ಕುಂದುಗಳು, ಲಾಭ ಮಾತ್ರ ತುಂಬ. ಆದರೆ ವೆಚ್ಚಕ್ಕೂ ಗಡಿಮಿತಿಯಿಲ್ಲ. ವಾದ ಸ್ಪರ್ಧೆಗಳಲ್ಲಿ ನಾಮೇಲು ತಾಮೇಲೆಂದು ಮೇಲಾಟ ನಡೆದರೂ ಪರಿಣಾಮ ಮಾತ್ರ ಅನಿಶ್ಚಿತ. ಮಿತ್ರಸುಖ ಚನ್ನಾಗಿದೆ. ಪ್ರವಾಸಾದಿ ಕಾರ್ಯಕ್ಕೆ ಅನುಕೂಲ ಕಾಲವಲ್ಲ. ಧನಿಷ್ಠೆಯ ೪ ನೆ ಮತ್ತು ಶತತಾರೆಯ ಮೊದಲ ೩ ಚರಣಗಳಿಗೆ ತುಂಬ ತೊಡಕು. ತಾ. ೧೮, ೧೯, ೨೦ ಅನುಕೂಲ.

ಮೀನ

ಮಕ್ಕಳ ಉಪದ್ವ್ಯಾಪಗಳಿಂದ ಮನಸ್ಸು ಸಂತಪ್ತವಾದೀತು ಸ್ತ್ರೀಸುಖ ನೆಟ್ಟಗಿದ್ದರೂ ಇತರ ಪ್ರಾಪಂಚಿಕ ಸುಖಕ್ಕೆ ಕೇಡುಗಾಲವೇ. ಉದ್ಯೋಗದಲ್ಲಿ ಲಾಭಕ್ಕೆ ಬಡತನವಾದರೂ ಪ್ರತಿಷ್ಠೆಗೆ ಪ್ರಸನ್ನ ಕಾಲ. ಅಲ್ಲಸಲ್ಲದ ವಿತಂಡ ವಾದಗಳಲ್ಲಿ ಸಿಲುಕುವಿರಿ. ವಾದಸ್ಪರ್ಧೆಗಳಲ್ಲಿ ಬಹಳ ವೆಚ್ಚದಿಂದ ತ್ರಾಸಪಟ್ಟು ಜಯಗಳಿಸುವಿರಿ. ಅನಿರೀಕ್ಷಿತ ಲಾಭದ ಯೋಗವುಂಟು. ಭೆಟ್ಟಿ ಪತ್ರವ್ಯವಹಾರಗಳು ಯಶಸ್ವಿಯಾಗಬಹುದು. ಉತ್ತರಾಭಾದ್ರದ ೪ ನೆ ಮತ್ತು ರೇವತಿಯ ಮೊದಲ ೩ ಚರಣಗಳಿಗೆ ತೊಂದರೆ ಕಡಿಮೆ ತಾ. ೧೬, ೧೭, ೨೦ ಲೇಸು.

ಚಿಕ್ಕ ಕತೆ

(೨ನೆಯ ಪುಟದಿಂದ)

ಆದರೆ ಇಷ್ಟು ಮಾತ್ರ ನಾನು ಹೇಳಬಲ್ಲೆ. ನನ್ನ ಕಲೆಗಿಂತಲೂ ನನ್ನ ದೇಹ ನನಗೆ ಬಹಳ ಸಹಾಯ ಮಾಡಿದೆ. ಈ ದೇಹವಿಲ್ಲದಿದ್ದರೆ, ನನ್ನಲ್ಲಿರುವ ಇಂದಿನ ಈ ಕಲೆಯೂ ಇರುತ್ತಿರಲಿಲ್ಲ. ನಾಟ್ಯವನ್ನು ಪರಿಶುದ್ಧಾತ್ಮತೆಯಿಂದ ಕಲಿಯಲು ಇನ್ನೂ ನನ್ನ ಮನಸ್ಸು ಅಣಿಯಾಗಿದೆ. ಯಾವುದನ್ನೇ ಆಗಲಿ ತ್ಯಾಗ ಮಾಡಲು ನಾನು ಸಿದ್ಧಳಿದ್ದೇನೆ. ಕಲೆಗಾಗಿ.... ಕ...ಲೆ...ಗಾ...ಗಿ... !" ದೇವಿ ತನ್ನ ಕತೆಯನ್ನು ಮುಕ್ತಾಯಗೊಳಿಸಿದರು. ನಾವಿಬ್ಬರೂ ಬಹಳ ಹೊತ್ತು ತೆಪ್ಪಗೆ ಕುಳಿತೆವು. ಕೊನೆಗೆ ನಾನೇನೋ ಕಟುವಾಗಿಯೇ ನುಡಿದೆ: "ದೇವಿ, ನಿನಗೆ ಕಲೆಯೆಂಬುದೇ ತಿಳಿದಿಲ್ಲ. ನಿನ್ನ ಹೊಲಸು ಜೀವನದಲ್ಲಿ ಕಲೆ ಇರಲಾದೀತೇ? ಕಲೆಗೆ ಪರಿಶುದ್ಧತೆ ಬೇಕು, ಸ್ತ್ರಿಮಿತ ಬೇಕು, ಧ್ಯೇಯಬೇಕು. ಈ ಯಾವೂ ನಿನ್ನಲ್ಲಿಲ್ಲ. ಈ ನಿನ್ನ ಕಲಾ ಜೀವನ ಇನ್ನು ಸಾಕು. ನಾನೊಂದು ಸಲಹೆ ಕೊಡುತ್ತೇನೆ. ಅದನ್ನು ಒಪ್ಪುವಿಯಾ?" ಸರಿಯೆಂದು ತಲೆಯಾಡಿಸಿದಳು ದೇವಿ. ನಾನು ಮತ್ತೆ ಆಕೆಯನ್ನು ಪ್ರಶ್ನಿಸಿದೆ. "ಸಂಸಾರ ಜೀವನ ನಡೆಸಲು ಒಪ್ಪುವಿಯಾ?" ಆಶ್ಚರ್ಯಮಿಳಿತ ದನಿಯಿಂದ ದೇವಿಯೆಂದಳು, "ನಾನೇ? ಸಂಸಾರಿ? ನನ್ನನ್ನು ಹು..." "ಅದಕ್ಕೆಲ್ಲ ನನಗೆ ಬಿಡು ದೇವಿ" ಎಂದೆ. ಆಯಿತು, ಎಂದು ಮೇಲೆದ್ದಳು ದೇವಿ. ಆಕೆಯನ್ನು ಬೀಳ್ಕೊಟ್ಟೆ.

* * *

ಮರುದಿನ ರಾಜನ ಮನೆಗೆ ಹೋದೆ. ರಾಜ ತನ್ನ ಕೊಠಡಿಯಲ್ಲಿ ಕುಳಿತಿದ್ದ. ಸದ್ದಿಲ್ಲದೆ ಅವನ ಕೊಠಡಿಯನ್ನು ಹೊಕ್ಕೆ. ರಾಜ ಮೇಜಿನ ಮುಂದೆ ಕುಳಿತಿದ್ದ. ಅವನೆದುರಿಗೆ ನಾಟ್ಯ ಭಂಗಿಯಲ್ಲಿದ್ದ ದೇವಿಯ ಚಿತ್ರವೊಂದಿತ್ತು. ಅವನ ತುಟಿಗಳ ನಡುವಿದ್ದ ಸಿಗರೇಟಿನಿಂದ ಹೊಗೆ ಏಳುತ್ತಿತ್ತು. ನನ್ನನ್ನು ಕಾಣುತ್ತಲೇ ರಾಜ ಚಿತ್ರವನ್ನು ಬದಿಗಿಟ್ಟು ಮೇಲೆದ್ದು 'Come my dear boy, have a Cigarette' ಎಂದು ಸಿಗರೇಟೊಂದನ್ನು ಮುಂದೆ ನೀಡಿದ. ಸಿಗರೇಟನ್ನು ಹೊತ್ತಿಸಿ ಕುಳಿತ ನಾನು "ರಾಜ, ನಿನ್ನಲ್ಲಿ ನನ್ನದೊಂದು ಬೇಡಿಕೆಯಿದೆ, ಅದು ಅತಿ ಸೂಕ್ಷ್ಮವಾದದ್ದು ಹಾಗೂ ಘನವಾದದ್ದು. ನೀನು ನಡೆಸಿಕೊಡುವೆನೆಂದು ವಾಗ್ದಾನವಿತ್ತರೆ ಹೇಳುತ್ತೇನೆ" ಎಂದೆ. "ಏನೋ ಅದು?" ಎಂದ ರಾಜ. ಬಳಿಕ ನಾನೆಂದೆ, "ರಾಜ, ದೇವಿಯನ್ನು ನಿನ್ನ ಪತ್ನಿಯಾಗಿ ಸ್ವೀಕರಿಸು. ನಿನ್ನ ಸಂಪರ್ಕ ಆ ನೊಂದ ಜೀವಕ್ಕೆ ಶಾಂತಿ ಕೊಡಬಲ್ಲುದೆಂದು ನನಗೆ ತಿಳಿದಿದೆ" ರಾಜ ಅವಾಕ್ಕಾದ. ಆಶ್ಚರ್ಯದ ಛಾಯೆ ಅವನ ಮುಖದ ಮೇಲೆ ಪಸರಿಸಿತು. ಕೊನೆಗೆ ಮೇಲೆದ್ದು "ಬಾ ಪಾರ್ಕಿನ ಕಡೆ ಹೋಗೋಣ" ಎಂದ. ಇಬ್ಬರೂ ಪಾರ್ಕಿನತ್ತ ನಡೆದವು.

ಒಂದು ವಾರದ ಅನಂತರ ರಾಜ-ದೇವಿಯರ ವಿವಾಹ ಸಂಭ್ರಮದಿಂದ ನೆರವೇರಿತು. ಹಸೆಯ ಮೇಲೆ ಕುಳಿತಿದ್ದ ದೇವಿಯ ಕಣ್ಣುಗಳಿಂದ ಹನಿ ಮಿಡಿಯುತ್ತಿತ್ತು. ನಾನು ಹಿಂದಿನಿಂದ "ಸೈರಣೆ ತಂದುಕೋ ದೇವಿ" ಎಂದು ಸಮಾಧಾನಿಸುತ್ತಿದ್ದೆ.

ಮದುವೆಯಾಗಿ ಒಂದು ವಾರ ಕಳೆದಿತ್ತು. ದೇವಿ ನನ್ನನ್ನೂ ನನ್ನ ಪತ್ನಿಯನ್ನೂ ಅವರ ಮನೆಗೆ ಆಹ್ವಾನಿಸಿದ್ದಳು. ನಾನು- ಮನೋರಮೆ ಒಂದು ಸಂಜೆ ದೇವಿಯ ಮನೆಗೆ ಹೋದೆವು. ಮನೋರಮೆಗೆ ನನ್ನ ಚಿಕ್ಕಂದಿನ ಭಾವಚಿತ್ರವನ್ನು ತೋರಿಸಿ ದೇವಿ "ನಿಮ್ಮ ಪತಿ ಇಲ್ಲಿದ್ದಾರೆ ನೋಡಿ" ಎಂದಳು. ಅವರಿಬ್ಬರು ನಗುತ್ತಿರುವುದನ್ನು ಕಂಡು ನಾನು- ರಾಜ ಇಬ್ಬರೂ ನಗಹತ್ತಿದೆವು.

ದೇವಿಗೆ ಮತ್ತೊಂದು ಜನ್ಮ ಬೇಕಂತೆ, ಏಕೆ, ಗೊತ್ತೆ? ಕಲೆಗಾಗಿ... !

ಪುಸ್ತಕ ಪರಿಚಯ

[[illegible] -ಸಂ]

ಕೈಲಾಸಂ ನೆನಪು

ಬರೆದವರು: ಜಿ. ಪಿ. ರಾಜರತ್ನಂ, ಪ್ರಕಾಶಕರು: ಹಿಂದ್ ಕಿತಾಬ್ಸ್ ಲಿಮಿಟೆಡ್ ಬೊಂಬಾಯಿ ಬೆಂಗಳೂರು. ಪುಟ ೮೮, ಬೆಲೆ ೧ ರೂ ೪ ಆಣೆ.

ಜಿ. ಪಿ. ರಾಜರತ್ನಂ ಕೆಲವು ಕಾಲದವರೆಗೆ ಕೈಲಾಸಂ ಅವರ ಸಹವಾಸದಲ್ಲಿದ್ದು ಅವರ ಗುಣ, ನಡತೆಗಳನ್ನು ಈಗ ಜ್ಞಾಪಿಸಿಕೊಂಡು ಈ ಪುಸ್ತಕವನ್ನು ಬರೆದಿದ್ದಾರೆ. ಈ ಪುಸ್ತಕದಲ್ಲಿ ಕೈಲಾಸಂ ನೆನಪು, ಕೈಲಾಸಂ ಕವನಗಳು, ಕೈಲಾಸಂ ಕಾಗದಗಳು ಮತ್ತು ಕೈಲಾಸಂ ಕೀಚಕಾಂಬುಧಿ ಎಂಬುದಾಗಿ ನಾಲ್ಕು ವಿಭಾಗ ಗಳಿವೆ. ಕೈಲಾಸಂ ಮಾತುಗಳಲ್ಲಿ ಬರೀ ವಿನೋದ ತುಂಬಿದೇ ಅಲ್ಲದೆ ಸಮಾಜದ ನಿಜರೂಪವನ್ನು ತೋರಿಸುವ ಚಾತುರ್ಯವೂ ಕಟುಟೀಕೆಗಳೂ ಸೇರಿವೆ.

ಕೈಲಾಸಂ ನೆನಪಿನಲ್ಲಿ ಲೇಖಕರು ಕೈಲಾಸಂ ಒಡನಿದ್ದಾಗ ನಡೆದ ಘಟನೆಗಳನ್ನೂ ಕೈಲಾಸಂ ಅರಿದ ಕೆಲವು ಮಾತುಗಳನ್ನೂ ಇನ್ನೂ ಇತರ ವಿಷಯಗಳನ್ನೂ ತಿಳಿಸಿದ್ದಾರೆ.

"ತಿಪ್ಪೇರ್ ಹಳ್ಳಿ ಗೊತ್ತಿಲ್ವೆ ಸುಬ್ಬ್ಯಾ! Camera (ಕೆಮಿರಾ ಅಂತ ಹೆಸರು ಅವಳ್ಗೆ) ಆಹೊಂದು ಜಂತು ಸುಬ್ಬ್ಯಾ! ಪ್ರಾಣಿ! ಪ್ರಾಣಿ! ಹಿಂಭಾಗದ ಆವಳ್ಗೆ . . . ಹಿಂದೆ ನಿಂತ್ಕೊಂಡು ಬುರುಕಿ ಹಾಕ್ಕೊಂಡು ಜೆದರಿಸ್ತಾನಲ್ಲಾ, ಅವನ್ಗೆ ಎರಡು ಕಾಲು . . . ಪೆಟ್ಟಿಗೆಯ ಮೂರು, ಐದು! ಏಕಾಕ್ಷಿ ಕಣ್ರೊಂದೇ . . . ಅದರೆದುರಿಗೆ ಜನಗಳು ನಿಂತ್ಕೊಂಡು . . . ಸ್ವರೂಪನಾಶ್ನ ಮಾಡ್ಕೊಳ್ತಾರೆ . . ." ಎಂದು ಕೆಮಿರಾವನ್ನು ಅವರು ಟೀಕೆ ಮಾಡಿ ಹೇಳಿದ್ದಾರೆ. ಹೀಗೇ ಗ್ರಾಮೊಫೋನ್ ಮೊದಲಾದುವುಗಳ ಮೇಲೂ ಟೀಕೆಗಳಿವೆ ಇದನ್ನು ಓದುವಾಗ ತಮಾಷೆಯೆನಿಸಿದರೂ ಇದರ ಹಿಂದೆ ಕಟು ಟೀಕೆಯೂ ಅಡಗಿದೆ.

ಎರಡನೆಯ ವಿಭಾಗದಲ್ಲಿ ಕೈಲಾಸಂ ಬರೆದ ಕೆಲವು ಕವನಗಳನ್ನು ಕೊಟ್ಟಿದೆ. ಇವರು ಬರೆದ ಈ ಕವನಗಳಲ್ಲಿ ನಾಟಕದ ಗುಣ ಕಂಡು ಬರುತ್ತದೆ. ತಿಪ್ಪಾರ್ ಹಳ್ಳಿ, ಕೋಳೀಕೆರೆ ರಂಗಾ, ನಂಜೇ ನನ್ ಅಪರಂಜೀ, ಕಾಲೇಜ್ ಹೋದ ಸಂಬಾವ, ಚೋರನ ಭಾರ, ಅಲ್ಪಜ್ಞನ ಪದ, ಅರಿವು ಎಂಬ ಏಳು ಪದ್ಯಗಳಿವೆ. ತಿಪ್ಪಾರ್ ಹಳ್ಳಿಯೊಂಬುದರಲ್ಲಿ ಬೋರೇ ಗೌಡನೆಂಬವನು ಬೆಂಗಳೂರಿಗೆ ಬಂದದ್ದು, ಲಾಲ್ ಬಾಗ್‌ನಲ್ಲಿ ಹುಲಿನೋಡಿ ಬರೆ ಹಾಕಿದ ದೊಡ್ಡ ಬೆಕ್ಕು ಅಂತ ತಿಳಿದುಕೊಂಡ ಮಂಕುತನ, ಆ ಮೇಲೆ ಬಸವೀನ ಕರೆದುಕೊಂಡು ಮೈಸೂರಿಗೆ ವಿಜಯದಶಮಿಗೆ ಹೋಗಿ ಅವಳೊಡನೆ ಅಂಬಾರಿ ಏರಿ ತಿಪ್ಪಾರಳ್ಳಿಗೆ ಹೊರಟದ್ದು ಎಲ್ಲವೂ ಹಾಸ್ಯ ಭರಿತವಾಗಿದೆ. ಕಡೆಯ ಪದ್ಯ "ಅರಿವು" ಇದರಲ್ಲಿ ತಿಳಿ ಕನ್ನಡವನ್ನು ನುಡಿದರೇನು? ಚೆಂದದ ಚಿತ್ರಗಳನ್ನು ಬರೆದರೇನು? ಬೀಳಕಲ್ಲನ್ನು ಉಳಿಯಿಂದ ಕೆತ್ತಿದರೇನು? ತಿಳಿವಳಿಕೆಯೊಂಬುದಿಲ್ಲದಿದ್ದರೆ ಏನಿದ್ದರೂ ಎಲ್ಲವೂ ವ್ಯರ್ಥ ಎಂಬ ಸತ್ಯವನ್ನು ಎತ್ತಿ ತೋರಿದ್ದಾರೆ ಎಲ್ಲವೂ ಚೆನ್ನಾಗಿವೆ ಎಂದು ಧಾರಾಳವಾಗಿ ಹೇಳಬಹುದು.

ಮೂರನೆಯ ವಿಭಾಗದಲ್ಲಿ ಕೈಲಾಸಂ ಕಾಗದಗಳಿವೆ. ಎಲ್ಲವೂ ಸ್ವಾರಸ್ಯವಾಗಿವೆ. ಅವುಗಳನ್ನು ಜಿ. ಪಿ ರಾಜರತ್ನಂ ಅವರು ಕೈಲಾಸಂ ಸಾಯುವ ಸ್ವಲ್ಪ ದಿನಗಳ ಮುಂಚೆ ಯಾವಾಗ ಬೆಂಗಳೂರಿಗೆ ಬರುವಿರೆಂದು ಕಾಗದದಲ್ಲಿ ಕೇಳಿದ್ದಕ್ಕೆ ಅವರು ಬರೆದ ಉತ್ತರವೆಂದರೆ "ಕೆಂಪಾಂಬುಧಿ ಕೋ ಅಂತ ಕೈ ಬೀಸ್ತಿದೆ, ಬೊಬ್ಬೆ ಕಟ್ಟಿ ಬಾ ಅಂತ ಬೀಸಿ ಕರೀತದೆ." ಎಂದು. ಅವರು ಬರೆದಂತೆ ಅವರ ಅಂತ್ಯ ಯಾತ್ರೆಯೂ ಕೂಡ ಕೆಂಪಾಂಬುಧಿ ಬಳಿಯಲ್ಲಿರುವ ಸ್ಮಶಾನದಲ್ಲೇ ಆಯ್ತಂತೆ. ಇದನ್ನೆಲ್ಲ ವಿಭಾಗದಲ್ಲಿ ವಿವರವಾಗಿ ಕೊಟ್ಟಿದೆ. ಒಂದು ಸಲ ಒಬ್ಬರು ಕೈಲಾಸಂ ಅನ್ನು ಭಾಸ, ಕಾಳಿದಾಸ ಮೊದಲಾದವರೊಡನೆ ಹೋಲಿಸಿದಾಗ ಕೈಲಾಸಂ ಕೂಡಲೇ ಅವರನ್ನು ತಡೆದು "ಏಳೀಸಾಗರ ಎಷ್ಟೆತ್ತರ ಎಗರಿದ್ರೂ ನೂರೆ-ಹಳೇ ವಾಸುಕೀ ಹತ್ರ-ಬಿಟ್ಟ್ಯಾರ್ದ್ ಬಾಲಾನ!!!" ಎಂದು ಹೇಳಿದರಂತೆ. ಇದು ಇವರ ನಿರಹಂಕಾರ ಬುದ್ಧಿಯನ್ನು ತೋರಿಸುತ್ತದೆ. ಮೊದಲಿನಿಂದ ಕಡೆಯವರೆಗೂ ಪುಸ್ತಕವು ಎಲ್ಲರ ಮನಸ್ಸನ್ನು ಸೆಳೆಯುವಂತಿದೆ.

ಕನ್ನಡಿಗರಿಗೆ ಕೈಲಾಸಂ ಪರಿಚಯ ಮಾಡಿಕೊಟ್ಟು ಲೇಖಕರು ಬಹಳ ಉಪಕಾರ ಮಾಡಿದ್ದಾರೆ. ಸರಳ ಭಾಷೆಯಲ್ಲಿರುವುದರಿಂದ ಸಣ್ಣವರು ದೊಡ್ಡವರು ಎಲ್ಲರೂ ಸುಲಭವಾಗಿ ಅರ್ಥಮಾಡಿಕೊಳ್ಳ ಬಹುದು.

ಔದ್ಯೋಗಿಕ ಸಹಕಾರ

ಬರೆದವರು: ಶ್ರೀ ಎಸ್. ಕೆ. ಕಲ್ಲಾಪೂರ, ಪ್ರಕಾಶಕರು: ಶ್ರೀ. ಬೆಳಗಾವಿ ರಾಮಚಂದ್ರರಾಯರು, ಮನೋರಂಜನ ಪ್ರಕಾಶನ ಸಮಿತಿ, ಧಾರವಾಡ. ಪುಟಗಳು ೧೨೪ ಬೆಲೆ ಎರಡು ರೂಪಾಯಿ.

ಇದೊಂದು ಉದ್ಯೋಗ, ಕೈಗಾರಿಕೆಗಳಿಗೆ ಸಂಬಂಧಿಸಿದ ಪುಸ್ತಕ. ಇದರಲ್ಲಿ ಗಿರಣಿ ಕೈಗಾರಿಕೆ ಇವುಗಳ ವಿಷಯ ಸರಿಯಾಗಿ ಎಲ್ಲರಿಗೂ ತಿಳಿಯುವಂತೆ ಲೇಖಕರು ಸರಳವಾಗಿ ವಿಶದ ಪಡಿಸಿದ್ದಾರೆ. ಪುನಃ ಕೈಗಾರಿಕೆಗಳು ಹೇಗೆ ತಲೆ ಎತ್ತಬೇಕೆಂಬುದನ್ನು ಸೂಚಿಸಿದ್ದಾರೆ. ಸಣ್ಣ ಉದ್ಯೋಗದವರು ದೊಡ್ಡ ಉದ್ಯೋಗದವರೊಡನೆ ಸ್ಪರ್ಧೆ ಮಾಡುವದು ತಪ್ಪೆಂಬುದನ್ನು ಸ್ಪಷ್ಟವಾಗಿ ಇದರಲ್ಲಿ ಕಾಣಿಸಿದೆ. ಸಣ್ಣ ಕೈಗಾರಿಕೆಯವರಿಗೆ ಸರಕಾರದವರು ಯಾವ ರೀತಿಯಲ್ಲಿ ಸಹಾಯ ಮಾಡಿ ಕೈಗಾರಿಕೆಯು ಮುಂದರಿಯುವಂತೆ ಮಾಡಬೇಕೆಂದೂ ತಿಳಿಸಿದೆ. ಒಂದೊಂದೇ ವ್ಯಕ್ತಿಯು ಸಾಹಸ ಮಾಡುವದಕ್ಕಿಂತ, ನೇಕಾರಿಕೆ ಸಂಘಗಳು, ಉಣ್ಣೆಯ ಕೈಗಾರಿಕೆ ಸಂಘಗಳು, ಕತ್ತ ಮತ್ತು ನಾರಿನ ಸಂಘಗಳು ಮೊದಲಾದ ಇದೇ ರೀತಿಯ ಸಂಘಗಳನ್ನು ನಿರ್ಮಿಸಿಕೊಳ್ಳಬೇಕು. ಎಲ್ಲರೂ ಒಗ್ಗಟ್ಟಾಗಿ ಹೀಗೆ ಮಾಡಿದರೆ ಒಳ್ಳೆಯ ಕೀರ್ತಿಯೂ ಬರುತ್ತದೆ ಮತ್ತು ಕೈಗಾರಿಕೆಗಳೂ ಅಭಿವೃದ್ಧಿ ಹೊಂದುತ್ತವೆ. ಎಲ್ಲರೂ ಈ ಪುಸ್ತಕದಲ್ಲಿ ಹೇಳಿದಂತೆ ಒಗ್ಗಟ್ಟಾಗಿ ಕೆಲಸ ಮಾಡಿದರೆ ನಮ್ಮ ದೇಶವು ಮಾದರಿಯ ದೇಶವಾಗಬಹುದೆಂದು ಹೇಳಲು ಯಾವ ಆತಂಕವೂ ಇಲ್ಲ. ಎಷ್ಟು ಸಂಘಗಳಿಗಿರಬೇಕೆಂಬುದನ್ನೂ ಅವುಗಳ ಹೆಸರನ್ನೂ ತಿಳಿಸಿದ್ದಾರೆ. ಆ ಸಂಘಗಳನ್ನು ಹೇಗೆ ನಡೆಸಿಕೊಳ್ಳಬೇಕು? ಅವು ಯಾವರೀತಿ ಇರಬೇಕು, ಎಂಬೆಲ್ಲಾ ವಿಷಯಗಳು ಇದರಲ್ಲಿ ಅಡಕವಾಗಿದೆ. ಒಳ್ಳೆಯ ಆದರ್ಶ ಮಾರ್ಗವನ್ನು ಜನರ ಮುಂದಿಟ್ಟಿದ್ದಾರೆ. ಸಂಘಗಳ ಕೆಲಸಗಾರರು ಯಾವ ಉದ್ದೇಶದಿಂದ ಕೆಲಸ ಮಾಡಬೇಕು? ಎಂಬುದಲ್ಲದೆ ಹಾಗೆ ನಡೆದುಕೊಂಡಲ್ಲಿ ಕಡಿಮೆ ಖರ್ಚಿನಿಂದ ಜನರಿಗೆ ಅನುಕೂಲದಾಗುವದಲ್ಲದೆ, ಒಳ್ಳೆಯ ಶುದ್ಧವಾದ ವಸ್ತುಗಳೂ ಸಿಗುತ್ತವೆ. ೧೦೦ ಜನರು ದುಡಿದು ಒಬ್ಬನು ಲಾಭಪಡೆಯುವದು ತಪ್ಪಿ ಎಲ್ಲರಿಗೂ ಅವರವರ ಕೆಲಸಕ್ಕೆ ತಕ್ಕಂತೆ ಲಾಭವೂ ಅನುಕೂಲಗಳೂ ಸಿಗುತ್ತವೆಯೆಂಬುದನ್ನು ವಿವರವಾಗಿ ಬರೆದಿದ್ದಾರೆ. ಸಂಘಗಳಲ್ಲಿ ತಯಾರಾದ ಮಾಲುಗಳನ್ನು ಮಾರುವ ಕ್ರಮವೂ ವಿವರಿಸಲ್ಪಟ್ಟಿವೆ. ಲೇಖಕರ ಕಾರ್ಯವು ಪ್ರಶಂಸನೀಯವಾಗಿದೆಯೆನ್ನುವದಕ್ಕೆ ಯಾವ ಅಡ್ಡಿಯೂ ಇಲ್ಲ. ಜನರಿಗೆ ಉಪಯೋಗ ಬೀಳುವಂತಹ ಪುಸ್ತಕಗಳು ಇನ್ನೂ ಈ ಲೇಖಕರಿಂದ ಬರಲೆಂದು ಆಶಿಸುತ್ತೇವೆ.

ದಿವ್ಯ ಕತೆಗಳು

ಬರೆದವರು: ಶ್ರೀ ವಿ ಜಿ ಭಟ್ಟ ಎಂ. ಎ; ಪ್ರಕಾಶಕರು: ಮನೋರಂಜನ ಪ್ರಕಾಶನ ಸಮಿತಿ, ಧಾರವಾಡ. ಪುಟ ೪೨, ಬೆಲೆ ೮ ಆ.

"ದಿವ್ಯ ಕತೆಗಳ"ಲ್ಲಿ ದೇವರ ಬಗೆ, ಬಿಕ್ಕೆ, ಪತಿವ್ರತೆ, ಜಪತಪ, ಶಿಸ್ತು, ಅಧಿಕಪ್ರಸಂಗಿ, ರಾಮಾಯಣದಲ್ಲಿ ತಗಣೆ, ಶ್ರೀರಾಮಚಂದ್ರನ ಕಾಲಿನಲ್ಲಿ ಮುಳ್ಳು, ಮುಂತಾದ ೧೫ ಕತೆಗಳಿವೆ. ಇವುಗಳ ದಿವ್ಯತೆ ಇರುವದು ನಮ್ಮ ಪೌರಾಣಿಕ ಭಾವನೆಯಲ್ಲಿರುವ ಅಸಂಬದ್ಧ ನಂಬಿಗೆ ಮತ್ತು ಅಭಿಪ್ರಾಯಗಳನ್ನು ಸರಸವಾಗಿ ವಿಡಂಬಿಸುವದರಲ್ಲಿಯೇ. ನಮ್ಮ ಪುರಾಣಿಕರು ಅಜ್ಞರಿಗೆ ಸುಖ ಬೋಧವಾಗಲೆಂಬ ಸದುದ್ದೇಶದಿಂದ ಪುರಾಣಗಳನ್ನು ಬರೆದರೂ ಅವು ಕಾಲಗತಿಯಿಂದ ಸುಜ್ಞರನ್ನೂ ಪ್ರಜ್ಞೆಗೆಡಿಸುವಷ್ಟು ಪ್ರಬಲ ಪೂರ್ವಗ್ರಹಗಳೆನಿಸಿದ್ದು ನಮ್ಮೆಲ್ಲರ ದೈನಂದಿನ ಅನುಭವದಲ್ಲಿದೆ. ಎಂಥ ಬುದ್ಧಿವಂತ ಭಾರತೀಯನಾದರೂ ಹನುಮಂತನು ಮಂಗನೆಂದೇ ನಂಬುತ್ತಾನೆ. ಮಾಯಾಮೃಗ ವೃತ್ತಾಂತ ಅಕ್ಷರಶಃ ನಿಜವೆಂದೇ ತಿಳಿಯುತ್ತಾನೆ. ಈ ಬಾಲಿಶ ಬುದ್ಧಿ ನಮ್ಮಲ್ಲಿ ಬೆಳೆದು ದೃಢಗೊಂಡಿರುವುದು ಎಲ್ಲಿಗಾದರೂ ಹೊರಡುವ ಮುನ್ನ ಶಕುನವಾಗುವದರತ್ತ ಲಕ್ಷ್ಯ ಹಾಕುವ ಉದಾಹರಣೆಯೊಂದರಿಂದಲೇ ಸುಪ್ರತೀತವಾಗುತ್ತದೆ. ವೇದಾಧಿಕಾರವಿಲ್ಲದವರಿಗೆ ಪುರಾಣಗಳೇ ಧರ್ಮಬೋಧಸಾಧನಗಳೆಂದು ಮಾಡಿದರೂ ಸ್ವತಃ ವೇದಾಧಿಕಾರವುಳ್ಳವರೇ ವೇದಜ್ಞಾನರಹಿತರಾಗಿ ಪಾಮರರಾದುದಕ್ಕೆ ಕೋಟಿ ದೃಷ್ಟಾಂತಗಳಿವೆ.

ಜಗತ್ತಿನಲ್ಲಿ ದೇವರ ನ್ಯಾಯದ ದೃಷ್ಟಿ ಎಂತಿದೆ ಎಂಬುದನ್ನು ದೇವರ ಬಗೆ ಎಂಬ ಕತೆ ಮನೋಮೋಹಕವಾಗಿ ತಿಳಿಸುವುದು. "ಪತಿವ್ರತೆ"ಯಲ್ಲಿ ಜ್ಞಾನವಿಲ್ಲದ ಧರ್ಮಾತಿರೇಕ ಅಪಹಾಸ್ಯಕ್ಕೆ ಗುರಿಯಾಗುವುದನ್ನು ಕಾಣಬಹುದು. "ಜಪತಪ"ದಲ್ಲಿ ಲೀಲಾವಾದಿಗಳ, ಅವತಾರ ಭಕ್ತರ, ಕಪಟನಾಟಕ ಸೂತ್ರಧಾರನೆಂದು ದೇವರನ್ನು ಬಣ್ಣಿಸುವವರ ಮುಗ್ಧತೆಯನ್ನು ಬಯಲಿಗೆಳೆಯಲಾಗಿದೆ. "ಶಿಸ್ತಿ"ನಲ್ಲಿ "ಅತಿಸರ್ವತ್ರ ವರ್ಜಯೇತ್" ಎಂಬುದನ್ನು ಚೆನ್ನಾಗಿ ವ್ಯಂಜಿಸಿದೆ. "ಅಧಿಕಪ್ರಸಂಗಿ"ಯಲ್ಲೂ "ದೇವರ ಹೆಂಡತಿಯ ನಾಚಿಕೆಗೇಡಿ"ನಲ್ಲೂ ವಿಜ್ಞಾನಿಗಳ ವೈಜ್ಞಾನಿಕ ಬುದ್ಧಿಯ ಸಾಹಸ ಮತ್ತು ಕುರುಡು ಧಾರ್ಮಿಕರ ದಿವ್ಯದ ಕಲ್ಪನೆಯ ಟೊಳ್ಳು ಇವನ್ನು ಮನೋವಿಶ್ಲೇಷಣಾತ್ಮಕ ದೃಷ್ಟಿಯಿಂದ ಸರಸ ಹಾಸ್ಯಭರ ಸಂಗತಿಗಳಲ್ಲಿ ವಿವರಿಸಲಾಗಿದೆ. ಆದರ್ಶವಾದ ಶ್ರೀರಾಮಚಂದ್ರನ ಕುಟುಂಬದಲ್ಲಿ ಕೃತಕವಾಗಿ ಕಾಣುವಂತೆ ಮಹಾಕವಿಗಳು ಚಿತ್ರಿಸಿದ ಅಂಶಗಳನ್ನು "ರಾಮಾಯಣದಲ್ಲಿ ತಗಣೆ" ವಿಡಂಬಿಸಿ ನಮ್ಮ ಧೀಯನ್ನು ಪ್ರಚೋದಿಸುತ್ತದೆ. ಅಂಥ ಅಂಶಗಳು ಕವಿಸಮಯಗಳಂತೆ ಹಲವಾರಿದ್ದರೂ ತತ್ಸದೃಶವಾದ ಆದರೆ ತದ್ಭಿನ್ನವಾದ ಒಂದು ಅಂಶವನ್ನು ಕಲ್ಪಿಸಿ ಇಲ್ಲಿ ಅಂಥವುಗಳ ಉಪಹಾಸ್ಯತೆಯನ್ನು ತೋರಿಸಲಾಗಿದೆ. "ಶ್ರೀರಾಮಚಂದ್ರನ ಕಾಲಿನ ಮುಳ್ಳಿ"ನಲ್ಲಿ ಶಕುನ ಶ್ರದ್ಧೆಯನ್ನು ಟೀಕಿಸಿದೆ. ಭಟ್ಟರ ವಿಡಂಬನ ಚಾತುರ್ಯ ಆಗಲೇ ಅಜ್ಞಾದ ಅವರ "ಬುರುಕಿ" ಯ ರಸಿಕರಿಗೆ ವಿದಿತವಾಗಿದೆ. ಇಲ್ಲಿ ಅವರ ಆ ಪ್ರಥಮ ಶ್ರೇಣಿಯ ವಿಡಂಬನ ಶಕ್ತಿ ಅದೇ ನಿಶಿತತೆಯಿಂದ, ಅದೇ ನಗೆಯ ಸೊರೆಯಿಂದ ಹೊಸ ಹೊನಲಾಗಿ ಹರಿದಿದೆ. ಕನ್ನಡಕ್ಕೆ ಇಂಥ ಅವರ ನಿಬೋಧಕವಾದ ಪ್ರಬುದ್ಧ ಸಾಹಿತ್ಯಕೃತಿಗಳು ಎಷ್ಟಿದ್ದರೂ ಬೇಕು. "ನಹಿ ಜ್ಞಾನೇನ ಸದೃಶಂ" ಎಂಬುದರಲ್ಲಿ ಶ್ರದ್ಧೆಯುಳ್ಳವರೆಲ್ಲ ಭಟ್ಟರ ಸೇವೆಗೆ ಧನ್ಯವಾದಗಳನ್ನು ಅರ್ಪಿಸದಿರರು.

ಈ ಪತ್ರಿಕೆಯನ್ನು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟಿನ" ಪರವಾಗಿ ಹ. ರಾ. ಮೊಹರೆಯವರು ಮುದ್ರಿಸಿ ಪ್ರಕಟಿಸಿದರು.